ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 25 ಭಾನುವಾರ 2024

ಮೈಸೂರು ಮಿತ್ರ 45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 130 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಡಾ ನಿವೇಶನ ಹಗರಣ: ಕೋರ್ಟ್ ತೀರ್ಪು ಸಿದ್ದರಾಮಯ್ಯರಿಗೆ ವ್ಯತಿರಿಕ್ತವಾದರೆ

ಪರ್ಯಾಯ ನಾಯಕನ ಆಯ್ಕೆಗೆ ಕಾಂಗ್ರೆಸ್ ಪ್ರಕ್ರಿಯೆ

■ ಡಾ.ಪರಮೇಶ್ವರ್‌ಗೆ ಆದ್ಯತೆ ನೀಡುವ ಸಾಧ್ಯತೆ ■ ಡಿಸಿಎಂ ಡಿ.ಕೆ.ಶಿವಕುಮಾರ್ ವಿಚಾರದಲ್ಲಿ ಸಿದ್ದರಾಮಯ್ಯ ಬೆಂಬಲಿಗರ ಮುನಿಸಿನ ಭಯದ ಹಿನ್ನೆಲೆ ■ ಸಿಎಂ, ಡಿಸಿಎಂ ಜೊತೆಗೆ ದೆಹಲಿಗೆ ತೆರಳಿದ್ದ ಪರಮೇಶ್ವರ್‌ರೊಂದಿಗೆ ವರಿಷ್ಠರು ಪ್ರತ್ಯೇಕ ಮಾತುಕತೆ


ಜಿ.ಪರಮೇಶ್ವರ್


ಮುಖ್ಯಮಂತ್ರಿ ಸಿದ್ದರಾಮಯ್ಯ


ಡಿ.ಕೆ.ಶಿವಕುಮಾರ್

ಬೆಂಗಳೂರು, ಆ. 24(ಕೆಎಂಶಿ)– ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ವರಿಷ್ಠರು ಅಭಯ ನೀಡಿದ್ದರೂ ಮತ್ತೊಂದೆಡೆ ಪರ್ಯಾಯ ನಾಯಕತ್ವದ ಅನ್ವೇಷಣೆಯಲ್ಲೂ ಇದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನಗಳ ಹಂಚಿಕೆ ಹಗರಣ ಕುರಿತಂತೆ ರಾಜ್ಯ ಹೈಕೋರ್ಟ್ ಈ ತಿಂಗಳ 29ರಂದು ವಿಚಾರಣೆ ಮುಂದುವರೆಸಲಿದೆ.

ನ್ಯಾಯಾಲಯದ ತೀರ್ಪು ಮುಖ್ಯಮಂತ್ರಿಗೆ ವಿರುದ್ಧವಾದರೆ ಅಂತಹ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರ ಉಳಿಸಿಕೊಳ್ಳಲು ಪಕ್ಷದ ಶಾಸಕರ ವಿಶ್ವಾಸ ಹೊಂದಿರುವ ನಾಯಕನ ಆಯ್ಕೆಗೆ ಮುಂದಾಗಿದೆ. ಅಂತಹ ಸನ್ನಿವೇಶ ನಿರ್ಮಾಣವಾದರೆ, ಸಿದ್ದರಾಮಯ್ಯ ಅವರಿಗೂ ಒಪ್ಪಿಗೆ ಆಗಬಹುದಾದ ವ್ಯಕ್ತಿಯ ಅನ್ವೇಷಣೆ ನಡೆದಿದೆ. ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿಸಿಎಂ

■ 5ನೇ ಪುಟಕ್ಕೆ

ಸಿಎಂ ಹುದ್ದೆಗಾಗಿ ಕಾಂಗ್ರೆಸ್ ನಾಯಕರ ಮ್ಯೂಸಿಕಲ್ ಚೇರ್


ಆರ್.ಅಶೋಕ್

ಬೆಂಗಳೂರು, ಆ.24– ಸಿಎಂ ಕುರ್ಚಿಗಾಗಿ ಕಾಂಗ್ರೆಸ್ ನಾಯಕರಲ್ಲೇ ಮ್ಯೂಸಿಕಲ್ ಚೇರ್ ನಡೆಯುತ್ತಿದೆ. ಡಿ.ಕೆ. ಶಿವಕುಮಾರ್, ಡಾ. ಜಿ.ಪರಮೇಶ್ವರ್, ಮಲ್ಲಿಕಾರ್ಜುನ ಖರ್ಗೆ, ಎಂ.ಬಿ. ಪಾಟೀಲ್, ಸತೀಶ್ ಜಾರಕಿಹೊಳಿ, ಜಮೀರ್ ಅಹ್ಮದ್ ನಡುವೆ ಪೈಪೋಟಿ ನಡೆದಿದೆ. ಎಲ್ಲರೂ ದೆಹಲಿಗೆ ಓಡಾಡುತ್ತಿದ್ದಾರೆ ಎಂದು ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್ ವ್ಯಂಗ್ಯವಾಡಿದರು. ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಈ ಸರ್ಕಾರವನ್ನು ಕಿತ್ತೊಗೆಯುತ್ತೇವೆ ಎಂದು ಎಂದಿಗೂ ಹೇಳಿಲ್ಲ. ನಾವು ಯಾವುದೇ ಶಾಸಕರನ್ನು ಸಂಪರ್ಕಿಸಿಲ್ಲ ಅಥವಾ ಭೇಟಿ ಮಾಡಿಲ್ಲ. ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಒಳಜಗಳದ

■ 5ನೇ ಪುಟಕ್ಕೆ

ಗೃಹ ಆರೋಗ್ಯ ಯೋಜನೆಯಡಿ ಮುಂದಿನ ತಿಂಗಳಿಂದ

ಮನೆಯಲ್ಲೇ ಉಚಿತ ಚಿಕಿತ್ಸೆ ಜೊತೆಗೆ ಔಷಧಿ ಭಾಗ್ಯ



ಬೆಂಗಳೂರು, ಆ.24–ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ 'ಗೃಹ ಆರೋಗ್ಯ' ಯೋಜನೆ ಜಾರಿ ಮಾಡಲು ಆರೋಗ್ಯ ಇಲಾಖೆ ಮುಂದಾಗಿದೆ. ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಕೂಡ ಸಲ್ಲಿಕೆ ಮಾಡಲಾಗಿದ್ದು, ಸಚಿವ ಸಂಪುಟದಲ್ಲಿ ಈಗಾಗಲೇ ಅನುಮೋದನೆ ದೊರೆತಿದೆ. ಮುಂದಿನ ತಿಂಗಳಿನಿಂದ 'ಗೃಹ ಆರೋಗ್ಯ' ಯೋಜನೆ ಜಾರಿಯಾಗಲಿದೆ.

ಕೋವಿಡ್ ಬಳಿಕ ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಒಂದಲ್ಲ ಒಂದು ವೈರಸ್ ಹಾವಳಿ ಶುರುವಾಗಿದ್ದು, ಜನರ ಜೀವ ತೆಗೆಯುತ್ತಿವೆ. ಅದರಲ್ಲೂ ಕೋಮಾರ್ಬಿಟಿಸ್ ರೋಗಿಗಳು ಸಾಂಕ್ರಾಮಿಕ ಖಾಯಿಲೆಗಳಿಂದ ಪರದಾಡುವಂತಾಗಿದೆ. ಜನರ ಆರೋಗ್ಯದ ಸಮಸ್ಯೆಗಳು ಹೆಚ್ಚಾಗುತ್ತಿವೆ. ಆರೋಗ್ಯ ಇಲಾಖೆಯು ಬಿಪಿ, ಶುಗರ್, ಕ್ಯಾನ್ಸರ್ ಜೊತೆಗೆ ಕೋಮಾರ್ಬಿಟಿಸ್ ಹೊಂದಿರುವ ರೋಗಿಗಳ ಪಟ್ಟಿ ಮಾಡಿದ್ದು ಇವರಿಗೆಲ್ಲ ಮನೆ ಬಾಗಿಲಿನಲ್ಲಿಯೇ ಚಿಕಿತ್ಸೆ ಹಾಗೂ ಔಷಧ ನೀಡುವ ಯೋಜನೆಗೆ ಆರೋಗ್ಯ ಇಲಾಖೆ ಮುಂದಾಗಿದೆ.

ಯಾರಿಗೆಲ್ಲ ಮನೆಯಲ್ಲೇ ಚಿಕಿತ್ಸೆ?: ಹೃದಯ, ಕಿಡ್ನಿ, ಕ್ಯಾನ್ಸರ್, ಬಿಪಿ, ಮಧುಮೇಹ, ಇಸಿಜಿ ಸೇರಿದಂತೆ ಎಲ್ಲಾ ರೀತಿಯ ಆರೋಗ್ಯ ತಪಾಸಣೆ ನಡೆಸಿ, ಆಯ್ದ ಸಮಸ್ಯೆಗಳಿಗೆ ಅಗತ್ಯವಿರುವಷ್ಟು ಔಷಧಗಳನ್ನು ಸ್ಥಳದಲ್ಲೇ ಉಚಿತವಾಗಿ ನೀಡಲು ಇಲಾಖೆ ಮುಂದಾಗಿದೆ. ಮುಂದಿನ ತಿಂಗಳಿನಿಂದ ರಾಜ್ಯದ ಜನರಿಗೆ ಮನೆ ಮನೆಗೆ ಕ್ಲಿನಿಕ್ ಸೇವೆ ನೀಡಲು ಇಲಾಖೆ ಯೋಜನೆ ಹಾಕಿಕೊಂಡಿದೆ. ಚಿಕಿತ್ಸೆ ಜೊತೆಗೆ ಉಚಿತ ಔಷಧಿಯೂ ಮನೆ ಬಾಗಿಲಿಗೆ ಬರಲಿದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಗೃಹ ಆರೋಗ್ಯ ಯೋಜನೆ ಜಾರಿ ತರಲು ಆರೋಗ್ಯ ಇಲಾಖೆ ಚಿಂತನೆ ನಡೆಸಿದೆ. ಮುಂದಿನ ತಿಂಗಳು ಗೃಹ ಆರೋಗ್ಯ ಯೋಜನೆ ಜಾರಿಯಾಗಲಿದೆ ಎಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗೂಂಡುರಾವ್ ತಿಳಿಸಿದ್ದಾರೆ.

ಪ್ರತ್ಯೇಕ ಘಟಕ, ವೈದ್ಯರ ನೇಮಕಾತಿ: 'ಗೃಹ ಆರೋಗ್ಯ' ಯೋಜನೆ ಜಾರಿಗೆಂದೇ ಮೊಬೈಲ್ ಯೂನಿಟ್, ಪ್ರತ್ಯೇಕ ಸಿಬ್ಬಂದಿ, ವೈದ್ಯರ ನೇಮಕಾತಿಗೆ ಇಲಾಖೆ ಮುಂದಾಗಿದೆ. ಆರಂಭದಲ್ಲಿಯೇ ಖಾಯಿಲೆ ಪತ್ತೆ ಹಚ್ಚಿ ಚಿಕಿತ್ಸೆ ನೀಡುವ ಮೂಲಕ ಬಡ ಜನರ ಸಾವಿನ ಪ್ರಮಾಣ ಕಡಿಮೆ ಮಾಡಿ ಉತ್ತಮ ಆರೋಗ್ಯ ಇರುವಂತೆ ನೋಡಿಕೊಳ್ಳುವ ಉದ್ದೇಶದಿಂದ ಈ ಯೋಜನೆಗೆ ಜಾರಿಗೆ ಇಲಾಖೆ ಮುಂದಾಗಿದೆ.

ಸಿವಿಲ್ ಇಂಜಿನಿಯರ್ ಹುದ್ದೆ ನೇಮಕಾತಿ ಪರೀಕ್ಷೆ ತಾತ್ಕಾಲಿಕ ಅಂಕಪಟ್ಟಿ ಪ್ರಕಟ

ಬೆಂಗಳೂರು, ಆ.24(ಕೆಎಂಶಿ)– ಕೆಯುಡಬ್ಲ್ಯೂಎಸ್‌ಡಿಬಿನಲ್ಲಿ ಖಾಲಿ ಇರುವ 50 ಸಹಾಯಕ ಇಂಜಿನಿಯರ್ (ಸಿವಿಲ್) ಹುದ್ದೆಗಳಿಗೆ ಈ ತಿಂಗಳ 11ರಂದು ನಡೆದ ಸ್ಪರ್ಧಾತ್ಮಕ ಪರೀಕ್ಷೆಯ ಅಂತಿಮ ಕೀ ಉತ್ತರಗಳು ಹಾಗೂ ಅಭ್ಯರ್ಥಿಗಳು ಗಳಿಸಿರುವ ಅಂಕಗಳ ತಾತ್ಕಾಲಿಕ ಅಂಕಪಟ್ಟಿಯನ್ನು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು, ಆಕ್ಷೇಪಣೆಗಳಿದ್ದಲ್ಲಿ ಈ ತಿಂಗಳ 27ರೊಳಗೆ ಸಲ್ಲಿಸಲು ಸೂಚಿಸಲಾಗಿದೆ.

ಈ ಸಂಬಂಧ ಪ್ರಕಟಣೆ ನೀಡಿರುವ ಕೆಇಎ, ಆ.23ರಂದು ತಾತ್ಕಾಲಿಕ ಅಂಕಪಟ್ಟಿಯನ್ನು ಪ್ರಕಟಿಸಲಾಗಿದ್ದು, ಆಕ್ಷೇಪಣೆಗಳನ್ನು ಈ ತಿಂಗಳ 27ರ ಸಂಜೆ 5–30ರೊಳಗೆ ಪೂರಕ ದಾಖಲೆಗಳೊಂದಿಗೆ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಮೂಲಕ ಮಾತ್ರ ಸಲ್ಲಿಸಬಹುದಾಗಿದೆ ಎಂದು ತಿಳಿಸಿದೆ. ಅಂಚೆ/ಪತ್ರ ಅಥವಾ ಇ–ಮೇಲ್ ಮೂಲಕ ಸಲ್ಲಿಸುವ ಅಥವಾ ಪೂರಕ ದಾಖಲೆಗಳಿಲ್ಲದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಕೆಇಎ ಸ್ಪಷ್ಟಪಡಿಸಿದೆ.

ಮೈಸೂರು ದಸರಾ ಮಹೋತ್ಸವ ಗಜಪಡೆ ಪರಿಚಯ

■ ಪುಟ–9

ಕೇಂದ್ರ ಸರ್ಕಾರಿ ನೌಕರರಿಗೆ ಎನ್‌ಪಿಎಸ್ ಬದಲಿಗೆ ಯುಪಿಎಸ್ ಯೋಜನೆ

ನವದೆಹಲಿ, ಆ.24– ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಇಂದು ನಡೆದ ಕೇಂದ್ರ ಸಚಿವ ಸಂಪುಟ ಹೊಸ ಪಿಂಚಣಿ ಯೋಜನೆ 'ಏಕೀಕೃತ ಪಿಂಚಣಿ ಯೋಜನೆ'ಗೆ (ಯುಪಿಎಸ್) ಅನುಮೋದನೆ ನೀಡಿದೆ. ಇದಲ್ಲದೇ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ (ಡಿಎಸ್‌ಟಿ) ಸಮಗ್ರ ಕೇಂದ್ರ ವಲಯದ 'ವಿಜ್ಞಾನ ಧಾರಾ' ಯೋಜನೆಗೆ ವಿಲೀನಗೊಂಡಿರುವ ಮೂರು ಪ್ರಮುಖ ಯೋಜನೆಗಳ ಮುಂದುವರಿಕೆಗೆ ಸರ್ಕಾರ ಅನುಮೋದನೆ ನೀಡಿದೆ. ಸರ್ಕಾರಿ ನೌಕರರು ಯುಪಿಎಸ್ ಪಿಂಚಣಿ ಯೋಜನೆಯ ಲಾಭವನ್ನು ಪಡೆಯುತ್ತಾರೆ.

ಮೋದಿ ಸರ್ಕಾರ ನೌಕರರಿಗೆ ಹೊಸ ಪಿಂಚಣಿ ನೀತಿಯನ್ನು ಪ್ರಕಟಿಸಿದೆ. ಹೊಸ ಪಿಂಚಣಿ ನೀತಿಯ ಹೆಸರು



ಏಕೀಕೃತ ಪಿಂಚಣಿ ಯೋಜನೆ ಅಥವಾ UPS. ಇದರ ಅಡಿಯಲ್ಲಿ, ಒಬ್ಬ ಉದ್ಯೋಗಿಯು ಕನಿಷ್ಠ 25 ವರ್ಷಗಳ ಕಾಲ ಕೆಲಸ ಮಾಡಿದ್ದರೆ, ನಿವೃತ್ತಿಯ ಹಿಂದಿನ 12 ತಿಂಗಳುಗಳ ಸರಾಸರಿ ವೇತನದ ಕನಿಷ್ಠ 50 ಪ್ರತಿಶತವನ್ನು ಪಿಂಚಣಿಯಾಗಿ ಪಡೆಯುತ್ತಾನೆ.

ಕೇಂದ್ರ ಸರ್ಕಾರದ ನೂತನ ಪಿಂಚಣಿ ನೀತಿ: ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಮಾತನಾಡಿ, ಇಂದು ಕೇಂದ್ರ ಸಚಿವ ಸಂಪುಟವು ಸರ್ಕಾರಿ ನೌಕರರಿಗೆ ಏಕೀಕೃತ ಪಿಂಚಣಿ ಯೋಜನೆಗೆ (UPS) ಅನುಮೋದನೆ ನೀಡಿದೆ. ಶೇಕಡ 50ರಷ್ಟು ಖಚಿತವಾದ ಪಿಂಚಣಿ ಯೋಜನೆಯ ಮೊದಲ ಆಧಾರವಾಗಿದೆ. ಎರಡನೇ ಆಧಾರವು ಖಚಿತವಾದ ಕುಟುಂಬ ಪಿಂಚಣಿಯಾಗಿದೆ. ಸರಿಸುಮಾರು 23 ಲಕ್ಷ ಕೇಂದ್ರ ಸರ್ಕಾರಿ ನೌಕರರಿಗೆ ಪಿಂಚಣಿ ಲಭ್ಯವಿರುತ್ತದೆ.

ಹೊಸ ಪಿಂಚಣಿ ನೀತಿ

- ಒಬ್ಬ ಪಿಂಚಣಿದಾರನು ಮರಣ ಹೊಂದಿದರೆ, ಅವನ ಕುಟುಂಬವು ಮರಣದ ಸಮಯದಲ್ಲಿ ಪಡೆದ ಪಿಂಚಣಿಯ ಶೇಕಡಾ 60ರಷ್ಟು ಪಡೆಯುತ್ತದೆ.
- 10 ವರ್ಷಗಳ ನಂತರ ಕೆಲಸ ಬಿಟ್ಟರೆ 10,000 ರೂಪಾಯಿ ಪಿಂಚಣಿ ಸಿಗುತ್ತದೆ.
- ಹಣದುಬ್ಬರ ಸೂಚ್ಯಂಕದ ಲಾಭವನ್ನು ನೀವು ಪಡೆಯುತ್ತೀರಿ.

■ 6ನೇ ಪುಟಕ್ಕೆ

ಕೆಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ಮುಂದೂಡಲು ಆಗ್ರಹ

ಶೂ ಪಾಲಿಶ್ ಮಾಡುವ ಮೂಲಕ ಪ್ರತಿಭಟನೆ

ಬೆಂಗಳೂರು, ಆ.24– ಕರ್ನಾಟಕ ಲೋಕಸೇವಾ ಆಯೋಗದಿಂದ (ಕೆಪಿಎಸ್‌ಸಿ) ಆ.27ರಂದು ನಿಗದಿ ಆಗಿರುವ ಪೂರ್ವಭಾವಿ ಪರೀಕ್ಷೆಯನ್ನು ಮುಂದೂಡುವಂತೆ ಆಗ್ರಹಿಸಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ನೇತೃತ್ವದಲ್ಲಿ ಉದ್ಯೋಗ ಆಕಾಂಕ್ಷಿಗಳು ಪ್ರತಿಭಟನೆ ನಡೆಸಿದರು. ರಾಜ್ಯದ ವಿವಿಧ ಜಿಲ್ಲೆಗಳಿಂದ ಕೆಪಿಎಸ್‌ಸಿ ಹುದ್ದೆಗಳ ಆಕಾಂಕ್ಷಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸರ್ಕಾರ ಹಾಗೂ ಕೆಪಿಎಸ್‌ಸಿ ವಿರುದ್ಧ ಆಕ್ರೋಶ ಹೊರಹಾಕಿ ಘೋಷಣೆ ಕೂಗಿದರು. ಹಲವು ವರ್ಷದಿಂದ ಕಷ್ಟಪಟ್ಟು ಅಭ್ಯಾಸ ನಡೆಸಿದ್ದವರನ್ನು, ಸರ್ಕಾರವೇ ನಿರುದ್ಯೋಗಿಗಳನ್ನಾಗಿ ಮಾಡಲು ಮುಂದಾಗಿದೆ ಎಂದು ಆಕ್ರೋಶ ಹೊರಹಾಕಿದರು. ಶೂ ಪಾಲಿಶ್ ಮಾಡುವ ವಿನೂತನವಾಗಿ ಪ್ರತಿಭಟನೆ ನಡೆಸಿದರು. ಸಾಮಾನ್ಯವಾಗಿ ಭಾನುವಾರ ಪರೀಕ್ಷೆ ನಡೆಸಬೇಕು. ಆದರೆ, ವಾರದ ಮಧ್ಯದಲ್ಲಿ ಪರೀಕ್ಷೆ ನಡೆಸಿ ಅವಕಾಶ ವಂಚಿತರನ್ನಾಗಿ ಮಾಡಲಾಗುತ್ತಿದೆ ಎಂದು ಪ್ರತಿಭಟನಾಕಾರರು ನೋವು ತೋಡಿಕೊಂಡರು. ಆಗಸ್ಟ್ 27ರಂದು ಯುಜಿಸಿಯ ನೆಟ್ ಪರೀಕ್ಷೆಯೂ ನಡೆಯುತ್ತಿದೆ. ಅಂದೇ ಕೆಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ನಿಗದಿಯಾಗಿದೆ. ಎರಡೂ ಪರೀಕ್ಷೆ ತೆಗೆದುಕೊಂಡವರು

> “ಕೆಪಿಎಸ್‌ಸಿ ಪೂರ್ವಭಾವಿ ಪರೀಕ್ಷೆಯ ದಿನಾಂಕವನ್ನು ಮುಂದೂಡಲು ಸಾಧ್ಯವಿಲ್ಲ. ಕೃಷ್ಣ ಜನ್ಮಾಷ್ಟಮಿಯಂದು ಇರುವ ಪರೀಕ್ಷೆಯ ದಿನಾಂಕವನ್ನು ಬದಲಾಯಿಸಲಾಗಿದೆ.
> – ಸಿದ್ದರಾಮಯ್ಯ, ಮುಖ್ಯಮಂತ್ರಿ

■ 6ನೇ ಪುಟಕ್ಕೆ

ಬಗೆದಷ್ಟೂ ಬಯಲಾಗುತ್ತಿದೆ ಮುಡಾ ನಿವೇಶನ ಹಗರಣ: ದೇವನೂರು ಗ್ರಾಮದ ಜಮೀನಿಗೆ ಪರಿಹಾರವಾಗಿ ಮೆ॥ ಕ್ಯಾಥಡ್ರಲ್ ಪ್ಯಾರಿಸ್ ಸೊಸೈಟಿಗೆ

ಆರ್‌ಟಿ ನಗರದಲ್ಲಿ 25 ನಿವೇಶನ ಮಂಜೂರು

ರಿಂಗ್ ರಸ್ತೆಗೆ ಬಳಸಿಕೊಂಡಿದ್ದ ಭೂಮಿಗೆ ಅಭಿವೃದ್ಧಿಪಡಿಸಿದ ಬಡಾವಣೆಗಳಲ್ಲಿ ಕೋಟ್ಯಾಂತರ ರೂ. ಬೆಲೆ ಬಾಳುವ 54,994 ಚದರಡಿ ವಿಸ್ತೀರ್ಣದ ನಿವೇಶನ ಮಂಜೂರು


ಎಸ್.ಟಿ.ರವಿಕುಮಾರ್

ಮೈಸೂರು, ಆ. 24– ಇಡೀ ದೇಶದಲ್ಲೇ ಸದ್ದು ಮಾಡುತ್ತಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ನಿವೇಶನ ಹಂಚಿಕೆ ಹಗರಣ ಬಗೆದಷ್ಟೂ ಬಯಲಾಗುತ್ತಿದ್ದು, ಹಲವು ವರ್ಷಗಳ ಹಿಂದೆ (ಕೆಲ ಪ್ರಕರಣಗಳಲ್ಲಿ 50–60 ವರ್ಷದ ಹಿಂದೆ) ಭೂ ಸ್ವಾಧೀನಪಡಿಸಿಕೊಳ್ಳದೇ ಖಾಸಗಿ ಜಮೀನನ್ನು ಮುಡಾ ಅಭಿವೃದ್ಧಿಪಡಿಸಿದೆ ಎಂಬ ಕಾರಣ ನೀಡಿ, ಇದೀಗ ಭೂ ಮಾಲೀಕರಿಗೆ ಕೋಟ್ಯಾಂತರ ರೂ. ಮೌಲ್ಯದ ನಿವೇಶನಗಳನ್ನು ನೀಡಿರುವ ಪ್ರಕರಣಗಳು ಒಂದರ ಹಿಂದೆ ಒಂದರಂತೆ ಬಯಲಾಗುತ್ತಿದೆ.

ಬಡಾವಣೆ ಹಾಗೂ ರಿಂಗ್ ರಸ್ತೆ ನಿರ್ಮಾಣಕ್ಕಾಗಿ ಕೆಲ ವರ್ಷಗಳ ಹಿಂದೆ 5.02 ಎಕರೆ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳದೇ, ಭೂ ಮಾಲೀಕರಿಗೆ ಪರಿಹಾರವನ್ನೂ ನೀಡದೇ ಉಪಯೋಗಿಸಿಕೊಳ್ಳಲಾಗಿದೆ ಎಂಬ ಕಾರಣ ನೀಡಿ, ಸಂಸ್ಥೆಯೊಂದಕ್ಕೆ ಕೋಟ್ಯಾಂತರ ರೂ. ಮೌಲ್ಯದ 25 ನಿವೇಶನಗಳನ್ನು ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಮುಡಾದಿಂದ ಮಂಜೂರು ಮಾಡಿರುವುದು ಬೆಳಕಿಗೆ ಬಂದಿದೆ.

ವಿವರ: ಮೈಸೂರಿನ ಲಷ್ಕರ್ ಮೊಹಲ್ಲಾ ಬಿ.ಎನ್. ರಸ್ತೆಯಲ್ಲಿರುವ ಮದರ್ ಥೆರೇಸಾ ರಸ್ತೆಯ ಮೆ॥ ಕ್ಯಾಥಡ್ರಲ್ ಪ್ಯಾರಿಸ್ ಸೊಸೈಟಿ (ರಿ)ಯನ್ನು ಪ್ರತಿನಿಧಿಸುವ ಕಾರ್ಯದರ್ಶಿ ರೆವರೆಂಡ್ ಫಾದರ್ ಸ್ಟ್ಯಾನ್ಲಿ ಡಿ. ಅಲಮೇಡಾ ಎಂಬುವರ ಹೆಸರಿಗೆ 2023ರ ಸೆ. 1ರಂದು ಕೋಟ್ಯಾಂತರ ರೂ. ಬೆಲೆ ಬಾಳುವ 54,994 ಚದರಡಿ ವಿಸ್ತೀರ್ಣದ ಬರೋಬ್ಬರಿ 25 ನಿವೇಶನಗಳನ್ನು

■ 5ನೇ ಪುಟಕ್ಕೆ



2161 ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಜಮೀನು ಕಳೆದುಕೊಂಡವರಿಗೆ ಭೂಪರಿಹಾರ ರೂಪದಲ್ಲಿ ನೀಡುವ ನಿವೇಶನ ಮಂಜೂರಾತಿ ಪತ್ರ

ಮಂಜೂರಾತಿ ದಿನಾಂಕ:01.09.2023

ಮೇ॥ ಕ್ಯಾಥೆಡ್ರಲ್ ಪ್ಯಾರಿಸ್ ಸೊಸೈಟಿ(ರಿ),
ಸಂ.29/39, ಮದರ್ ಥೆರೇಸಾ ರಸ್ತೆ,
ಬಿ.ಎನ್.ರಸ್ತೆ, ಲಷ್ಕರ್ ಮೊಹಲ್ಲಾ,
ಮೈಸೂರು.

1.	ಜಮೀನು ಕಳೆದುಕೊಂಡ ಭೂಮಾಲೀಕರ ಹೆಸರು	ಮೇ॥ಕ್ಯಾಥೆಡ್ರಲ್ ಪ್ಯಾರಿಸ್ ಸೊಸೈಟಿ (ರಿ)
2.	ಜಮೀನು ಬಿಟ್ಟುಕೊಟ್ಟ ಗ್ರಾಮ	ದೇವನೂರು ಗ್ರಾಮ
3.	ಕಳೆದುಕೊಂಡ ಜಮೀನಿನ ಸರ್ವೆ ನಂ. & ವಿಸ್ತೀರ್ಣ	ಸರ್ವೆ ನಂಬರ್–180ರಲ್ಲಿ 5–02 ಎಕರೆ
4.	ಮಂಜೂರಾದ ನಿವೇಶನದ ಸಂಖ್ಯೆ	16
5.	ನಿವೇಶನ ಮಂಜೂರಾದ ಬಡಾವಣೆ ಮತ್ತು ಬ್ಲಾಕ್	ಆರ್.ಟಿ.ನಗರ
6.	ನಿವೇಶನದ ಅಳತೆ	9.00 x 12.00 ಮೀಟರ್
7.	ನಿವೇಶನದ ಬಾಬ್ತು	ಶೇಕಡ 50:50ರ ಅನುಪಾತದಲ್ಲಿ ಬದಲಿ ನಿವೇಶನ

Secretary
Cathedral Parish Society
St. Joseph's Cathedral
Mysore-570 001

ಆಯುಕ್ತರು
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ,
ಮೈಸೂರು.

ನಿವೇಶನ ಮಂಜೂರಾತಿ ಪತ್ರ

ಮುಡಾ ಕಚೇರಿಗೆ ದಿನದ 24 ಗಂಟೆಯೂ ಭದ್ರತೆ!



ಮೈಸೂರು, ಆ.24(ಆರ್‌ಕೆ)–ಶೇ.50:50 ಅನುಪಾತದಡಿ ಸಾವಿರಾರು ಕೋಟಿ ರೂ. ಮೌಲ್ಯದ ನಿವೇಶನಗಳನ್ನು ನಿಯಮಬಾಹಿರವಾಗಿ ಮಂಜೂರು ಮಾಡಿರುವ ಹಗರಣದ ಹಿನ್ನೆಲೆಯಲ್ಲಿ ಕಾನೂನು–ಸುವ್ಯವಸ್ಥೆಗೆ ಭಂಗ ಉಂಟಾಗದಂತೆ ಮುಂಜಾಗ್ರತೆಯಾಗಿ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮುಡಾ ಕಚೇರಿಗೆ ಭಾರಿ ಪೊಲೀಸ್ ಭದ್ರತೆ ಒದಗಿಸಲಾಗಿದೆ.

ರಿಯಲ್ ಎಸ್ಟೇಟ್ ಉದ್ಯಮಿಗಳು, ಬ್ರೋಕರ್‌ಗಳು, ಏಜೆಂಟರುಗಳ ಅಡ್ಡವಾಗಿ ಸದಾ ಜನಜಂಗುಳಿಯಿಂದ ಗಿಜಿಗುಡುತ್ತಿದ್ದ ಮುಡಾ ಕಚೇರಿ, ಬ್ರಹ್ಮಾಂಡ ಭ್ರಷ್ಟಾಚಾರ ಬಹಿರಂಗಗೊಂಡ ನಂತರ ದೈನಂದಿನ ಕೆಲಸ ಕಾರ್ಯಗಳಿಲ್ಲದೇ ಬಿಕೋ ಎನ್ನುತ್ತಿದೆ. ಆದರೂ ಯಾವುದೇ ಸಂದರ್ಭದಲ್ಲಿ ಮುತ್ತಿಗೆ,

■ 5ನೇ ಪುಟಕ್ಕೆ

ಮೈಸೂರು ಮಿತ್ರ ಭಾನುವಾರ 25 ಆಗಸ್ಟ್ 2024

ವಿದ್ಯಾವಂತರಲ್ಲೇ ಜಾತಿವಾದಿಗಳಿರುವುದು ದುರಂತ

● ಮುಖ್ಯಮಂತ್ರಿ ಸಿದ್ದರಾಮಯ್ಯ ವಿಷಾದ ● '21ನೇ ಶತಮಾನಕ್ಕೆ ಮಹಾತ್ಮ ಗಾಂಧೀಜಿ' ಅಂತರರಾಷ್ಟ್ರೀಯ ವಿಚಾರ ಸಂಕಿರಣ

ಬೆಂಗಳೂರು,ಆ.24(ಕೆಎಂಶಿ)– ಧರ್ಮ, ಜಾತಿ ಹೆಸರಿನಲ್ಲಿ ಸಮಾಜ ಒಡೆಯುತ್ತಾ ಹೋದಂತೆ ಅಸಮಾನತೆ ಹೆಚ್ಚುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

'21ನೇ ಶತಮಾನಕ್ಕೆ ಮಹಾತ್ಮ ಗಾಂಧೀಜಿ' ವಿಷಯ ಕುರಿತ ಅಂತಾರಾಷ್ಟ್ರೀಯ ವಿಚಾರಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಜಾತಿ ವ್ಯವಸ್ಥೆಯಿಂದಾಗಿ ಬಹಳಷ್ಟು ಜನರು ಶಿಕ್ಷಣದಿಂದ ವಂಚಿತರಾದರು. ಇದರ ಪರಿಣಾಮ ಅಸಮಾನತೆ ಹೆಚ್ಚಾಯಿತು. ವಿದ್ಯಾವಂತರಲ್ಲೇ ಹೆಚ್ಚು ಜಾತಿವಾದಿಗಳು ಕಂಡುಬರುತ್ತಿರುವುದು ದುರಂತ, ಜಾತಿ ಅಸಮಾನತೆಯನ್ನು ಪೋಷಿಸುವವರೇ ಮಹಾತ್ಮ ಗಾಂಧಿ ಅವರನ್ನು ಕೊಂದರು ಎಂದರು.



'21ನೇ ಶತಮಾನಕ್ಕೆ ಮಹಾತ್ಮ ಗಾಂಧೀಜಿ' ವಿಷಯ ಕುರಿತ ಅಂತಾರಾಷ್ಟ್ರೀಯ ವಿಚಾರಸಂಕಿರಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಗಾಂಧೀಜಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ, ನಮಿಸಿದರು.

ಗಾಂಧೀಜಿ ವಿಚಾರಗಳು, ಸಮಾಜಕ್ಕೆ ನೀಡಿದ ಮಾರ್ಗದರ್ಶನಗಳು 20ನೇ ಶತಮಾನಕ್ಕೆ ಮಾತ್ರ ಸೀಮಿತವಾಗಿರದೆ, ಎಲ್ಲ ಕಾಲಕ್ಕೂ ಪ್ರಸ್ತುತವಾಗಿವೆ. ಬದುಕಿನುದ್ದಕ್ಕೂ ಶಾಂತಿ, ಸತ್ಯ, ನ್ಯಾಯ ಮತ್ತು ಭ್ರಾತೃತ್ವ ಆಚರಿಸಿಕೊಂಡು ಬಂದಿದ್ದಾರೆ, ಪರಸ್ಪರ ಪ್ರೀತಿಸುವ ಗುಣವನ್ನು ಇಡೀ ವಿಶ್ವ ರೂಢಿಸಿಕೊಂಡರೆ, ಸಮಾಜ ನೆಮ್ಮದಿಯಿಂದ ಇರಬಹುದು. ತನ್ನ ನೆಮ್ಮದಿಗಾಗಿ ಮನುಷ್ಯ ಬೇರೆ ಗ್ರಹಗಳನ್ನು ಹುಡುಕಿಕೊಂಡು ಹೋಗುವಂತಾಗಬಾರದು ಎಂಬ ಸ್ಟೀಫನ್ ಹಾಕಿಂಗ್ ವಾಕ್ಯವನ್ನು ಪ್ರಸ್ತಾಪಿಸಿದ ಮುಖ್ಯಮಂತ್ರಿ, ಮನುಷ್ಯ–ಮನುಷ್ಯರ ನಡುವೆ ಸಹಿಷ್ಣುತೆ ರೂಢಿಸಿಕೊಳ್ಳದಿದ್ದರೆ ಸರ್ವನಾಶ ಖಂಡಿತ, ಕೋಮು ಭಾವನೆ ಮುಂದುವರಿದರೆ ಕುವೆಂಪು ಅವರ ವಿಶ್ವಮಾನವ ಆಶಯ ಈಡೇರುವುದು ಕಷ್ಟವಾಗುತ್ತದೆ. ಪ್ರಕೃತಿ ನಮ್ಮ ಅಗತ್ಯಗಳನ್ನು ಈಡೇರಿ ಸುತ್ತದೆಯೇ ಹೊರತು, ದುರಾಸೆಗಳನ್ನು ಪೂರೈಸುವುದಿಲ್ಲ ಎಂಬುದು ಗಾಂಧಿ ಅವರ ನಂಬಿಕೆಯಾಗಿತ್ತು, ಕೇರಳದ ವಯನಾಡು ಮತ್ತು ಕರ್ನಾಟಕದ ವಿವಿಧೆಡೆ ಸಂಭವಿಸುತ್ತಿರುವ ಪರಿಸರ ಅವಘಡಗಳಿಗೆ ಮನುಷ್ಯನ ದುರಾಸೆಗಳೇ ಕಾರಣ. ಸಿದ್ದರಾಮಯ್ಯ ಮುಖ್ಯಮಂತ್ರಿಯಾದರೆ ರಾಜ್ಯಕ್ಕೆ ಬರಗಾಲ ಬರುತ್ತದೆ ಎಂದು ಸಾರ್ವಜನಿಕ ವ್ಯಕ್ತಿಗಳೇ ಮೌಢ್ಯ ಬಿತ್ತುವ ಕುಟಿಲ ಪ್ರಯತ್ನ ಮಾಡಿದ್ದರು, ಆದರೆ ಈಗ ಯಥೇಚ್ಛ ಮಳೆ ಆಗುತ್ತಿದೆ.

ಬಹಳ ಮಂದಿ ಶಿಕ್ಷಿತರೇ ಕಂದಾಚಾರ, ಕರ್ಮ ಸಿದ್ಧಾಂತ, ಮೌಢ್ಯ ಆಚರಿಸುತ್ತಾರೆ. ಇದಕ್ಕೆ ವೈಜ್ಞಾನಿಕ ಶಿಕ್ಷಣದ ಕೊರತೆಯೇ ಕಾರಣ, 850 ವರ್ಷಗಳ ಹಿಂದೆ ಬಸವಾದಿ ಶರಣರು ಕರ್ಮ ಸಿದ್ಧಾಂತವನ್ನು ಸಾರಾಸಗಟಾಗಿ ತಿರಸ್ಕರಿಸಿದ್ದರು, ಆದರೆ ಇಂದು ಕೆಲವು ಶಿಕ್ಷಿತರೇ ಕರ್ಮ ಸಿದ್ಧಾಂತದಲ್ಲಿ ನಂಬಿಕೆ ಇಟ್ಟಿದ್ದಾರೆ. ದೇಶದ ಶೇ.85ರಷ್ಟು ಆಸ್ತಿ ಕೇವಲ ಶೇ.1ರಷ್ಟು ಶ್ರೀಮಂತರಲ್ಲಿ ಸೇರುತ್ತಿದೆ, ಇದು ಅಪಾಯಕಾರಿ, ಆರ್ಥಿಕ ಅಸಮಾನತೆ ಹೋಗಲಾಡಿಸಲು ಗಾಂಧಿ ಅವರು ವಿಚಾರಗಳಲ್ಲಿ ಹಲವು ಮಾರ್ಗಗಳಿವೆ. ಮಹಾತ್ಮಗಾಂಧಿ ಅವರು ಅಧ್ಯಕ್ಷತೆ ವಹಿಸಿದ್ದ ಸ್ವಾತಂತ್ರ್ಯ ಪೂರ್ವ ಕಾಂಗ್ರೆಸ್‌ನ ಬೆಳಗಾವಿ ಅಧಿವೇಶನದ ಶತಮಾನೋತ್ಸವವನ್ನು ಹೆಚ್ಚು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದರು.

ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸನ್ನು ಈಡೇರಿಸಬೇಕಾಗಿದೆ, ಅವರ ಆಶಯದಂತೆ ರಾತ್ರಿ 12 ಗಂಟೆಗೂ ಹೆಣ್ಣು ಮಕ್ಕಳು ನಿರ್ಭಯದಿಂದ ಓಡಾಡುವಂತಹ ಮುಕ್ತ ಪರಿಸರ ನಿರ್ಮಿಸಬೇಕಿದೆ ಎಂದರು.

ಉಡುಪಿಯಲ್ಲಿ ಮದ್ಯದಲ್ಲಿ ಮಾದಕ ವಸ್ತು ಬೆರೆಸಿ ಹಿಂದೂ ಯುವತಿ ಮೇಲೆ ಅತ್ಯಾಚಾರ: ಇಬ್ಬರ ಬಂಧನ



ಉಡುಪಿ: ಮದ್ಯದಲ್ಲಿ ಮಾದಕ ವಸ್ತು ನೀಡಿ 21 ವರ್ಷದ ಯುವತಿಯ ಮೇಲೆ ಅತ್ಯಾಚಾರ ನಡೆಸಿದ ಘಟನೆ ಕಾರ್ಕಳ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಯುವತಿಯ ಪೋಷಕರು ನೀಡಿದ ದೂರಿನ ಹಿನ್ನೆಲೆಯಲ್ಲಿ ಪೊಲೀಸರು ಅತ್ಯಾಚಾರ ಪ್ರಕರಣ ದಾಖಲಿಸಿ ಓರ್ವ ಆರೋಪಿಯನ್ನು ಬಂಧಿಸಿದ್ದಾರೆ. ಅಲ್ತಾಫ್ ಬಂಧಿತ ಆರೋಪಿಯಾಗಿದ್ದು, ಹಿಂದೂ ಸಂಘ ಟನೆಗಳು ಇದು ಅತ್ಯಾಚಾರ ಪ್ರಕರಣ ವಲ್ಲ. ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆ. ಉಳಿದ ಆರೋಪಿ ಗಳನ್ನು ಬಂಧಿಸಬೇಕೆಂದು ಆಗ್ರಹಿಸಿವೆ. ಸಂತ್ರಸ್ತ ಯುವತಿಗೆ ಅಲ್ತಾಫ್ ಇನ್ ಸ್ಟಾಗ್ರಾಂ ಮೂಲಕ ಪರಿಚಯವಾಗಿದ್ದನು.

ನಂತರ ಯುವತಿಯನ್ನು ಪುಸಲಾಯಿಸಿ ಸುತ್ತಾಡಲು ಆರೋಪಿ ಕರೆದುಕೊಂಡು ಹೋಗಿದ್ದಾನೆ. ನಂತರ ಇಬ್ಬರು ಸ್ನೇಹಿತರಿಗೆ ಹೇಳಿ ಬಿಯರ್ ಬಾಟಲಿ ತರಿಸಿದ್ದನು. ಬಿಯರ್‌ನಲ್ಲಿ ಮಾದಕ ವಸ್ತು ಬೆರೆಸಿ ಸಾಮೂಹಿಕ ಅತ್ಯಾಚಾರ ನಡೆದಿದೆ.

ಕೃತ್ಯ ನಡೆಸಿದ ಬಳಿಕ ಆಕೆಯನ್ನು ಮನೆ ಸಮೀಪ ಬಿಟ್ಟು ಹೋಗಿದ್ದಾರೆ ಎಂದು ಹಿಂದೂ ಸಂಘಟನೆಗಳು ಆರೋಪಿಸಿವೆ. ಈ ವಿಚಾರ ತಿಳಿಯುತ್ತಿದ್ದಂತೆ ಕಾರ್ಕಳ ಠಾಣೆಯ ಸಮೀಪ ಭಾರೀ ಸಂಖ್ಯೆಯಲ್ಲಿ ಹಿಂದೂ ಕಾರ್ಯಕರ್ತರು ಜಮಾಯಿಸಿದ್ದರು. ಪೋಷಕರ ಹೇಳಿಕೆಯಂತೆ ಅತ್ಯಾಚಾರ ಪ್ರಕರಣವನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ. ಸಂತ್ರಸ್ತ ಯುವತಿಯ ಹೇಳಿಕೆ ಮತ್ತು ವೈದ್ಯಕೀಯ ವರದಿ ನಂತರ ಮುಂದಿನ ಕ್ರಮ ಕೈಗೊಳ್ಳಲು ಪೊಲೀಸರು ಈಗ ಮುಂದಾಗಿದ್ದಾರೆ.

ಸಂತ್ರಸ್ತೆ ಮತ್ತು ಆರೋಪಿ ಮೂರು ತಿಂಗಳಿಂದ ಇನ್‌ಸ್ಟಾಗ್ರಾಮ್ ಮೂಲಕ ಪರಸ್ಪರ ಪರಿಚಯ ಹೊಂದಿದ್ದರು. ಶುಕ್ರವಾರ ಆರೋಪಿ ಅಲ್ತಾಫ್ ಕರೆ ಮಾಡಿ ಸಂತ್ರಸ್ತೆಗೆ ಬರಲು ಹೇಳಿದ್ದ. ಆಕೆ ಬಂದಾಗ ಕಾರಿನಲ್ಲಿ ಅಪಹರಿಸಿದ್ದಾನೆ. ಈ ನಡುವೆ ಮದ್ಯಪಾನದಲ್ಲಿ ಏನೋ ಬೆರೆಸಿ ಅತ್ಯಾಚಾರ ಮಾಡಿದ್ದಾಗಿ ಸಂತ್ರಸ್ತೆ ತಿಳಿಸಿದ್ದಾಳೆ. ಆರೋಪಿ ಅಲ್ತಾಫ್‌ನನ್ನು ಬಂಧಿಸಲಾಗಿದೆ. ಆರೋಪಿಗೆ ಬಿಯರ್ ಬಾಟಲ್ ತಂದುಕೊಟ್ಟಿದ್ದ ಇಬ್ಬರ ಪೈಕಿ ಸುಬೇರ್ ಎಂಬಾತನನ್ನು ಬಂಧಿಸಲಾಗಿದ್ದು ಕೃತ್ಯಕ್ಕೆ ಬಳಸಿದ ವಾಹನವನ್ನು ಜಪ್ತಿ ಮಾಡಲಾಗಿದೆ. ಸಂತ್ರಸ್ತೆಗೆ ಮಣಿಪಾಲ ಕೆಎಂಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆ ಸಂಬಂಧಿಸಿದಂತೆ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಉಡುಪಿ ಎಸ್‌ಪಿ ಡಾ.ಅರುಣ್‌ಕುಮಾರ್ ಹೇಳಿದ್ದಾರೆ.

ಘಟನೆಯನ್ನು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಕಳ ಶಾಸಕ ವಿ.ಸುನೀಲ್‌ಕುಮಾರ್ ಖಂಡಿಸಿದ್ದು, ಇದೊಂದು ಲವ್ ಜಿಹಾದ್ ಪ್ರಕರಣವಾಗಿದೆ. ಹಿಂದೂ ಹುಡುಗಿಯರನ್ನು ಗುರಿಯಾಗಿಸಲಾಗುತ್ತಿದ್ದು, ಈ ನಿಟ್ಟಿನಲ್ಲಿ ನಾವು ಎಚ್ಚರಿಕೆ ನೀಡುತ್ತಿದ್ದೇವೆ. ಆದರೆ ರಾಜ್ಯ ಸರ್ಕಾರ ಮತ್ತು ಪೊಲೀಸರು ಆರೋಪಿಗಳ ವಿರುದ್ಧ ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳದ ಕಾರಣ ಇಂತಹ ಘಟನೆಗಳು ವರದಿಯಾಗುತ್ತಿವೆ. ಇದೊಂದು ಹೇಯ ಕೃತ್ಯವಾಗಿದ್ದು, ಇದು ಪೂರ್ವಯೋಜಿತ ಎಂದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಆರೋಪಿಗಳಿಗೆ ಪೊಲೀಸರ ಕ್ರಮದ ಭಯವಿಲ್ಲ, ಪೊಲೀಸರು ಪ್ರಕರಣವನ್ನು ಕೂಲಂಕುಷವಾಗಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಬೆಂಗಳೂರಿಗರನ್ನು ಬೆಚ್ಚಿಬೀಳಿಸಿದ ಬಾಲಕಿಯರ ಡಬಲ್ ಮರ್ಡರ್

ಮಲತಂದೆಯಿಂದಲೇ ಹೆಣ್ಣು ಮಕ್ಕಳ ಬರ್ಬರ ಹತ್ಯೆ!

ಬೆಂಗಳೂರು, ಆ.24– ದಾಸರಹಳ್ಳಿಯಲ್ಲಿ ಬಾಲಕಿಯರ ಜೋಡಿ ಹತ್ಯೆ ಬೆಂಗಳೂರಿಗರನ್ನು ಬೆಚ್ಚಿಬೀಳಿಸಿದೆ.

ಮಲತಂದೆಯೇ ಮಚ್ಚಿನಿಂದ ಇಬ್ಬರು ಹೆಣ್ಣುಮಕ್ಕಳನ್ನು ಕೊಚ್ಚಿ ಕೊಲೆ ಮಾಡಿರುವ ದಾರುಣ ಘಟನೆ ನಡೆದಿದೆ. ಉತ್ತರ ಭಾರತ ಮೂಲದ ಈ ಕುಟುಂಬ ದಾಸರಹಳ್ಳಿಯ ಕಾವೇರಿ ಬಡಾವಣೆಯೊಂದರ ಮನೆಯಲ್ಲಿ ವಾಸವಿತ್ತು.


ಮಲತಂದೆ ಸುಮಿತ್ ಎಂಬಾತ ಸುಮಾರು 14 ಹಾಗೂ 15 ವರ್ಷದ ಹೆಣ್ಣು ಮಕ್ಕಳನ್ನ ಮಚ್ಚಿನಿಂದ ಕೊಚ್ಚಿ ಭೀಕರವಾಗಿ ಹತ್ಯೆ ಮಾಡಿ ಪರಾರಿ ಆಗಿದ್ದಾನೆ. ಸ್ಥಳಕ್ಕೆ ಈಶಾನ್ಯ ವಿಭಾಗ ಡಿಸಿಪಿ ಸಜೀತ್, ಡಾಗ್ ಸ್ಕ್ವಾಡ್, ವಿಧಿವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು, ಅಮೃತಹಳ್ಳಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಜಗತ್ತಿನ ಹಲವು ಸಮಸ್ಯೆಗಳಿಗೆ ಆಧ್ಯಾತ್ಮದಲ್ಲಿ ಪರಿಹಾರವಿದೆ

ಆಧ್ಯಾತ್ಮಿಕ ನೇತಾರ ಸದ್ಗುರು ಶ್ರೀ ಮಧುಸೂದನ ಸಾಯಿ ಅಭಿಮತ

ಮೈಸೂರು, ಆ.24(ಎಂಕೆ)– ಜಗತ್ತಿನ ಹಲವು ಸಮಸ್ಯೆಗಳಿಗೆ ಅಧ್ಯಾತ್ಮದಲ್ಲಿ ಪರಿಹಾರವಿದ್ದು, ನಿಷ್ಕಲ ಮಾನವತಾ ಪ್ರೀತಿಯಿಂದ ಜಗದ ಹಿತ ಸಾಧ್ಯ ಎಂದು ಆಧ್ಯಾತ್ಮಿಕ ಮತ್ತು ಸಾಮಾಜಿಕ ನೇತಾರ ಸದ್ಗುರು ಶ್ರೀ ಮಧುಸೂದನ ಸಾಯಿ ಹೇಳಿದರು.

ಮೈಸೂರು ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ ವಿಶೇಷ ಉಪನ್ಯಾಸ ಹಾಗೂ ವಿಶೇಷ ಉಪನ್ಯಾಸ ಮಾಲೆಯ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ 'ಆತ್ಮಾನೋ ಮೋಕ್ಷಾರ್ಥಂ ಜಗತ್ ಹಿತಾಯ ಚ' ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, 'ಯಂ ನಿಜಃ ಪರೋ ವೇತಿ ಗಣನಾ ಲಘು ಚೇತಸಾಮ್, ಉದಾರಚರಿತಾನಾಂ ತು ವಸುಧೈವ ಕುಟುಂಬಕಂ' ಎಂಬ ಮಹಾ ಉಪನಿಷದ್‌ನಲ್ಲಿರುವಂತೆ ವಿಶ್ವವೇ ಒಂದು ಕುಟುಂಬ ಎಂದರು.



ಜೆಎಸ್‌ಎಸ್ ಮಹಾವಿದ್ಯಾಪೀಠ ಸುವರ್ಣ ಮಹೋತ್ಸವದ ವಿಶೇಷ ಉಪನ್ಯಾಸ ಮಾಲೆಯ ಕೃತಿಗಳನ್ನು ಶನಿವಾರ ಲೋಕಾರ್ಪಣೆಗೊಳಿಸಲಾಯಿತು. (ಎಡದಿಂದ) ಶ್ರೀ ಸತ್ಯಸಾಯಿ ಯೂನಿವರ್ಸಿಟಿಯ ಕುಲಪತಿ ಬಿ.ಎನ್.ನರಸಿಂಹಮೂರ್ತಿ, ಆಧ್ಯಾತ್ಮಿಕ ಮತ್ತು ಸಾಮಾಜಿಕ ನೇತಾರ ಸದ್ಗುರು ಶ್ರೀ ಮಧುಸೂದನ ಸಾಯಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಾದೇಶಿಕ ಆಯುಕ್ತ ಡಿ.ಎಸ್. ಸುರೇಶ್, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜೆ.ಶಶಿಧರ್ ಪ್ರಸಾದ್ ಉಪಸ್ಥಿತರಿದ್ದರು.

ನಾನು ಹಲವಾರು ದೇಶಗಳಿಗೆ ಪ್ರಯಾಣಿಸಿದ್ದೇನೆ. ಭಾರತೀಯ ಸಂಸ್ಕೃತಿಯಂತಹ ಆಳವಾದ, ಆಧ್ಯಾತ್ಮಿಕ, ಪ್ರಾಯೋಗಿಕ ಮತ್ತು ಈ ಸಮಯಕ್ಕೆ ಸೂಕ್ತವಾದ ಸಂಸ್ಕೃತಿಯನ್ನು ನಾನು ನೋಡಿಲ್ಲ. ನಮ್ಮ ಸನಾತನ ಧರ್ಮವು ಇಡೀ ಜಗತ್ತಿಗೆ ಏಕತೆ, ಭ್ರಾತೃತ್ವ, ಸಮಾನತೆಯ ಸಂದೇಶವನ್ನು ನೀಡುತ್ತದೆ. ಅದು ಎಲ್ಲರನ್ನೂ ಪ್ರೀತಿಸಲು ಹಾಗೂ ಎಲ್ಲರಿಗೂ ಸೇವೆ ಸಲ್ಲಿಸಲು ಪ್ರಯತ್ನಿಸುತ್ತಿದೆ ಎಂದು ತಿಳಿಸಿದರು.

ಜಗತ್ತಿನ ಹಿತ ಎಂದರೆ ಎಲ್ಲರ ಕಲ್ಯಾಣ ಎಂದರ್ಥ. ಒಬ್ಬರೇ ಸರ್ವಸುಖ ವನ್ನು ಅನುಭವಿಸುದಲ್ಲ. ಹಸಿದವರನ್ನು ಗಮನಿಸಬೇಕು. ಜಗತ್ತು ಇಂದು ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಆಧ್ಯಾತ್ಮದಲ್ಲಿ ಮಾತ್ರ ಪರಿಹಾರವಿದೆ. ಭಾರತೀಯ ಸಂಸ್ಕೃತಿ ಅತ್ಯಂತ ಆಳವಾದುದು. ಅದರ ಬೇರುಗಳು ಬಹಳ ವಿಶಾಲವಾಗಿ ಚಾಚಿವೆ. ಸನಾತನ ಧರ್ಮ ಎಲ್ಲರನ್ನು ಪ್ರೀತಿಯಿಂದ ಕಾಣು, ಎಲ್ಲರಿಗೂ ಸೇವೆಯನ್ನು ಸಲ್ಲಿಸು ಎಂಬುದನ್ನು ಕಲಿಸಿದೆ. ಕಲಿಕೆ ಎಂಬುದು ನಿರಂತರವಾದುದು ನಿತ್ಯ ಜೀವನದಲ್ಲಿ ಏನನ್ನಾದರೂ ಕಲಿಯುತ್ತಿರಬೇಕು. ಒಂದು ದಿನ ಕಲಿಯುವುದನ್ನು ನಿಲ್ಲಿಸಿದರೆ ಮುಂದೆ ಆತ ಅನಕ್ಷರಸ್ಥನಾಗಬಹುದು ಎಂದರು.

ಧರ್ಮವೆಂಬುದು ಸತ್ಯ. ಜಗತ್ತು ಎಂಬುದು ಮಿಥ್ಯ. 'ಪರೋಪಕಾರಂ ಇದಂ ಶರೀರಂ' ಎಂಬ ಮಾತಿನಂತೆ ಶ್ರೀ ಮಠದ ರಾಜೇಂದ್ರ ಶ್ರೀಗಳು ಸಮಾಜಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸಿದರು. ಜೀವನ ಚಿಕ್ಕದು. ಜಗತ್ತಿಗೆ ಏನನ್ನಾದರೂ ಒಳ್ಳೆಯದನ್ನು ಮಾಡಬೇಕು. ನಮ್ಮ ಕೆಲಸಗಳನ್ನು ನಾವು ಮಾಡಬೇಕು ಫಲಾಫಲ ದೇವರಿಗೆ ಬಿಟ್ಟಿದ್ದು. ಜಗದ ಹಿತದಲ್ಲಿ ಮೋಕ್ಷವನ್ನು ಕಂಡುಕೊಳ್ಳಬಹುದು. ಮೋಕ್ಷವನ್ನು ಸಾಧಿಸುವ ಜೊತೆಗೆ ಮಾನವೀಯತೆಗೆ ಬಹುದೊಡ್ಡ ಸೇವೆಯನ್ನು ಸಲ್ಲಿಸುವ ಅವಶ್ಯಕತೆ ಇದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ವಿಶೇಷ ಉಪನ್ಯಾಸ ಮಾಲೆಯ ಕೃತಿಗಳ ಲೋಕರ್ಪಾಣೆಗೊಳಿಸಿ ಮಾತನಾಡಿದ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜೆ.ಶಶಿಧರ್ ಪ್ರಸಾದ್, ವಿಶೇಷ ಉಪನ್ಯಾಸ ಮಾಲೆಯ ಮೂರು ಕೃತಿಗಳು ಒಂದೊಂದು ಪ್ರಮುಖ ವಿಷಯಗಳನ್ನು ತಿಳಿಸಿವೆ. ಇನ್ಫೋಸಿಸ್ ಸಂಸ್ಥೆಯ ಡಾ.ಸುಧಾಮೂರ್ತಿ ರಚಿತ ಪುಸ್ತಕದಲ್ಲಿ ಚಾರಿಟಿ ಎಂದು ಬಳಸಿದ್ದಾರೆ. ಚಾರಿಟಿ ಎಂಬುದಕ್ಕಿಂತ ಕಾಣಿಕೆ ಎಂಬ ಪದ ಬಳಸಬಹುದಾಗಿತ್ತು. ಹಾಗೆಯೇ ಜಿ20 ಶೃಂಗ ಸಭೆ ಕುರಿತ ಕೃತಿಯಲ್ಲಿ ಭಾರತದ ನಾಯಕತ್ವ ಕುರಿತು ತಿಳಿಸಲಾಗಿದೆ ಎಂದರಲ್ಲದೆ ನಿಸ್ವಾರ್ಥ ಸೇವೆ, ನಿಸ್ವಾರ್ಥ ಭಾವ ಬೆಳೆಸಿಕೊಂಡರೆ ಜೀವನ ಸಾರ್ಥಕವಾಗಲಿದೆ ಎಂದು ಹೇಳಿದರು.

ಸೇವೆ ಬಹಳ ಮುಖ್ಯ: ಪ್ರಾದೇಶಿಕ ಆಯುಕ್ತ ಡಿ.ಎಸ್.ಸುರೇಶ್ ಮಾತನಾಡಿ, ನನಗೆ ಎಲ್ಲವೂ ಗೊತ್ತಿದೆ ಎನ್ನುವುದಕ್ಕಿಂತ ಏನೂ ಗೊತ್ತಿಲ್ಲವೆಂಬುದನ್ನು ಅರಿಯಬೇಕಿದೆ. ಸಹನೆಯಿಂದ ಬಹಳ ಅರ್ಥಪೂರ್ಣವಾಗಿ ಬದುಕು ಸಾಗಿಸಬೇಕಿದೆ. ದೇವರಲ್ಲಿರುವ ಎಲ್ಲಾ ಗುಣಗಳನ್ನು ಅಳವಡಿಸಿಕೊಂಡರೆ ನಾವೇ ದೇವಾಗಬಹುದು. ಹುಟ್ಟಿನಿಂದ ಸಾವಿನವರೆಗೆ ಸೇವೆ ಎಂಬುದು ಬಹಳ ಮುಖ್ಯವಾಗಿದೆ ಎಂದರು.

ಶ್ರೀ ಸತ್ಯಸಾಯಿ ಯೂನಿವರ್ಸಿಟಿಯ ಕುಲಪತಿ ಬಿ.ಎನ್.ನರಸಿಂಹಮೂರ್ತಿ, ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ವಿಭಾಗದ ಸಮ ಕುಲಾಧಿಪತಿ ಡಾ.ಬಿ.ಸುರೇಶ್ ಸ್ವಾಗತ ಕೋರಿದರು. ಜೆಎಸ್‌ಎಸ್ ಮಹಾವಿದ್ಯಾಪೀಠ ವೈದ್ಯಕೀಯ ಶಿಕ್ಷಣ ವಿಭಾಗದ ಆರ್.ಮಹೇಶ್, ಕಾನೂನು ಕಾಲೇಜಿನ ಮುಖ್ಯಕಾರ್ಯನಿರ್ವಾಹಕ ಕೆ.ಎಸ್.ಸುರೇಶ್, ಕುಮಾರಿ ಎಂ. ಅಮೂಲ್ಯ ಮತ್ತಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ವೀರಭದ್ರಸ್ವಾಮಿ ಹಾಗೂ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ವೀರಭದ್ರೇಶ್ವರಸ್ವಾಮಿಯ ಜಯಂತ್ಯುತ್ಸವ, ಮಹಾರಥೋತ್ಸವ ಹಾಗೂ ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ದತ್ತ ಸ್ವಾಮಿಗೆ ತೈಲಾಭಿಷೇಕ, ಸ್ಥಳ: ಆಶ್ರಮದ ಸಭಾಂಗಣ, ನಂಜನಗೂಡು ರಸ್ತೆ, ಬೆಳಗ್ಗೆಯಿಂದ.

■ **ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘ:** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಪಿ.ಕೆ.ಸೋಮಣ್ಣ, ಸ್ಥಳ: ಕೊಡಗು ಸಹಕಾರ ಸಂಘ, ಜಯಲಕ್ಷ್ಮಿಪುರಂ, ಬೆಳಗ್ಗೆ 10ಕ್ಕೆ.

■ **ಅಭಿರುಚಿ ಬಳಗ:** ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಅಭಿರುಚಿ ಕಲಾ ಪೋಷಕರತ್ನ ಪ್ರಶಸ್ತಿ ವಿತರಣೆ, ಕವಿಗೋಷ್ಠಿ, ಪುಸ್ತಕ ಲೋಕಾರ್ಪಣೆ, ಉದ್ಘಾಟನೆ: ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಅಧ್ಯಕ್ಷತೆ: ಸ್ನೇಹ ಸಿಂಚನ ಸಂಸ್ಥೆ ಅಧ್ಯಕ್ಷೆ ಶ್ರೀಮತಿ ಮ.ನ.ಲತಾ ಮೋಹನ್, ಕೃತಿ ಪರಿಚಯ: ಸಾಹಿತಿ ಡಾ.ಕೆ.ಲೀಲಾಪ್ರಕಾಶ್, ಲೇಖಕರ ಮಾತು: ಆಕಾಶವಾಣಿ ನಿವೃತ್ತ ಕಾರ್ಯಕ್ರಮ ಅಧಿಕಾರಿ ಎನ್.ವಿ.ರಮೇಶ್, ಮುಖ್ಯ ಅತಿಥಿಗಳು: ರಾಜೇಂದ್ರ ಪಾಟೀಲ್, ರವಿಚಂದ್ರೇಗೌಡ, ಎಸ್. ವಿಶ್ವೇಶ್ವರಯ್ಯ, ಕೃಷ್ಣಮೂರ್ತಿ ಕುಲಕರ್ಣಿ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ಪತ್ರಕರ್ತರ ಕ್ರೀಡಾಕೂಟದ ಬಹುಮಾನ ವಿತರಣಾ ಕಾರ್ಯಕ್ರಮ, ಬಹುಮಾನ ವಿತರಣೆ: ಶಾಸಕ ಟಿ.ಎಸ್.ಶ್ರೀವತ್ಸ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಕೆ. ದೀಪಕ್, ಸಾಧಕರಿಗೆ ಸನ್ಮಾನ: ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಯುವಜನ ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ದಿ ಟೈಮ್ಸ್ ಕ್ರಿಯೇಷನ್ಸ್ ಸಂಸ್ಥಾಪಕ ಹರೀಶ್ ಕುಮಾರ್, ಕೌಟಿಲ್ಯ ವಿದ್ಯಾಲಯ ಅಧ್ಯಕ್ಷ ಟಿ. ಬಾಬು, ಡಾ.ಉಷಾ ಹೆಗಡೆ, ಗಿರೀಶ್ ದೊಡ್ಡಮನಿ, ಸ್ಥಳ: ಓವಲ್ ಮೈದಾನ, ಕ್ರಾಫರ್ಡ್ ಹಾಲ್ ಎದುರು, ಮಧ್ಯಾಹ್ನ 3.30ಕ್ಕೆ

■ **ಮೈಸೂರು ಜಿಲ್ಲಾ ವಿಶ್ವಕರ್ಮ ನೌಕರರ ಮತ್ತು ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘ :** ಸಂಘದ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಶಿಲ್ಪಿ ಡಾ.ಅರುಣ್ ಯೋಗಿರಾಜ್, ಮುಖ್ಯ ಅತಿಥಿಗಳು: ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶೇಖರ್, ಕಾರ್ಯಪಾಲಕ ಅಭಿಯಂತರ ಸಿ.ಆರ್.ಶೇಖರ್, ತಹಸೀಲ್ದಾರ್ ಸಿ.ಎಸ್.ಪೂರ್ಣಿಮಾ, ತಹಸೀಲ್ದಾರ್ ಟಿ.ಜಿ.ಸುರೇಶ್ ಆಚಾರ್, ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಎಸ್.ಶಿವರುದ್ರ, ಸ್ಥಳ: ಕಿರುರಂಗಮಂದಿರ, ಕಲಾಮಂದಿರ, ಬೆಳಗ್ಗೆ 9.30 ರಿಂದ.



ಇಂದಿನ ಪಂಚಾಂಗ

25.08.2024 ಭಾನುವಾರ, ಮಳೆ ನಕ್ಷತ್ರ: ಮಖ 17.08.2024ರಿಂದ 30.08.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಭರಣಿ, ರಾಹುಕಾಲ : ಸಂಜೆ 4.30ರಿಂದ 6ರವರೆಗೆ

■ **ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು, ಪ್ರಾದೇಶಿಕ ಜಾನಪದ ಅಧ್ಯಯನ ಮತ್ತು ಜನಪದ ಕಲಿಕಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಏಕತಾರಿ ಸಾಂಸ್ಕೃತಿಕ ಸಂಘಟನೆ:** ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಜನಪದ ನೃತ್ಯಗಳು ಮತ್ತು ಜನಪದ ಗೀತೆಗಳ ಕಲಿಕಾ ತರಬೇತಿ ಶಿಬಿರ, ಸ್ಥಳ: ಕಿರು ರಂಗ ಮಂದಿರ ಆವರಣ, ಕಲಾಮಂದಿರ, ಸಂಜೆ 4 ರಿಂದ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ:** ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 109ನೇಯ ಜಯಂತಿ ಮಹೋತ್ಸವ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ದಿವ್ಯ ಸಮ್ಮುಖ : ಆಧ್ಯಾತ್ಮಿಕ ಮತ್ತು ಸಾಮಾಜಿಕ ನೇತಾರ ಸದ್ಗುರು ಶ್ರೀ ಮಧುಸೂದನ ಸಾಯಿಯವರು, ಉದ್ಘಾಟನೆ : ಗೋವಾ ರಾಜ್ಯಪಾಲ ಪಿ.ಎಸ್. ಶ್ರೀಧರನ್ ಪಿಳ್ಳೈ, ಮೇಘಾಲಯ ರಾಜ್ಯಪಾಲ ಸಿ.ಹೆಚ್. ವಿಜಯಶಂಕರ್, ಸ್ಥಳ: ಶ್ರೀ ಸುತ್ತೂರು ಮಠ, ಬೆಳಗ್ಗೆ 10.30ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು (ಮೈಸೂರು ನಗರ ಘಟಕ) ಕದಳಿ ಮಹಿಳಾ ವೇದಿಕೆ :** ವಚನ–ಶ್ರಾವಣ, ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ, ಶ್ರೀಮತಿ ಶೋಭಾ ಎಲ್.ಆನಂದ್ ಅವರಿಂದ ಕೊಟ್ಟ ಕುದುರೆಯ ನೇರಲರಿಯದೆ... –ಅಲ್ಲಮ ಪ್ರಭು ಕುರಿತು ಉಪನ್ಯಾಸ, ಸ್ಥಳ: ರೇಖಾ ಮಹಾದೇವಸ್ವಾಮಿ, ರಾಮಕೃಷ್ಣನಗರ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಸಂಜೆ 6 ರಿಂದ.

■ **ಶ್ರೀ ಸುತ್ತೂರು ಮಠ, ಮೈಸೂರು ಶಾಖೆ :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಅವರಿಂದ ಪ್ರವಚನ, ವಿದುಷಿ ಧರಿತ್ರಿ ಆನಂದರಾವ್ ಅವರಿಂದ ವಾಚನ, ಸಂಜೆ 6ಕ್ಕೆ ಸಾಮೂಹಿಕ ಪ್ರಾರ್ಥನೆ, ಸಂಜೆ 6.30ಕ್ಕೆ ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ರಿಂದ.

■ **ಗಾಯತ್ರಿ ವಿಪ್ರ ಸಂಘ :** ಬೆಳಗ್ಗೆ 7ರಿಂದ ಸಂಕಲ್ಪ, ಗಣಪತಿ ಹೋಮ, ನವಗ್ರಹ ಹೋಮ, ಗಾಯತ್ರಿ ಹೋಮ, ಧನ್ವಂತರಿ ಹೋಮ, ಬೆಳಗ್ಗೆ 9ಕ್ಕೆ ಸಾಮೂಹಿಕ ಲಲಿತ ಸಹಸ್ರ ನಾಮಾರ್ಚನೆ, ವಿಷ್ಣು ಸಹಸ್ರನಾಮಾರ್ಚನೆ, ಪೂರ್ಣಾಹುತಿ, ಬೆಳಗ್ಗೆ 11.30ಕ್ಕೆ ಸನ್ಮಾನ ಮತ್ತು ಪ್ರತಿಭಾ ಪುರಸ್ಕಾರ, ಸ್ಥಳ:ಅನಂತೇಶ್ವರ ಭವನ, ಹೂಟಗಳ್ಳಿ.

■ **ವಿಶ್ವರತ್ನ ಡಾ. ಬಿ.ಆರ್.ಅಂಬೇಡ್ಕರ್ ಪದವಿಪೂರ್ವ ಶಿಕ್ಷಣ ಇಲಾಖೆ ನೌಕರರ ಸಂಘ:** ಪ್ರತಿಭಾ ಪುರಸ್ಕಾರ ಹಾಗೂ ಅಭಿನಂದನಾ ಕಾರ್ಯಕ್ರಮ, ಸಾನ್ನಿಧ್ಯ: ಬೋಧಿ ದತ್ತ ಭಂತೇಜಿ, ಉದ್ಘಾಟನೆ: ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಮರಿಸ್ವಾಮಿ, ಮುಖ್ಯ ಅತಿಥಿಗಳು: ಸಂಘದ ರಾಜ್ಯಾಧ್ಯಕ್ಷ ಡಿ.ಚಂದ್ರಶೇಖರಯ್ಯ, ಬಿ.ಗೋಪಾಲಕೃಷ್ಣ, ಉದಯಶಂಕರ, ಡಾ.ಆರ್.ರಾಜಣ್ಣ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಡಾ.ವೈ.ಡಿ.ರಂಗನಾಥ, ನಾಗಮಲ್ಲೇಶ್, ಸ್ಥಳ: ಕೃಷ್ಣರಾಜ ಸಭಾಂಗಣ, ಮಹಾರಾಜ ಸರ್ಕಾರಿ ಪದವಿಪೂರ್ವ ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರ ಸಂಘ ನಿಯಮಿತ:** ರಜತ ಮಹೋತ್ಸವ ಸಮಾರಂಭ, ಉದ್ಘಾಟನೆ: ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ.ಎಸ್.ಚಂದ್ರಶೇಖರ್, ಸಪ್ತರ್ಷಿ ಸವಿ ಸಂಚಿಕೆ ಬಿಡುಗಡೆ: ಸಂಸದ ಯದುವೀರ ಒಡೆಯರ್, ಉಪಸ್ಥಿತರು : ಶಾಸಕ ಜಿ.ಟಿ. ದೇವೇಗೌಡ, ಜಿ. ನಂಜನಗೌಡ, ಶಾಸಕ ಟಿ.ಎಸ್. ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಸಭಾಂಗಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.15ಕ್ಕೆ.

■ **ಕದಂಬ ಕಲಾಪೀಠ:** ಡಿ. ಬಸಪ್ಪಾಜಿ ಕದಂಬರವರ 95ನೇ ವರ್ಷದ ನೆನಪಿನೋತ್ಸವದ ಅಂಗವಾಗಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಡಿ. ಅಶ್ವಥ್ ಕದಂಬ ಅವರಿಗೆ ಅಭಿನಂದನಾ ಸಮಾರಂಭ, ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು: ಚಿತ್ರನಟ ಮಂಡ್ಯ ರಮೇಶ್, ಸಾಹಿತಿ ನಾ.ನಾಗಚಂದ್ರ, ಡಿ.ಅಶ್ವಥ್ ಕದಂಬ, ಬಿ.ವಿದ್ಯಾಸಾಗರ ಕದಂಬ, ಜಯಕುಮಾರ್, ಕದಂಬ ಕಲಾಪೀಠ ತಂಡದವರಿಂದ ನಾಟಕ: ವಿಷಜ್ವಾಲೆ, ನಿರ್ದೇಶನ: ಡಿ.ಅಶ್ವಥ್ ಕದಂಬ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 5.30ಕ್ಕೆ.

■ **ಬಾಲಮುರಳಿ ಮ್ಯೂಸಿಕಲ್ ಗ್ರೂಪ್ :** ಮಧುರ ಗೀತೆಗಳ ಸುಮಧುರ ಸಂಜೆ, ಕರೋಕೆ ಗಾಯನ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಸಂಜೆ 4ಕ್ಕೆ.

■ **ಪ್ರಜ್ಞಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ :** ಪ್ರಜ್ಞಾ ರಂಗೋತ್ಸವದ ಸಮಾರೋಪ ಸಮಾರಂಭ, ಸಂಜೆ 5ಕ್ಕೆ ಜಾನಪದ ಸಂಗೀತ ಕಾರ್ಯಕ್ರಮ, ಪದ್ಮಪಾಣಿ ಲಲಿತ ಕಲಾ ಅಕಾಡೆಮಿ ಕಲಾವಿದರಿಂದ ಜನಪದ ಗೀತೋತ್ಸವ, ಸಂಜೆ 7ಕ್ಕೆ ಜಿಪಿಐಇಆರ್ ರಂಗ ತಂಡದಿಂದ ಮಂಟೇಸ್ವಾಮಿ ಕಥಾ ಪ್ರಸಂಗ, ಮಧ್ಯಾಹ್ನ 3ಕ್ಕೆ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ, ಸ್ಥಳ : ಕಲಾಮಂದಿರ.

■ **ದಿನೇಶ್ ಕೋಚಿಂಗ್ ಸೆಂಟರ್ :** ಜಿಲ್ಲಾ ಮಟ್ಟದ ಅಂತರ ಪ್ರೌಢಶಾಲಾ ಕನ್ನಡ ಚರ್ಚಾ ಸ್ಪರ್ಧೆ, ಉದ್ಘಾಟನೆ: ಹಿರಿಯ ಪತ್ರಿಕಾ ಛಾಯಾಗ್ರಾಹಕ ಪ್ರಗತಿ ಗೋಪಾಲಕೃಷ್ಣ, ಸ್ಥಳ: ಐಡಿಯಲ್ ಜಾವಾ ರೋಟರಿ ಕೇಂದ್ರ, ಬೆಳಗ್ಗೆ 10ಕ್ಕೆ.

■ **ಬ್ರಾಹ್ಮಣ ಕಂಕಣ ಮಾಹಿತಿ ಸಭಾ:** ವಧುವರರ ಸಮಾವೇಶ, ಸ್ಥಳ: ಶ್ರೀ ರಮಣ ಜ್ಞಾನ ಕೇಂದ್ರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 9.30ಕ್ಕೆ.

■ **ಬಿಲ್ಲವ ಸಂಘ :** ವಾರ್ಷಿಕ ಮಹಾಸಭೆ ಮತ್ತು ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ, ಅಧ್ಯಕ್ಷತೆ : ಸಂಘದ ಉಪಾಧ್ಯಕ್ಷ ಸಚಿನ್ ಪೂಜಾರಿ, ಸ್ಥಳ: ಚಾಮುಂಡೇಶ್ವರಿ ಕ್ಷೇತ್ರ ಸುವರ್ಣನಗರ, ಗೋಹಳ್ಳಿ ಕೆ. ಹೆಮ್ಮನಹಳ್ಳಿ, ಬೆಳಗ್ಗೆ 10ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ವಿದ್ವಾನ್ ಹರಿಭಟ್ ಹೆಚ್.ಎನ್. ಅವರಿಂದ ಗಾಯನ, ವಿದ್ವಾನ್ ಅರ್ಜುನ್ ದಿನಕರ್–ಪಿಟೀಲು, ವಿದ್ವಾನ್ ಸಾಯಿ ಶಿವು ಲಕ್ಷ್ಮೀಕೇಶವ್–ಮೃದಂಗ, ವಿದ್ವಾನ್ ಪಿ.ಸುಬ್ರಹ್ಮಣ್ಯ ಕುಮಾರ್ –ಘಟಂ, ಸ್ಥಳ: ಶ್ರೀ ಲಕ್ಷ್ಮೀನರಸಿಂಹ ಗಾಯತ್ರಿ ದೇವಸ್ಥಾನ, ಎಸ್‌ಬಿಎಂ ಕಾಲೋನಿ, ಶ್ರೀರಾಂಪುರ, ಸಂಜೆ 6 ರಿಂದ.

■ **ನವರತ್ನ ದಿಗಂಬರ ಜೈನ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್:** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಬಿ.ಎಸ್.ಪ್ರಕಾಶ್, ಸ್ಥಳ: ಎಂ.ಎಲ್.ವರ್ಧಮಾನಯ್ಯ ಸ್ಮಾರಕ ಭವನ, ಚಂದ್ರಗುಪ್ತ ರಸ್ತೆ, ಬೆಳಗ್ಗೆ 10.30ಕ್ಕೆ

■ **ಖಿದ್ದರ್ ಕೋ ಆಪರೇಟಿವ್ ಸೊಸೈಟಿ:** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಕೆ.ಜಿ. ಸತೀಶ್, ಸ್ಥಳ: ಸಮುದಾಯ ಭವನ, ನಾಲಾ ಬೀದಿ, ಬೆಳಗ್ಗೆ 10.30ಕ್ಕೆ.

■ **ಶ್ರೀ ಕೃಷ್ಣ ಮಿತ್ರ ಮಂಡಳಿ, ಶ್ರೀ ಕೃಷ್ಣ ಟ್ರಸ್ಟ್:** ಶ್ರೀ ಕೃಷ್ಣ ಜನ್ಮಾಷ್ಟಮಿ ಲೀಲೋತ್ಸವದ ಪ್ರಯುಕ್ತ ಛದ್ಮವೇಷ ಸ್ಪರ್ಧೆ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಮಧ್ಯಾಹ್ನ 3ರಿಂದ.

■ **ಆಕಾಶವಾಣಿ, ಸಮುದ್ಯತಾ ಶ್ರೋತೃ ಬಳಗ, ರಂಗಾಯಣ:** ಚುರುಮುರಿ ಸಂಭ್ರಮ, ಮೈಸೂರು ಆಕಾಶವಾಣಿಯಿಂದ ಬಿತ್ತರಗೊಂಡ ಚುರುಮುರಿ ಲಘು ಹಾಸ್ಯ ಕಾರ್ಯಕ್ರಮದ 10ನೇ ವರ್ಷಾಚರಣೆ, ಪ್ರಾಸ್ತಾವಿಕ ಭಾಷಣ: ಹಿರಿಯ ಉದ್ಘೋಷಕ ಪ್ರಭುಸ್ವಾಮಿ ಮಳಿಮಠ, ಉದ್ಘಾಟನೆ: ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಉಪಸ್ಥಿತರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ಉಪನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಎನ್.ಕೇಶವಮೂರ್ತಿ, ಶ್ರೀಮತಿ ಸುಧಾರಾವ್, ಎಸ್.ಎಸ್. ಉಮೇಶ್, ಅಧ್ಯಕ್ಷತೆ: ಬಳಗದ ಅಧ್ಯಕ್ಷ ಕಣ್ಣೂರು ವಿ. ಗೋವಿಂದಾಚಾರಿ, ಸ್ಥಳ: ಬಿ.ವಿ. ಕಾರಂತ ರಂಗ ಚಾವಡಿ, ರಂಗಾಯಣ ಆವರಣ, ಮಧ್ಯಾಹ್ನ 2.30ಕ್ಕೆ

■ **ರಂಗಾಯಣ :** ರಂಗಾಯಣದ ವಾರಾಂತ್ಯ ರಂಗ ಪ್ರದರ್ಶನ, ಬಾಬ್ ಮಾರ್ಲಿ ನಾಟಕ ಪ್ರದರ್ಶನ, ನಿರ್ದೇಶನ: ಕೆ.ಪಿ. ಲಕ್ಷ್ಮಣ್, ಸ್ಥಳ: ಭೂಮಿಗೀತ, ರಂಗಮಂದಿರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಜಿ.ಎಂ.ಹೆಗಡೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್‌ಪ್ರಸಾದ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಜಯಂತಿ. ವಿ.ಭಟ್, ವ್ಯಾಖ್ಯಾನ: ಡಾ.ಬಿ.ವಿ.ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ' ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ವಿಕಾಸ ಅಕಾಡೆಮಿ, ಕಲಬುರ್ಗಿ, 8.30 'ಹಾದಿಯಲ್ಲಿ ಕಂಡ ಮುಖ' ಬಾನುಲಿ ಸರಣಿ, ಬಿದಿರಿನ ಬುಟ್ಟಿ ಹೆಣೆದು ಜೀವನ ಸಾಗಿಸುತ್ತಿರುವ ಚಿಕ್ಕಮಂಟಯ್ಯ ಅವರೊಂದಿಗೆ ಸಂವಾದ, ಪ್ರಸ್ತುತಿ: ಅಬ್ದುಲ್ ರಶೀದ್, 9.00 ರಾಷ್ಟ್ರೀಯ ಬಾಹ್ಯಾಕಾಶ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ 'ಬಾಹ್ಯಾಕಾಶ ವಿಸ್ಮಯ', 9.05 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಕಾರ್ಯಕ್ರಮ: 'ದಂತ ಚಿಕಿತ್ಸೆಯಲ್ಲಿ ಲೇಸರ್ ಬಳಕೆ' ಕುರಿತು ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಹಿರಿಯ ದಂತ ಆರೋಗ್ಯಾಧಿಕಾರಿ ಡಾ. ಸ್ಮಿತಾ. ಜೆ. ಡಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ: ನಂಜನಗೂಡು ತಾಲೂಕು ಹೊಸಕೋಟೆಯ ಶ್ರೀಗುರು ಮಹಾಂತೇಶ್ವರ ಆಂಗ್ಲ ಮಾಧ್ಯಮ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ: 'ಹಕ್ಕಿ ಗೂಡು', ಪ್ರಸ್ತುತಿ: ಎಂ.ಎಸ್.ಭಾರತಿ, 11.00 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಮಾನ್ಯ ಪ್ರಧಾನಮಂತ್ರಿ ನರೇಂದ್ರ ಮೋದಿ ರವರ ಮನದ ಮಾತು

ಮಧ್ಯಾಹ್ನ: 12.05 ವನಿತಾ ವಿಹಾರ–ರಾಷ್ಟ್ರೀಯ ನೇತ್ರದಾನ ಪಾಕ್ಷಿಕದ ಸಂದರ್ಭದಲ್ಲಿ ಕಾರ್ನಿಯಾ ಮಹತ್ವ ಮತ್ತು ನೇತ್ರದಾನದ ಕುರಿತು ಮಾಹಿತಿ, ನೇತ್ರ ತಜ್ಞರಾದ ಡಾ.ಅರ್ಚನಾ ಸಿಂಗ್ ಅವರಿಂದ. ಪ್ರಸ್ತುತಿ: ಕೆ.ಎಲ್. ರಾಜೇಶ್ವರಿ, 12.30 ದೇವರನಾಮ–ಗೀತಾ ರಾಜು, 12.45 ಜನಪದ ಸಂಗೀತ, 1.20 ಭಾವಗೀತೆಗಳು, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಶ್ರೀಕೃಷ್ಣ ರುಕ್ಮಿಣಿ ಸತ್ಯಭಾಮ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ: ಬಾಂಬೆ ಎಸ್. ಜಯಶ್ರೀ–ಹಾಡುಗಾರಿಕೆ, 4.45 ಚಿತ್ರಗೀತೆಗಳು, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಎನ್. ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ–ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಯಾರು ಕಾಣದ ಪ್ರವಾಸಿ ತಾಣ–ಬಾನುಲಿ ಮಾಲಿಕೆ ಶ್ರೀರಂಗಪಟ್ಟಣದ ಗ್ಯಾರಿಸನ್ ಸಮಾಧಿ ಸ್ಮಾರಕದ ಪರಿಚಯ ಸಿರಿ ಮೈಸೂರು ಅವರಿಂದ, 8.00 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಮಾನ್ಯ ಪ್ರಧಾನಮಂತ್ರಿ ನರೇಂದ್ರ ಮೋದಿ ರವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 9.15 ರಂಗಗೀತೆಗಳು– ವೀರಭದ್ರಾಚಾರ್, 10.00 ರವಿವಾರದ ಅಖಿಲ ಭಾರತ ಸಂಗೀತ ಸಭೆ, ವಿವೇಕ್ ನಾವರೆ – ಸರೋದ್

ಮೈಸೂರು ಮಿತ್ರ ಭಾನುವಾರ 25 ಆಗಸ್ಟ್ 2024

ಎಂಎಂಸಿ–ಆರ್‌ಐ ಪ್ಲಾಟಿನಂ ಜುಬಿಲಿ ಸಭಾಂಗಣದ ನವೀಕೃತ ಸಭಾ ಭವನ ಉದ್ಘಾಟನೆ

ಪಾರಂಪರಿಕ ಕಟ್ಟಡದ ಮಹತ್ವ ಅರಿಯದೇ ನಿರ್ವಹಣೆ ಅಸಾಧ್ಯ: ಕೆಬಿಜಿ

ಮೈಸೂರು, ಆ.24(ಎಂಕೆ)– ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ(ಎಂಎಂಸಿ & ಆರ್‌ಐ)ಯ ಪ್ಲಾಟಿನಂ ಜುಬಿಲಿ ಸಭಾಂಗಣದಲ್ಲಿ ನವೀಕರಿಸಿದ ಸಭಾ ಭವನ(ಮೀಟಿಂಗ್ ಹಾಲ್)ವನ್ನು ಶನಿವಾರ ಉದ್ಘಾಟಿಸಲಾಯಿತು.

ಮೈಸೂರಿನ ಜೆ.ಕೆ.ಮೈದಾನದಲ್ಲಿರುವ ಪ್ಲಾಟಿನಂ ಜುಬಿಲಿ ಸಭಾಂಗಣದಲ್ಲಿ ಮೈಸೂರು ಮೆಡಿಕಲ್ ಕಾಲೇಜ್ ಅಲುಮ್ನಿ ಅಸೋಸಿಯೇಷನ್‌ನ (MAA)ಗೌರವಾಧ್ಯಕ್ಷ ಡಾ.ಸಿ.ಡಿ.ಶ್ರೀನಿವಾಸ್‌ಮೂರ್ತಿ ಅವರ 12 ಲಕ್ಷ ರೂ.ಗಳ ಆರ್ಥಿಕ ನೆರವಿನಿಂದ ಮರುವಿನ್ಯಾಸಗೊಳಿಸಿರುವ ಮೀಟಿಂಗ್ ಹಾಲ್ (ಬೋರ್ಡ್ ರೂಂ)ಅನ್ನು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ(ಕೆಬಿಜಿ) ಉದ್ಘಾಟಿಸಿದರು.

ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನಗೆ ತಿಳಿದಿರುವಂತೆ ಮೈಸೂರಿನಲ್ಲಿ 131 ಪಾರಂಪರಿಕ ಕಟ್ಟಡಗಳಿವೆ. ಅವುಗಳಲ್ಲಿ ಬಹುತೇಕ ಪಾರಂಪರಿಕ ಕಟ್ಟಡಗಳು ಹಾಳಾಗಿವೆ. ಪಾರಂಪರಿಕ ಕಟ್ಟಡಗಳ ಮಹತ್ವ ಅರಿಯದೆ ಸಂರಕ್ಷಣೆ ಮಾಡಲಾಗದು. ಸರ್ಕಾರಿ ಕಟ್ಟಡಗಳು ಸರ್ಕಾರದ್ದೇ ಆದರೂ ಯಾರಿಗೆ ಆರ್ಥಿಕವಾಗಿ ಶಕ್ತಿ ಇದೆಯೋ ಅಂತಹವರು ನವೀಕರಣ ಅಥವಾ ನಿರ್ವಹಣೆಗೆ ಆರ್ಥಿಕ ಸಹಕಾರ ನೀಡಬೇಕು. ಅದೇ ರೀತಿ ಎಂಎಂಸಿ ಆರ್‌ಐನ ಪ್ಲಾಟಿನಂ ಜುಬಿಲಿ ಸಭಾಂಗಣದ ಮೀಟಿಂಗ್ ಹಾಲ್ ನವೀಕರಣಕ್ಕೆ ಸಹಕಾರ ನೀಡಿರುವ ಡಾ.ಸಿ.ಡಿ.ಶ್ರೀನಿವಾಸ್ ಮೂರ್ತಿ ಅವರ ಸೇವೆ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿದೇಶಗಳಲ್ಲಿ ನೂರಾರು ವರ್ಷಗಳಷ್ಟು ಹಳೆಯ ಕಟ್ಟಡಗಳು ಇವತ್ತಿಗೂ ಸದೃಢವಾಗಿವೆ.



ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಪ್ಲಾಟಿನಂ ಜುಬಿಲಿ ಸಭಾಂಗಣದ ನವೀಕೃತ ಸಭಾ ಭವನವನ್ನು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ(ಕೆಬಿಜಿ) ಉದ್ಘಾಟಿಸಿದರು. (ಎಡದಿಂದ)ಖ್ಯಾತ ಉದ್ಯಮಿ ಡಾ.ಎಂ.ಜಗನ್ನಾಥ್ ಶೆಣೈ, ಮೈಸೂರು ಮೆಡಿಕಲ್ ಕಾಲೇಜ್ ಅಲುಮ್ನಿ ಅಸೋಸಿ ಯೇಷನ್‌ನ (MAA)ಗೌರವಾಧ್ಯಕ್ಷ ಡಾ.ಸಿ.ಡಿ.ಶ್ರೀನಿವಾಸ್‌ಮೂರ್ತಿ ಮತ್ತು ಅವರ ಪತ್ನಿ, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಣಿ ಉಪಸ್ಥಿತರಿದ್ದರು.

ಆದರೆ ಮೈಸೂರಲ್ಲಿ ಸರಿಯಾದ ನಿರ್ವಹಣೆ ಇಲ್ಲದೆ ಪಾರಂಪರಿಕ ಕಟ್ಟಡಗಳ ಸ್ಥಿತಿ ಶೋಚನೀಯವಾಗಿದೆ. ಪಾರಂಪರಿಕ ಕಟ್ಟಡಗಳ ಉಳಿವಿಗೆ ನಿರ್ವಹಣೆ ಬಹಳ ಮುಖ್ಯ. ಸರ್ಕಾರದವರು ಕಟ್ಟಡವನ್ನೇನೋ ಕಟ್ಟಿಸಿಕೊಡುತ್ತಾರೆ. ಆದರೆ ನಂತರ ಆ ಕಟ್ಟಡದ ಕಡೆ ತಿರುಗಿಯೂ ನೋಡುವುದಿಲ್ಲ. ಮೈಸೂರು ಜಿಲ್ಲಾಧಿಕಾರಿಗಳ ಹೊಸ ಕಟ್ಟಡ ನಿರ್ವಹಣೆ ಇಲ್ಲದೆ ಹಾಳಾಗುತ್ತಿರುವುದನ್ನು ಕಾಣಬಹುದು ಎಂದು ಬೇಸರ ವ್ಯಕ್ತಪಡಿಸಿದರು.

ದೇವರಾಜ ಮಾರುಕಟ್ಟೆಯನ್ನು ಕೆಡವಿ ಹೊಸದಾಗಿ ಕಟ್ಟಬೇಕು ಹಾಗೂ ಮಾರುಕಟ್ಟೆ ಇರುವ ಹಾಗೆಯೇ ಅದನ್ನು ಸಂರಕ್ಷಣೆ ಮಾಡಬೇಕು ಎಂಬ ಮಾತುಗಳನ್ನು ಕಳೆದ 15–20 ವರ್ಷಗಳಿಂದ ಕೇಳುತ್ತಲೇ ಇದ್ದೇವೆ. ಇದರ ನಡುವೆ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಇನ್ನಷ್ಟು ಹಾಳಾಗುತ್ತಿವೆಯೇ ಹೊರತು ಸಂರಕ್ಷಣೆ ಆಗುತ್ತಿಲ್ಲ. ಇತ್ತ ಕೆಡವಲು ಇಲ್ಲ ಎಂದು ವಿಷಾದಿಸಿದರು.

ನೂತನ ಸಂಸದರು ನಗರದ ಕೇಂದ್ರ ಭಾಗದಲ್ಲಿರುವ ಲ್ಯಾನ್ಸ್‌ಡೌನ್ ಪಾರಂಪರಿಕ ಕಟ್ಟಡವನ್ನು ಸಂರಕ್ಷಣೆ ಮಾಡುತ್ತೇವೆ ಎನ್ನುತ್ತಿದ್ದಾರೆ. ಈಗಾಗಲೇ ಲ್ಯಾನ್ಸ್‌ಡೌನ್ ಕಟ್ಟಡ ಬಹುತೇಕ ಹಾಳಾಗಿದೆ. ಯಾವಾಗ ಬೇಕಾದರೂ ಕುಸಿದು ಬೀಳಬಹುದು ಎಂಬುದನ್ನು ಕೆಲ ನುರಿತ ಇಂಜಿನಿಯರ್‌ಗಳೇ ಹೇಳುತ್ತಿದ್ದಾರೆ. ಅಲ್ಲದೆ ಈಗಾಗಲೇ ಲ್ಯಾನ್ಸ್‌ಡೌನ್ ಕಟ್ಟಡದ ಒಂದು ಭಾಗ ಕುಸಿದು ಬಿದ್ದು ಕೆಲವು ಮಂದಿ ಸಾವನ್ನಪ್ಪಿದ್ದಾರೆ. ಇಷ್ಟೆಲ್ಲಾ ಆದರೂ ಸಂರಕ್ಷಣೆ ಮಾಡುತ್ತೇವೆ ಎಂಬುದು ಸಾಧ್ಯಾನಾ... ರಾಜಕಾರಣಿಗಳು ಚೆನ್ನಾಗಿ ಮಾತನಾಡುತ್ತಾರೆ. ಆದರೆ ಉತ್ತಮ ಆಡಳಿತಗಾರರಲ್ಲ ಎಂಬ ಮಾತುಗಳು ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ವಿಚಾರದಲ್ಲಿ ನಿಜವಾಗುತ್ತಿರುವಂತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಮ್ಮ ಹೆಮ್ಮೆ: ಖ್ಯಾತ ಉದ್ಯಮಿ ಡಾ.ಎಂ.ಜಗನ್ನಾಥ್ ಶೆಣೈ ಮಾತನಾಡಿ, ಶತಮಾನೋತ್ಸವ ಸಂಭ್ರಮದಲ್ಲಿರುವ ಮೈಸೂರು ಮೆಡಿಕಲ್ ಕಾಲೇಜು ಇನ್ನೂ ನೂರಾರು ವರ್ಷ ಉಳಿಯಲಿ. ಈ ವರ್ಷದಿಂದ 50 ಮೆಡಿಕಲ್ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದನ್ನು ಕೇಳಿ ಖುಷಿಯಾಯಿತು. ಮೈಸೂರು ಮೆಡಿಕಲ್ ಕಾಲೇಜು ನಮ್ಮೆಲ್ಲರ ಹೆಮ್ಮೆ. ಈ ಕೊಡುಗೆ ನೀಡಿದ ಮೈಸೂರು ಮಹಾರಾಜರನ್ನು ಸ್ಮರಿಸಬೇಕು. ನಿರ್ವಹಣೆ ಇಲ್ಲದೆ ಉಳಿಸಿಕೊಳ್ಳುವುದು ಕಷ್ಟ. ಆದ್ದರಿಂದ ಮೈಸೂರಿನ ಪರಂಪರೆ ಉಳಿವಿಗೆ ಎಲ್ಲರೂ ಒಗ್ಗಟ್ಟಾಗಿ ಸೇರಿ ಕೆಲಸ ಮಾಡಬೇಕು ಎಂದರು.

ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಣಿ, ಆದಿಚುಂಚನಗಿರಿ ವಿವಿ ಕುಲಪತಿ ಡಾ.ಎಂ.ಎ.ಶೇಖರ್, ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ, ಮೈಸೂರು ಮೆಡಿಕಲ್ ಕಾಲೇಜ್ ಅಲುಮ್ನಿ ಅಸೋಸಿಯೇಷನ್‌ನ ಕಾರ್ಯಕಾರಿ ಅಧ್ಯಕ್ಷ ಡಾ.ಹೆಚ್.ಎನ್.ದಿನೇಶ್, ಕಾರ್ಯದರ್ಶಿ ಡಾ.ಹೆಚ್.ಬಿ.ಶಶಿಧರ್, ಖಜಾಂಚಿ ಡಾ.ಸರ್ವೇಶ ರಾಜೇ ಅರಸ್ ಮತ್ತಿತರರಿದ್ದರು.

ಓದಿದ ಜ್ಞಾನ ದೇಗುಲಕ್ಕೆ ನೀಡಿದ ಸಣ್ಣ ಕಾಣಿಕೆ...

1924ರಲ್ಲಿ ಆರಂಭವಾದ ಮೈಸೂರು ಮೆಡಿಕಲ್ ಕಾಲೇಜು ಭಾರತ ದೇಶದಲ್ಲಿ ಆರಂಭವಾದ 7ನೇ ಹಾಗೂ ರಾಜ್ಯದ ಮೊಟ್ಟ ಮೊದಲ ಮೆಡಿಕಲ್ ಕಾಲೇಜು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯ ಸಂಕೇತವಾಗಿದೆ. ಮೈಸೂರು ಮೆಡಿಕಲ್ ಕಾಲೇಜು ಶತಮಾನೋತ್ಸವದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಪ್ಲಾಟಿನಂ ಜುಬಿಲಿ ಸಭಾಂಗಣದಲ್ಲಿರುವ ಮೀಟಿಂಗ್ ಹಾಲ್ ನವೀಕರಣ ಮಾಡುವಂತೆ ತಿಳಿಸಿದಾಗ ಅತ್ಯಂತ ಸಂತೋಷದಿಂದ ಸಹಕಾರ ನೀಡಿದ್ದೇನೆ. ಇದು ನಾನು ಓದಿದ ಜ್ಞಾನ ದೇಗುಲಕ್ಕೆ ನೀಡಿದ ಸಣ್ಣ ಕಾಣಿಕೆ.

- ಡಾ.ಸಿ.ಡಿ.ಶ್ರೀನಿವಾಸ್ ಮೂರ್ತಿ, ಗೌರವಾಧ್ಯಕ್ಷರು, ಮೈಸೂರು ಮೆಡಿಕಲ್ ಕಾಲೇಜ್ ಅಲುಮ್ನಿ ಅಸೋಸಿಯೇಷನ್

ಜಯಲಕ್ಷ್ಮಿ ವಿಲಾಸ ಅರಮನೆ ಸಂರಕ್ಷಣೆಗೆ ಇನ್ಫೋಸಿಸ್ ಪ್ರತಿಷ್ಠಾನದಿಂದ 5 ಕೋಟಿ ರೂ. ಕೊಟ್ಟಿದ್ದರು. ಅದರಂತೆ ನವೀಕರಣವೂ ಆಯಿತು. ಆದರೆ ಇತ್ತೀಚೆಗೆ ಚಾವಣಿಯೇ ಕುಸಿದು ಬಿದ್ದಿದೆ. ಆದ್ದರಿಂದ ಪಾರಂಪರಿಕ ಕಟ್ಟಡ ಸಂರಕ್ಷಣೆಗೂ ಮುನ್ನ ಕಟ್ಟಡ ವಸ್ತುಸ್ಥಿತಿಯನ್ನು ಅರಿಯಬೇಕು. ಬೇರೆ ದೇಶಗಳಲ್ಲಿ ಪಾರಂಪರಿಕ ಕಟ್ಟಡಗಳು ಹೆಚ್ಚು ವರ್ಷಗಳ ಕಾಲ ಸದೃಢವಾಗಿರುವುದಕ್ಕೆ ಕಾರಣವೇನು ಎಂಬುದರ ಜೊತೆಗೆ ಭೌಗೋಳಿಕ ಅಂಶದ ಅಧ್ಯಯನವನ್ನು ಮಾಡಬೇಕು. ಹೇಳುವುದು ಸುಲಭ. ಆದರೆ ಅದರಂತೆ ಜವಾಬ್ದಾರಿ ತೆಗೆದುಕೊಳ್ಳುವುದು ಮುಖ್ಯ.

- ಡಾ.ಕೆ.ಬಿ.ಗಣಪತಿ, ಸಂಸ್ಥಾಪಕ ಸಂಪಾದಕರು, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್'

ಕನ್ನಡ–ಸಂಸ್ಕೃತಿ ಹೆಸರಲ್ಲಿ ನಕಲಿ ಸಂಘ–ಸಂಸ್ಥೆಗಳಿಂದ ಅನುದಾನ ಬಳಕೆ

- ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಬೇಸರ
- ಪ್ರಜ್ಞಾ ರಂಗೋತ್ಸವ–2024ಕ್ಕೆ ಚಾಲನೆ



ಪ್ರಜ್ಞಾ ರಂಗೋತ್ಸವ ಕಾರ್ಯಕ್ರಮವನ್ನು ಡೋಲು ಬಾರಿಸುವ ಮೂಲಕ ಉದ್ಘಾಟಿಸಲಾಯಿತು.

ಮೈಸೂರು, ಆ.24(ಎಸ್‌ಪಿಎನ್)– ಕನ್ನಡ – ಸಂಸ್ಕೃತಿ, ಪರಂಪರೆ ಹೆಸರಿನಲ್ಲಿ ನಕಲಿ ಸಂಘ–ಸಂಸ್ಥೆಗಳು ಸರ್ಕಾರದ ಅನುದಾನವನ್ನು ಬಳಸಿಕೊಳ್ಳುತ್ತಿವೆ. ಇದಕ್ಕೆ ಅಧಿಕಾರಿಗಳು ಸಾಥ್ ನೀಡುತ್ತಿದ್ದಾರೆ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಬೇಸರ ವ್ಯಕ್ತಪಡಿಸಿದರು.

ಮೈಸೂರು ಕಲಾಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಜಾನಪದ ಅಕಾಡೆಮಿ ಹಾಗೂ ಪ್ರಜ್ಞಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಸಹಯೋಗದೊಂದಿಗೆ ಏರ್ಪಡಿಸಿದ್ದ ಪ್ರಜ್ಞಾ ರಂಗೋತ್ಸವ–2024ರ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕಲಾವಿದ ಸೋಸಲೆ ಸಿದ್ದರಾಜು ನೇತೃತ್ವದಲ್ಲಿ ಪ್ರಜ್ಞಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಹಲವಾರು ಸಾಮಾಜಿಕ ಕಾರ್ಯಕ್ರಮಗಳನ್ನು ಕಳೆದ 25 ವರ್ಷಗಳಿಂದ ಹಮ್ಮಿಕೊಂಡು ಬಂದಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮೇಲಿನ ಗೀತೆಯನ್ನು ಸೋಸಲೆ ಸಿದ್ದರಾಜು ನೇತೃತ್ವದ ತಂಡ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಹಾಡಿ, ಜನ ಮಾನಸದಲ್ಲಿ ಉಳಿಯುವಂತೆ ಮಾಡಿರುವ ಕೀರ್ತಿ ಈ ತಂಡಕ್ಕೂ ಸಲ್ಲುತ್ತದೆ ಎಂದರು.

ಭಾರತೀಯ ಸಂಸ್ಕೃತಿ ಶ್ರೇಷ್ಠವಾಗಿದ್ದು, ವಿಶ್ವಕ್ಕೆ ಮಾದರಿಯಾಗಿದೆ. ಸಾಂಸ್ಕೃತಿಕ ಟ್ರಸ್ಟ್ ಮೂಲಕ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಮಕ್ಕಳಲ್ಲಿ ನಮ್ಮ ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ಪರಂಪರೆ ಬಗ್ಗೆ ಅರಿವು ಮೂಡಲಿದೆ ಎಂದ ಅವರು, ಪ್ರಸ್ತುತ ಸಂಘ ಸಂಸ್ಥೆಗಳು ಎರಡು ಬಗೆಯಲ್ಲಿವೆ. ಅದರಲ್ಲಿ ಅರ್ಹ ಸೌಲಭ್ಯಗಳು ಸಿಗಬೇಕಾಗಿರುವುದು ನಮ್ಮ ಕಲೆ, ಪರಂಪರೆಗಳನ್ನು ಪ್ರಾಮಾಣಿಕವಾಗಿ ಭಿತ್ತರಿಸುತ್ತಿರುವ ಸಂಘಗಳಿಗೆ ಸಿಗಬೇಕಾಗಿದೆ. ಆದರೆ, ಇಂದು ಹುಸಿಯಾಗಿದೆ ನಮ್ಮಲ್ಲಿ ಪ್ರಜ್ಞೆ ಎಂಬುದು ತುಂಬಾ ಅವಶ್ಯಕತೆಯಿದ್ದು, ನಕಲಿ ಸಂಘ–ಸಂಸ್ಥೆಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕಿದೆ ಎಂದರು.

ಜಾನಪದ ಗಾಯನ ಮತ್ತು ನೃತ್ಯ, ನಾಟಕ ಸೇರಿದಂತೆ ಇತರೆ ಸಾಂಸ್ಕೃತಿಕ ಚಟುವಟಿಕೆಗಳನ್ನು ಈ ಟ್ರಸ್ಟ್ ಮೂಲಕ ಹಲವಾರು ವಿದ್ಯಾರ್ಥಿಗಳನ್ನು ಮುಖ್ಯವಾಹಿನಿ ತರುವಲ್ಲಿ ಈ ಟ್ರಸ್ಟ್ ಸದಸ್ಯರು ಶ್ರಮಿಸಿದ್ದಾರೆ ಎಂದು ಪದಾಧಿಕಾರಿಗಳ ಕಾರ್ಯಕ್ಕೆ ಮೆಚ್ಚುಗೆ ಸೂಚಿಸಿದರು.

ಪ್ರಜ್ಞಾ ರಂಗೋತ್ಸವ–2024ಅನ್ನು ಉದ್ಘಾಟಿಸಿ ಮಾತನಾಡಿದ ಹಿರಿಯ ಬರಹಗಾರ ಕೋಲಾರದ ಕೋಟಿಗಾನಹಳ್ಳಿ ರಾಮಯ್ಯ, ತಳ ಸಮುದಾಯದಲ್ಲಿ ಸಮೂಹ ನಾಯಕತ್ವದ ಕೊರತೆ ಇದೆ. ಅದರಲ್ಲಿ ಸಂಘ ಸಂಸ್ಥೆಯಾಗಿರಬಹುದು ಅಥವಾ ವ್ಯಕ್ತಿಯಾಗಿರಬಹುದು ಸಾಮೂಹಿಕ ನಾಯಕತ್ವಕ್ಕೆ ಹೆಚ್ಚಿನ ಆದ್ಯತೆ ನೀಡುವುದು ಪ್ರಸ್ತುತ ಸನ್ನಿವೇಶಕ್ಕೆ ಅನಿವಾರ್ಯ ಎಂದರು.

ಈ ಹಿಂದೆ ತಳ ಸಮುದಾಯಗಳು ಒಟ್ಟಿಗೆ ಇದ್ದರೂ ಪರಸ್ಪರ ಮಾತನಾಡುವ ಆಗಿರಲಿಲ್ಲ. ಜಾನಪದ ಗಾಯನಗಳ ಮೂಲಕ, ಬೀದಿ ನಾಟಕಗಳ ಮೂಲಕ ತಮ್ಮ ನೋವನ್ನು ಸಮಾಜದ ಮುಂದೆ ಹೇಳಬೇಕಿತ್ತು. ಮುಂದಿನ 25 ವರ್ಷಗಳಲ್ಲಿ ನಮ್ಮ ಶಿಕ್ಷಣ ಪದ್ಧತಿ ಎಲ್ಲಿಗೆ ಮುಟ್ಟುತ್ತೋ ಕಾದು ನೋಡಬೇಕು. ಅದಕ್ಕಾಗಿ ತುಕ್ಕು ಹಿಡಿದಿರುವ ನಮ್ಮ ದುಡಿ, ಗಾಯನ, ತಮಟೆಗಳಿಗೆ ಸಾಣೆ ಹಿಡಿಯಬೇಕಿದೆ ಎಂದು ತಿಳಿಸಿದರು.

ಈ ವೇಳೆ ನಿವೃತ್ತ ಪ್ರಾಧ್ಯಾಪಕ ಪ್ರೊ ನಂಜರಾಜೇ ಅರಸ್, ಮಹಾರಾಜ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ ಸಿ.ರಾಮಸ್ವಾಮಿ, ರಂಗ ನಿರ್ದೇಶಕ ಸಿ.ಬಸವಲಿಂಗಯ್ಯ, ಪ್ರಜ್ಞಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷ ಸೋಸಲೆ ಸಿದ್ದರಾಜು ಸೇರಿದಂತೆ ಇತರರಿದ್ದರು.

ಮೈಸೂರಲ್ಲಿ 27ನೇ ನ್ಯಾಷನಲ್ ಶಿಟೋ ರಿಯು ಕರಾಟೆ ಚಾಂಪಿಯನ್‌ಶಿಪ್ ಪಂದ್ಯಾವಳಿ ಆರಂಭ





ಮೈಸೂರಿನ ಕೊಡವ ಸಮಾಜದಲ್ಲಿ ಶನಿವಾರ ಆರಂಭವಾದ ಕರಾಟೆ ಚಾಂಪಿಯನ್‌ಶಿಪ್ ಉದ್ಘಾಟನೆಗೆ ಆಗಮಿಸಿದ ಸಂಸದ ಯದುವೀರ್ ಅವರನ್ನು ಎಐಎಸ್‌ಕೆಯು ಪದಾಧಿಕಾರಿಗಳು ಸ್ವಾಗತಿಸಿದರು. ಪಂದ್ಯಾವಳಿಯಲ್ಲಿ ಶೈರಾ ಕೋತಪ್ಪ ಸೇರಿದಂತೆ ವಿಜೇತ ಪಟಾಣಿಗಳಿಗೆ ಎಐಎಸ್‌ಕೆಯು ಅಧ್ಯಕ್ಷ ಅರುಣ್ ಮಾಚಯ್ಯ ಪ್ರಮಾಣ ಪತ್ರ ವಿತರಿಸಿದ್ದನ್ನು ಮತ್ತೊಂದು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಆ.24(ಎಸ್‌ಬಿಡಿ)– ಮೈಸೂರು ವಿಜಯನಗರದಲ್ಲಿರುವ ಕೊಡವ ಸಮಾಜ ಸಭಾಂಗಣದಲ್ಲಿ 27ನೇ ನ್ಯಾಷನಲ್ ಶಿಟೋ ರಿಯು ಕರಾಟೆ ಡೊ ಚಾಂಪಿಯನ್‌ಶಿಪ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ.

ಆಲ್ ಇಂಡಿಯಾ ಶಿಟೋ ರಿಯು ಕರಾಟೆ ಡೊ ಯೂನಿಯನ್ (ಎಐಎಸ್‌ಕೆಯು) ವತಿಯಿಂದ ಏರ್ಪಡಿಸಿರುವ ಎರಡು ದಿನಗಳ ಈ ಕರಾಟೆ ಪಂದ್ಯಾವಳಿಯನ್ನು, ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿ, ಕ್ರೀಡಾಪಟುಗಳಿಗೆ ಶುಭ ಕೋರಿದರು.

ಈ ವೇಳೆ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾಗಿರುವ ಶಾಸಕ ಎ.ಎಸ್.ಪೊನ್ನಣ್ಣ, ಅಶ್ವಿನಿ ಸ್ಪೋರ್ಟ್ಸ್ ಫೌಂಡೇಷನ್‌ನ ಸಂಸ್ಥಾಪಕರೂ ಆದ ಒಲಂಪಿಯನ್ ಅಶ್ವಿನಿ ಕರುಂಬಯ್ಯ, ಎಐಎಸ್‌ಕೆಯು ತಾಂತ್ರಿಕ ಸಲಹೆಗಾರರು ಹಾಗೂ ವೀಕ್ಷಕರಾದ ಸಿಂಗಾಪುರದ ಸೆನ್‌ಸೈ ಟಿ.ಎಸ್.ವಾಂಗ್, ಮಲೇಷಿಯಾದ ಸೆನ್‌ಸೈ ಜಾರ್ಜ್ ಥಾನ್, ಎಐಎಸ್‌ಕೆಯು ಅಧ್ಯಕ್ಷರಾದ ಮಾಜಿ ಶಾಸಕ ಅರುಣ್ ಮಾಚಯ್ಯ, ಪ್ರಧಾನ ಕಾರ್ಯದರ್ಶಿ ರಾಹುಲ್ ತಾವ್ಡೆ, ಸಂಘಟನಾ ಸಮಿತಿಯ ವಿಶಾಕ್ ಅಯ್ಯಣ್ಣ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಎಂಟು ಟಟಾಮಿಯಲ್ಲಿ ಪಂದ್ಯ: ಈ ರಾಷ್ಟ್ರೀಯ ಕರಾಟೆ ಪಂದ್ಯಾವಳಿಯಲ್ಲಿ 17 ರಾಜ್ಯಗಳ 1350ಕ್ಕೂ ಹೆಚ್ಚು ಕರಾಟೆ ಪಟುಗಳು ಭಾಗವಹಿಸಲಿದ್ದಾರೆ. 6ರಿಂದ 13 ವರ್ಷದ ಬಾಲಕ ಮತ್ತು ಬಾಲಕಿಯರ ಪಂದ್ಯಾವಳಿ ಶನಿವಾರ ನಡೆದಿದೆ. ಭಾನುವಾರ 13 ವರ್ಷ ಮೇಲ್ಪಟ್ಟ ಕರಾಟೆ ಪಟುಗಳಿಗೆ ವಿವಿಧ ವಿಭಾಗಗಳಲ್ಲಿ ಪಂದ್ಯ ನಡೆಯಲಿವೆ. 8 ಟಟಾಮಿ(ಕೋರ್ಟ್)ಗಳಲ್ಲಿ ಕರಾಟೆ ಪಟುಗಳು ಸೆಣಸಾಡಲಿದ್ದಾರೆ. ಏಷಿಯನ್ ಜೆಫ್ರಿಗಳು ಹಾಗೂ ವಿಶ್ವ ಕರಾಟೆ ಮಂಡಳಿಯಿಂದ ಮಾನ್ಯತೆ ಪಡೆದ ತೀರ್ಪುಗಾರರು ಪಂದ್ಯಾವಳಿಯ ಸಂಪೂರ್ಣ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಸೆನ್‌ಸೈಗಳಾದ (ಟೀಚರ್ಸ್) ಟಿ.ಎಸ್.ವಾಂಗ್ ಹಾಗೂ ಜಾರ್ಜ್ ಥಾನ್ ತಾಂತ್ರಿಕ ಸಲಹೆ ಜೊತೆಗೆ ವೀಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಭಾಂಗಣದ ಬಳಿ ಆಂಬುಲೆನ್ಸ್, ಕರಾಟೆ ಪಟುಗಳಿಗೆ ಕಾಫಿ–ತಿಂಡಿ, ಕುಡಿಯುವ ನೀರು, ಊಟದ ವ್ಯವಸ್ಥೆ ಮಾಡಲಾಗಿದೆ. ಈ ಪಂದ್ಯಾವಳಿಯಲ್ಲಿ ವಿಜೇತರಾಗುವ ಕರಾಟೆ ಪಟುಗಳು ಸಿಂಗಾಪುರದಲ್ಲಿ ನ.27ರಿಂದ ಡಿ.4ರವರೆಗೆ ನಡೆಯಲಿರುವ ಏಷ್ಯಾ ಪೆಸಿಫಿಕ್ ಶಿಟೋ ರಿಯು ಕರಾಟೆ ಡೊ ಚಾಂಪಿಯನ್‌ಶಿಪ್‌ಗೆ ಅರ್ಹತೆ ಪಡೆಯುತ್ತಾರೆ ಎಂದು ವಿಶ್ವ ಶಿಟೋ ರಿಯು ಕರಾಟೆ ಫೆಡರೇಷನ್‌ನ ನಿರ್ದೇಶಕರೂ ಆದ ಎಐಎಸ್‌ಕೆಯು ಅಧ್ಯಕ್ಷ ಅರುಣ್ ಮಾಚಯ್ಯ ತಿಳಿಸಿದ್ದಾರೆ.

ನ್ಯಾ. ಕೆಂಪಣ್ಣ ಆಯೋಗದ ವರದಿ ಬಹಿರಂಗಪಡಿಸುವಂತೆ ಸಿಎಂ ಸಿದ್ದರಾಮಯ್ಯಗೆ ಸೂಚಿಸಿ

ರಾಜ್ಯಪಾಲರಿಗೆ ಸಿ.ಟಿ.ರವಿ ಮನವಿ



ಬೆಂಗಳೂರು, ಆ.24– ಅರ್ಕಾವತಿ ಬಡಾವಣೆ ಅಕ್ರಮ ಡಿನೋಟಿಫಿಕೇಷನ್ ಮತ್ತು ಭ್ರಷ್ಟಾಚಾರ ಆರೋಪ ಕುರಿತು ನ್ಯಾಯಮೂರ್ತಿ ಕೆಂಪಣ್ಣ ಅವರ ವರದಿಯನ್ನು ಬಹಿರಂಗಪಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೂಚನೆ ನೀಡುವಂತೆ ಬಿಜೆಪಿ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಎಂಎಲ್‌ಸಿ ಸಿಟಿರವಿ ಶನಿವಾರ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ಮನವಿ ಮಾಡಿದ್ದಾರೆ.

ಈ ಸಂಬಂಧ ರಾಜ್ಯಪಾಲರಿಗೆ ಪತ್ರ ಬರೆದಿರುವ ಸಿಟಿ ರವಿ, ಈ ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮಾಡಲಾದ ಅಂದಾಜು ರೂ.8,000 ಕೋಟಿ ಮೊತ್ತದ ಅರ್ಕಾವತಿ ಬಡಾವಣೆಗೆ ಸಂಬಂಧಿಸಿದ ಸುಮಾರು 852 ಎಕರೆಯಷ್ಟು ಜಮೀನಿನ ಡಿನೋಟಿಫಿಕೇಷನ್ ಅಥವಾ 'ರೀ ಡು' ಬಗ್ಗೆ ಗಮನ ಸೆಳೆಯಲು ಬಯಸುತ್ತೇನೆ.

2014 ರಲ್ಲಿ ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯ, ನ್ಯಾಯಮೂರ್ತಿ ಕೆಂಪಣ್ಣರವರ ನೇತೃತ್ವದ ವಿಚಾರಣಾ ಆಯೋಗವನ್ನು ಕಮಿಷನ್ ಆಫ್ ಎನ್‌ಕ್ವೈರಿ ಆಕ್ಟ್ 1952ರಂತೆ ರಚಿಸಿದ್ದರು. ಅದರಂತೆ ಈ ಆಯೋಗ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ನೀಡಿದೆ. ಆಯೋಗಗಳ ತನಿಖಾ ವರದಿಗಳು ಸಾರ್ವಜನಿಕ ದಾಖಲೆಗಳಾಗಿದ್ದು, ಅದನ್ನು ಜನಸಾಮಾನ್ಯರಿಗೆ ದೊರಕುವ ಹಾಗೆ ಮಾಡುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಆದರೆ ಇದುವರೆಗೂ ಆಯೋಗದ ವರದಿಯನ್ನು ಬಿಡುಗಡೆ ಮಾಡದೇ ಇರುವುದು ಸಂಶಯಕ್ಕೆ ಕಾರಣವಾಗಿದೆ ಎಂದು ಅವು ತಿಳಿಸಿದ್ದಾರೆ.

ಮುಖ್ಯಮಂತ್ರಿಗಳ ಕಾರ್ಯಾಲಯವು ಈ ವರದಿಯನ್ನು ಸಾರ್ವಜನಿಕ ಪರಿಶೀಲನೆಗೆ ಲಭ್ಯವಾಗುವಂತೆ ತೋರುತ್ತಿಲ್ಲ. ರಾಜ್ಯದ ಜನಪ್ರತಿನಿಧಿಯಾಗಿ ನಾನು ಸಹ ಈ ವರದಿಯ ಬಿಡುಗಡೆಗಾಗಿ ಕಾಯುತ್ತಿದ್ದೇನೆ. ತಮ್ಮ ಸರ್ಕಾರ ಈ ವರದಿಯನ್ನು ಬಿಡುಗಡೆ ಮಾಡದೇ ಮುಚ್ಚಿಡುವ ಕಾರ್ಯ ಮಾಡುತ್ತಿರುವುದು ನಿಮ್ಮ ಮತ್ತು ನಿಮ್ಮ ಸರ್ಕಾರದ ಪ್ರಾಮಾಣಿಕತೆ ಹಾಗೂ ಪಾರದರ್ಶಕತೆಯ ಕುರಿತು ಸಂಶಯ ಹಾಗೂ ಸಂದೇಹ ಹುಟ್ಟುವಂತೆ ಮಾಡುತ್ತಿದೆ ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.

ನ್ಯಾಯಮೂರ್ತಿ ಕೆಂಪಣ್ಣ ಅವರ ವರದಿಯನ್ನು ಬಹಿರಂಗಪಡಿಸುವಂತೆ ಸಿದ್ದರಾಮಯ್ಯ ಅವರಿಗೆ ಸೂಚನೆ ನೀಡಬೇಕು, ಆ ಮೂಲಕ ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ರಾಜ್ಯಪಾಲರ ಬದ್ಧತೆಯನ್ನು ಬಲಪಡಿಸಿದಂತಾಗುತ್ತದೆ ಎಂದು ಸಿ.ಟಿ.ರವಿ ಪ್ರತಿಪಾದಿಸಿದ್ದಾರೆ.

ಅನಾಥನ ಹೆಸರಲ್ಲಿ ಇನ್ಶೂರೆನ್ಸ್ ಮಾಡಿಸಿ ಆ ಹಣಕ್ಕಾಗಿ ಆತನ ಹೆಣ ಬೀಳಿಸಿದ!

- ಗ್ರಹಚಾರ ಕೆಟ್ಟು ಪೊಲೀಸರ ಅತಿಥಿಯಾದ
- ವರ್ಷದ ಹಿಂದೆ ನಡೆದಿದ್ದ ಅಮಾನವೀಯ ಕೃತ್ಯ

ಮೈಸೂರು, ಆ.24(ಎಸ್‌ಬಿಡಿ)– ಇನ್ಶೂರೆನ್ಸ್ ಹಣದ ಆಸೆಗಾಗಿ ತನ್ನ ಬಳಿ ಕೆಲಸ ಮಾಡುತ್ತಿದ್ದ ನೌಕರನನ್ನೇ ಹೋಟೆಲ್ ಮಾಲೀಕನೊಬ್ಬ ಹತ್ಯೆ ಮಾಡಿರುವ ಪ್ರಕರಣ ವರ್ಷದ ನಂತರ ಬಯಲಾಗಿದೆ.

ಮಳವಳ್ಳಿಯ ಎನ್‌ಇಎಸ್ ಬಡಾವಣೆ ನಿವಾಸಿ ಎನ್.ಶಿವ(33), ತನ್ನ ಹೋಟೆಲ್‌ನ ಕಾರ್ಮಿಕನನ್ನೇ ಹತ್ಯೆ ಮಾಡಿದವನಾಗಿದ್ದು, ಕೊಲೆಯಾದ ವ್ಯಕ್ತಿಯ ಹೆಸರು ವಿಜಯ್(37) ಎಂಬುದು ಮಾತ್ರ ತಿಳಿದುಬಂದಿದ್ದು, ಆತನ ಬಗ್ಗೆ ಬೇರೆ ಯಾವುದೇ ಮಾಹಿತಿ ಇಲ್ಲ.

2023ರ ಆಗಸ್ಟ್ 8ರಂದು ವಿಜಯ್‌ನನ್ನು ಮೈಸೂರು–ಬನ್ನೂರು ರಸ್ತೆಯ ದತ್ತಾ ಫಾರಂ ಬಳಿ ಹತ್ಯೆ ಮಾಡಿದ್ದ ಶಿವು, ಶವದ ಬಳಿ ಹೀರೋ ಮೆಸ್ಟ್ರೋ ಸ್ಕೂಟರ್ ಅನ್ನು ಬೀಳಿಸಿ, ಅಪಘಾತದಲ್ಲಿ ವಿಜಯ್ ಸತ್ತಂತೆ ಬಿಂಬಿಸಿ, ಮಳವಳ್ಳಿಗೆ ತೆರಳಿದ್ದ. ಅಪಘಾತವಾಗಿದೆ ಎಂದು ವರುಣ ಪೊಲೀಸರು ಮಾಹಿತಿ ನೀಡಿದ ನಂತರ ಮರುದಿನ ಮೈಸೂರಿಗೆ ಆಗಮಿಸಿದ ಶಿವು, ಅಪಘಾತದಲ್ಲಿ ಸತ್ತಿರುವುದು ತನ್ನ ಸಹೋದರ ಎಂದು ಪೊಲೀಸರಿಗೆ ದೂರು ಸಲ್ಲಿಸಿ ಅದರ ಆಧಾರದ ಮೇರೆಗೆ ಇನ್ಶೂರೆನ್ಸ್ ಕ್ಲೈಮ್‌ಗಾಗಿ ಅರ್ಜಿ ಸಲ್ಲಿಸಿದ್ದ. ಆದರೆ ಕೆಲವು ತಾಂತ್ರಿಕ ಕಾರಣಗಳಿಂದ ಎಲ್‌ಐಸಿಯವರು ಪಾಲಿಸಿ ಕ್ಲೈಮ್ ಮಾಡುವುದನ್ನು ಹೋಲ್ಡ್ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಈ ಪ್ರಕರಣದಲ್ಲಿ ವರುಣ ಠಾಣೆ ಪೊಲೀಸರು ವಿಜಯ್ ಅಪಘಾತದಲ್ಲಿ ಸಾವನ್ನಪ್ಪಿರುವುದಾಗಿ ಪ್ರಕರಣ ದಾಖಲಿಸಿಕೊಂಡಿದ್ದರು.

ಯೂಟ್ಯೂಬರ್ ಮಾಹಿತಿ: ಈ ಘಟನೆ ನಡೆದು ಸರಿಯಾಗಿ ಒಂದು ವರ್ಷದ ನಂತರ ಮಳವಳ್ಳಿಯ ಯೂಟ್ಯೂಬರ್ ಎಂ.ಎಸ್.ಸುರೇಶ್‌ಬಾಬು ಎಂಬುವರು ಅಂಚೆ ಮೂಲಕ ಕಳುಹಿಸಿದ ಪತ್ರ ವರುಣ ಠಾಣೆಗೆ ತಲುಪಿದೆ. ಅದನ್ನು ಠಾಣೆಯ ಸಬ್‌ಇನ್ಸ್‌ಪೆಕ್ಟರ್ ವಿ.ಚೇತನ್ ಅವರು ಗಮನಿಸಿದಾಗ, ಯೂಟ್ಯೂಬರ್ ಸುರೇಶ್‌ಬಾಬು ತನ್ನ ಪತ್ರದಲ್ಲಿ ಕಳೆದ ವರ್ಷ ಆಗಸ್ಟ್ 8ರಂದು ವಿಜಯ್ ಎಂಬಾತ ಮೈಸೂರು–ಬನ್ನೂರು ರಸ್ತೆಯ ದತ್ತಾ ಫಾರಂ ಬಳಿ ಅಪಘಾತದಲ್ಲಿ ಮೃತಪಟ್ಟಿರುವುದಾಗಿ ವರುಣ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ಸತ್ಯಕ್ಕೆ ದೂರವಾಗಿದ್ದು, ಆತನನ್ನು ಮಳವಳ್ಳಿಯ ಶಿವು ಎಂಬಾತ ಇನ್ಶೂರೆನ್ಸ್ ಹಣದ ಆಸೆಗಾಗಿ ಕೊಲೆ ಮಾಡಿ, ಅಪಘಾತವಾದಂತೆ ಬಿಂಬಿಸಿದ್ದ. ಈ ವಿಚಾರ ಇತ್ತೀಚೆಗೆ ತನಗೆ ತಿಳಿದು ಯೂಟ್ಯೂಬ್‌ನಲ್ಲಿ ಪ್ರಸಾರ ಮಾಡಿದಾಗ ಶಿವುವಿನ ಸಹೋದರ ಅಭಿಷೇಕ್ ಎಂಬಾತ ವಿಡಿಯೋ ಯೂಟ್ಯೂಬ್‌ನಿಂದ ತೆಗೆದು ಹಾಕುವಂತೆ ತನಗೆ ಬೆದರಿಕೆ ಹಾಕಿದ್ದಾನೆ ಎಂದು ಬರೆದಿದ್ದರು.

ತಕ್ಷಣ ಜಾಗೃತರಾದ ಸಬ್‌ಇನ್ಸ್‌ಪೆಕ್ಟರ್ ಚೇತನ್ ಅವರು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಸಾಕ್ಷ್ಯಾಧಾರಗಳೊಂದಿಗೆ ಠಾಣೆಗೆ ಹಾಜರಾಗಿ ತನಿಖೆಗೆ ಸಹಕರಿಸುವಂತೆ ಸುರೇಶ್‌ಬಾಬು ಅವರಿಗೆ ಇದೇ ಆಗಸ್ಟ್ 13ರಂದು ನೋಂದಾಯಿತ ಅಂಚೆ ಮೂಲಕ ನೋಟಿಸ್ ರವಾನಿಸಿದ್ದರು. ಈ ಹಿನ್ನೆಲೆಯಲ್ಲಿ ಆ.16ರಂದು ಠಾಣೆಗೆ ಹಾಜರಾದ ಸುರೇಶ್‌ಬಾಬು ತನಗೆ ತಿಳಿದಿರುವ ವಿಚಾರಗಳನ್ನು ಸಬ್‌ಇನ್ಸ್‌ಪೆಕ್ಟರ್ ಚೇತನ್ ಅವರಿಗೆ ತಿಳಿಸಿದ್ದರು.

ಇನ್ಶೂರೆನ್ಸ್ ಹಣಕ್ಕಾಗಿ ಅನಾಥ ನೌಕರನೇ ಅಣ್ಣನಾದ: ಅಪಘಾತದಲ್ಲಿ ಮೃತಪಟ್ಟನೆಂದು ಬಿಂಬಿಸಲಾಗಿದ್ದ ವಿಜಯ್ ಅನಾಥನಾಗಿದ್ದು, ಆತನಿಗೂ ಶಿವುಗೂ ಯಾವುದೇ ಸಂಬಂಧವಿಲ್ಲ. ಸುಮಾರು 16 ವರ್ಷಗಳ ಹಿಂದೆ ಮೈಸೂರಿನ ಪುರಭವನದಲ್ಲಿ ಹೋಟೆಲ್ ಕೆಲಸಗಾರ ಬ್ರೋಕರ್ ಮಹದೇವ ಎಂಬುವವನ ಕಡೆಯಿಂದ ಶಿವುವಿನ ತಂದೆ ನರಸಿಂಹಯ್ಯ ಅವರಿಗೆ ವಿಜಯ್ ಪರಿಚಯವಾಗಿದ್ದ. ಅವರು ಆತನನ್ನು ಮಳವಳ್ಳಿಗೆ ಕರೆತಂದು ತಮ್ಮ ಹೋಟೆಲ್‌ನಲ್ಲಿ ಕೆಲಸಕ್ಕೆ ಇಟ್ಟುಕೊಂಡಿದ್ದರು. ಈತನಿಗೆ ಶಿವು ತನ್ನ ಮನೆ ವಿಳಾಸದಲ್ಲೇ ಆಧಾರ್ ಕಾರ್ಡ್ ಮಾಡಿಸಿಕೊಟ್ಟಿದ್ದ.

ಮಳವಳ್ಳಿಯಲ್ಲಿ ಹೋಟೆಲ್ ನಡೆಸುತ್ತಿದ್ದ ಶಿವು, 28 ಲಕ್ಷ ರೂ. ಸಾಲ ಮಾಡಿಕೊಂಡಿದ್ದ ಎಂದು ಹೇಳಲಾಗಿದೆ. ಅದೇ ವೇಳೆ ವಿಜಯ್ ವಿಪರೀತವಾಗಿ ಕುಡಿಯುತ್ತಿದ್ದರಿಂದ ಆತ ಅನಾರೋಗ್ಯಕ್ಕೀಡಾಗಿ ಶೀಘ್ರದಲ್ಲೇ ಸಾಯಬಹುದು ಎಂದು ಭಾವಿಸಿದ್ದ ಶಿವು, ವಿಜಯ್ ಹೆಸರಿನಲ್ಲಿ 2020ರಲ್ಲಿ ಮದ್ದೂರು ಎಲ್‌ಐಸಿ ಶಾಖೆಯಲ್ಲಿ 8 ಲಕ್ಷದ ಜೀವನ್ ಆನಂದ್ ಪಾಲಿಸಿ ಹಾಗೂ 2021ರಲ್ಲಿ ಕೊಳ್ಳೆಗಾಲ ಬ್ರಾಂಚ್‌ನಲ್ಲಿ ಜೀವನ್ ಆನಂದ್ ಪಾಲಿಸಿ ಮಾಡಿಸಿ, ತಾನೇ ಪ್ರೀಮಿಯಂ ಕಟ್ಟುತ್ತಿದ್ದ. ವಿಜಯ್ ಅಪಘಾತದಲ್ಲಿ ಮೃತಪಟ್ಟರೆ ವಿಮೆ ಹಣ ಡಬಲ್ ಅಂದರೆ ಒಟ್ಟು 34 ಲಕ್ಷ ರೂ. ದೊರೆಯುತ್ತದೆ ಎಂದು ಯಾರೋ ಹೇಳಿದ್ದನ್ನು ನಂಬಿದ ಶಿವು, ಅನಾಥ ಕಾರ್ಮಿಕ ವಿಜಯ್‌ನನ್ನು ಕೊಲೆ ಮಾಡಿ, ಅಪಘಾತವಾದಂತೆ ಬಿಂಬಿಸಿ, ವಿಮೆ ಹಣ ಪಡೆಯಲು ನಿರ್ಧರಿಸಿದ್ದ ಎಂಬುದು ಶಿವುವನ್ನು ಸಬ್‌ಇನ್ಸ್‌ಪೆಕ್ಟರ್ ಚೇತನ್ ವಿಚಾರಣೆಗೊಳಪಡಿಸಿದ ವೇಳೆ ತಿಳಿದುಬಂದಿದೆ.

ವಿಜಯ್ ಹೆಸರಲ್ಲೇ ಸ್ಕೂಟರ್ ಖರೀದಿ: ವಿಜಯ್‌ನನ್ನು ಹತ್ಯೆ ಮಾಡಿ, ಅಪಘಾತದಲ್ಲಿ ಸತ್ತಂತೆ ಬಿಂಬಿಸಲು ಮಾಸ್ಟರ್ ಪ್ಲಾನ್ ಹಾಕಿಕೊಂಡ ಶಿವು, ಅಪಘಾತಕ್ಕಾಗಿಯೇ ವಿಜಯ್ ಹೆಸರಿನಲ್ಲಿ ಸಿದ್ದರಾಜು ಎಂಬುವವರಿಂದ 20 ಸಾವಿರ ರೂ.ಗಳಿಗೆ ಮೆಸ್ಟ್ರೋ ಸ್ಕೂಟರ್ ಅನ್ನು(ಕೆಎ–11 ಇಇ–4522) ಖರೀದಿಸಿದ್ದಲ್ಲದೆ ವಿಜಯ್‌ಗೆ ಎಲ್‌ಎಲ್‌ಆರ್ ಕೂಡ ಮಾಡಿಸಿಕೊಟ್ಟಿದ್ದ.

ನಂತರ ಕಳೆದ ವರ್ಷ ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ಸ್ಕೂಟರ್ ಅನ್ನು ಮೈಸೂರಿಗೆ ತಂದು ಮೈಸೂರು–ಬನ್ನೂರು ರಸ್ತೆಯ ದತ್ತಾ ಫಾರಂ ಸಮೀಪವಿರುವ ಪೆಟ್ರೋಲ್ ಬಂಕ್ ಬಳಿ ತಾನೇ ಸ್ಕೂಟರ್ ಪಂಕ್ಚರ್ ಮಾಡಿ, ಪೆಟ್ರೋಲ್ ಬಂಕ್‌ನವರಿಗೆ ಮನವಿ ಮಾಡಿಕೊಂಡು ಸ್ಕೂಟರ್ ಅನ್ನು ಅಲ್ಲಿಯೇ ನಿಲ್ಲಿಸಿ, ಮಳವಳ್ಳಿಗೆ ತೆರಳಿದ್ದ. 2023ರ ಆಗಸ್ಟ್ 8ರಂದು ತನ್ನ ಸ್ನೇಹಿತ ಸಿದ್ದರಾಜು ಎಂಬುವವರ ಕಾರನ್ನು ತೆಗೆದುಕೊಂಡು ವಿಜಯ್ ಜೊತೆ ದತ್ತಾ ಫಾರಂ ಬಳಿಗೆ ಶಿವು ಬಂದಿದ್ದಾನೆ. ದಾರಿಯುದ್ದಕ್ಕೂ ವಿಜಯ್‌ಗೆ ಮದ್ಯ ಕುಡಿಸುತ್ತಾ ಬಂದ ಶಿವು ಅಂದು ರಾತ್ರಿ 11.45ರ ಸುಮಾರಿನಲ್ಲಿ ದತ್ತಾ ಫಾರಂ ಬಳಿ ಕಾರನ್ನು ನಿಲ್ಲಿಸಿಕೊಂಡಿದ್ದು, ವಿಜಯ್ ಮೂತ್ರ ವಿಸರ್ಜನೆಗಾಗಿ ಕೆಳಗೆ ಇಳಿದಾಗ ಕಲ್ಲಿನಿಂದ ಆತನ ಮೇಲೆ ಹಲ್ಲೆ ನಡೆಸಿ, ಹತ್ಯೆಗೈದಿದ್ದಾನೆ. ವಿಜಯ್ ಸತ್ತಿರುವುದನ್ನು ಖಚಿತಪಡಿಸಿಕೊಂಡ ನಂತರ ಕೆಲದಿನಗಳ ಹಿಂದೆ ಪೆಟ್ರೋಲ್ ಬಂಕ್ ಬಳಿ ತಾನು ನಿಲ್ಲಿಸಿದ್ದ ಸ್ಕೂಟರ್ ಅನ್ನು ತಂದು ರಸ್ತೆಯಲ್ಲಿ ಬೀಳಿಸಿ, ಅದರ ಪಕ್ಕದಲ್ಲಿ ವಿಜಯ್ ಶವವನ್ನು ಹಾಕಿದ್ದಲ್ಲದೆ ಒಂದು ಚೀಟಿಯಲ್ಲಿ ತನ್ನ ಮೊಬೈಲ್ ನಂಬರ್ ಬರೆದು ವಿಜಯ್ ಶರ್ಟ್ ಜೇಬಿನಲ್ಲಿಟ್ಟು ಕಾರಿನಲ್ಲಿ ಶಿವು ಮಳವಳ್ಳಿಗೆ ವಾಪಸ್ಸಾಗಿದ್ದಾನೆ.

ಅಂದು ಮಧ್ಯರಾತ್ರಿ ವರುಣ ಠಾಣೆ ಪೊಲೀಸರು ಈತನ ಮೊಬೈಲ್‌ಗೆ ಕರೆ ಮಾಡಿ, ಅಪಘಾತದಲ್ಲಿ ವ್ಯಕ್ತಿಯೋರ್ವ ಸಾವನ್ನಪ್ಪಿರುವ ವಿಚಾರ ತಿಳಿಸಲಾಗಿ ಮರುದಿನ ಠಾಣೆಗೆ ಬಂದ ಶಿವು ತನ್ನ ಹೆಸರನ್ನು ಶಿವಕುಮಾರ್ ಎಂದು ತಾನು ಮಳವಳ್ಳಿಯ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಎದುರಿನ ಶಾಂತಿಸಾಗರ್ ಹೋಟೆಲ್ ಮಾಲೀಕ ಎಂದು ದೂರಿನಲ್ಲಿ ನಮೂದಿಸಿದ್ದ(ಮಳವಳ್ಳಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗ ಶಾಂತಿಸಾಗರ್ ಎಂಬ ಹೆಸರಿನಲ್ಲಿ ಹೋಟೆಲ್ ಇಲ್ಲ) ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ.

ಕಳೆದ ವರ್ಷ ಆಗಸ್ಟ್ 9 ರಂದು ವರುಣ ಠಾಣೆಯಲ್ಲಿ ದಾಖಲಾಗಿದ್ದ ಅಪಘಾತದ ಸಾವು ಪ್ರಕರಣವನ್ನು ವರ್ಷದ ನಂತರ ಅಂದರೆ ಪ್ರಸಕ್ತ ಆ.23ರಂದು ವರುಣ ಠಾಣೆ ಸಬ್‌ಇನ್ಸ್‌ಪೆಕ್ಟರ್ ಚೇತನ್ ಅವರು ಕೊಲೆ ಹಾಗೂ ಸಾಕ್ಷ್ಯ ನಾಶ ಪ್ರಕರಣವನ್ನಾಗಿ ದಾಖಲಿಸಿಕೊಂಡು ಶಿವುವನ್ನು ಬಂಧಿಸಿ, ತನಿಖೆ ಮುಂದುವರೆಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಜ್ಯೋತಿಷಿ : ಶುಭ ಸುದ್ದಿ, ನಿಮ್ಮ ಕುಂಡಲಿಲಿ ಧನ ರಾಶಿಯೇ ಇದೆ.
ಗುಂಡ : ಅದೆಲ್ಲ ಸರಿ ಸ್ವಾಮಿ. ಅದನ್ನು ಅಕೌಂಟ್‌ಗೆ ಟ್ರಾನ್ಸ್‌ಫರ್ ಮಾಡೋದು ಹೇಗೆ ಹೇಳಿ!?

ಮೈಸೂರು ಮಿತ್ರ
ಭಾನುವಾರ, 25 ಆಗಸ್ಟ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಮುಖದಲ್ಲಿ ಕಲೆಯಿಲ್ಲದ ಹುಡುಗಿಗಿಂತ ಮನಸ್ಸಲ್ಲಿ ಕೊಳೆಯಿಲ್ಲದ ಹುಡುಗಿಂಯೊಂದಿಗಿನ ಜೀವನ ಸುಂದರವಾಗಿರುತ್ತದೆ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಂಪಿಗೆ ಹೋಗುವುದಕ್ಕಿಂತ ಕೊಂಪೆಯಲ್ಲಿರುವುದೇ ಲೇಸು

ನಿಮ್ಮ ಪತ್ರಗಳು

ಮೈಸೂರಲ್ಲಿ ಮೈಕಾಸುರನ ಹಾವಳಿ

ಮಾನ್ಯರೆ,

ಇತ್ತೀಚೆಗೆ ಮೈಸೂರು ನಗರದಲ್ಲಿ ಒಂದು ಹೊಸ ಪಿಡುಗು ಪ್ರಾರಂಭವಾಗಿದೆ. ಅದೆಂದರೆ ಎಲ್ಲಾ ಬಡಾವಣೆಗಳಲ್ಲಿ 'ಮೈಕಾಸುರ'ನ ಹಾವಳಿ. ಇದು ಬೆಳಿಗ್ಗೆ 6 ಗಂಟೆಗೆ ಶುರುವಾಗುತ್ತದೆ. ವಿಷಯ ಏನೆಂದರೆ ತರಕಾರಿ, ಹಣ್ಣು, ಹೂವು, ಸೊಪ್ಪು ಮಾರುವವರಾದಿಯಾಗಿ, ಹಳೇ ಪೇಪರ್, ಕಬ್ಬಿಣ, ಹಾಸಿಗೆ ರಿಪೇರಿ, ಕುಕ್ಕರ್, ಸ್ಟವ್ ರಿಪೇರಿ, ಚಾಕು, ಈಳಿಗೆಮಣೆ ಸಾಣೆ ಹಿಡಿಯುವವರು, ಚಪ್ಪಲಿ ಮಾರಾಟ, ಹಸಿ ಕಡ್ಲೆಕಾಯಿ, ಗಾಣದ ಎಣ್ಣೆ, ಕತ್ತೆ ಹಾಲು, ಕೂದಲು ಕೊಳ್ಳುವವರು, ಟವೆಲ್, ಬೆಡ್ ಶೀಟ್, ಪೆನಾಯಿಲ್, ಆಸಿಡ್ ಮಾರುವವರು, ಅನಾಥಾಶ್ರಮಗಳಿಗೆ ದೇಣಿಗೆ ಬೇಡುವವರು ಪ್ರತಿ 5 ನಿಮಿಷಕ್ಕೊಬ್ಬರು ಬರುತ್ತಾರೆ. ಇವರೆಲ್ಲರೂ ಪೋರ್ಟಬಲ್ ಮೈಕ್ ಹೊಂದಿದ್ದು, ಅದಕ್ಕೆ ಅತೀ ದೊಡ್ಡ ವ್ಯಾಲ್ಯೂಮ್ ಕೊಟ್ಟು ರಸ್ತೆಗಳಿಗೆ ಬರುತ್ತಾರೆ. ಇವರಿಗೆ ಹೊತ್ತು ಗೊತ್ತು ಏನೂ ಇರುವುದಿಲ್ಲ ಇದು ಮಿತಿ ಮೀರಿದ ಡೆಸಿಬಲ್ ಶಬ್ಧ ಹೊಂದಿರುತ್ತದೆ. ಎಷ್ಟು ಅಂದರೆ ಕಿವಿಯ ತಮಟೆ ಒಡೆದು ಹೋಗುವಷ್ಟು ಶಬ್ಧವಿರುತ್ತದೆ.

ಮನೆಗಳಲ್ಲಿ ಎಷ್ಟೋ ಜನ 6 ಗಂಟೆಗೆ ಎದ್ದೇ ಇರುವುದಿಲ್ಲ. ವಯೋವೃದ್ಧರು, ರೋಗಿಗಳು, ಶುಶ್ರೂಷೆ ಪಡೆಯುತ್ತಿರುವವರು, ಬಾಣಂತಿಯರು, ಅವರ ಎಳೆಯ ಮಕ್ಕಳು ಬೆಚ್ಚಿ ಬೀಳುವಷ್ಟು ವ್ಯಾಲ್ಯೂಮ್ ಕೊಟ್ಟಿರುತ್ತಾರೆ. ಬುದ್ಧಿ ಹೇಳಲು ಹೋದರೆ ನಮ್ಮೊಡನೆ ಜಗಳಕ್ಕೆ ಬರುತ್ತಾರೆ. ನಗರ ಪೊಲೀಸ್ ಕಮಿಷನರ್ ಈ ಪಬ್ಲಿಕ್ ನ್ಯೂಸೆನ್ಸ್ ತಡೆಯಲು ಕ್ರಮ ತೆಗೆದುಕೊಳ್ಳಲಿ ಎಂದು ವಿನಂತಿಸುತ್ತೇನೆ.

–ವಿ. ಕೇಶವಮೂರ್ತಿ, ಜ್ಯೋತಿಷ ವಿದ್ವಾಂಸ.

ರಾಜಕೀಯದ ಆಟದಲ್ಲಿ ಕಳ್ಳರಾರು?

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ರಾಜಕೀಯ ನಾಯಕರು ಕಾನೂನಿಗೆ ಸೆಡ್ಡು ಹೊಡೆಯುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಇದಕ್ಕೆ ಅಧಿಕಾರಿಗಳು ಮತ್ತು ಪಕ್ಷದ ಕಾರ್ಯಕರ್ತರು ಬೆಂಬಲವಾಗಿ ನಿಂತಿದ್ದಾರೆ. ಬಿಜೆಪಿ ನಾಯಕರು ಮುಖ್ಯಮಂತ್ರಿಗಳ ಮುಡಾ ಹಗರಣ ಮುಂದಿಟ್ಟುಕೊಂಡು ರಾಜೀನಾಮೆಗೆ ಒತ್ತಾಯಿಸಿ ಬೀದಿಗಿಳಿದಿದ್ದಾರೆ. ಅಲ್ಲದೆ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಿದ್ದಾರೆ. ಮತ್ತೊಂದೆಡೆ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಹಲವು ನಾಯಕರ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರನ್ನು ಕಾಂಗ್ರೆಸ್ ನಾಯಕರು ಒತ್ತಾಯಿಸುತ್ತಿದ್ದಾರೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ ಮೂರು ಪಕ್ಷದ ನಾಯಕರು ಕಳ್ಳರೆ ಎಂಬುದು ಗೊತ್ತಾಗುತ್ತದೆ. ಇದಕ್ಕೆ ಕಾನೂನು ಕ್ರಮವಾದರೂ ಹೇಗೆ ಸಾಧ್ಯ ಎಂಬುದೇ ಯಕ್ಷ ಪ್ರಶ್ನೆ. ಅಯಾ ಸರ್ಕಾರದ ಅಧೀನದಲ್ಲಿರುವ ತನಿಖಾ ಸಂಸ್ಥೆಗಳು ನಿಷ್ಪಕ್ಷವಾಗಿ ತನಿಖೆ ನಡೆಸುವುದು ಅನುಮಾನ. ಹಾಗಾಗಿ ಸಾರ್ವಜನಿಕರಿಗೆ ನ್ಯಾಯ ದೊರೆಯುವುದಿಲ್ಲ. ಆದ್ದರಿಂದ ಮೂರು ಪಕ್ಷದ ನಾಯಕರ ಅಕ್ರಮಗಳ ತನಿಖೆಗಾಗಿ ಪ್ರತ್ಯೇಕ ತಂಡ ರಚಿಸಿ ಆ ತಂಡದಲ್ಲಿ ಸಿದ್ದರಾಮಯ್ಯ ವಿರುದ್ಧ ತನಿಖೆ ನಡೆಸುವ ತಂಡದಲ್ಲಿ ಒಬ್ಬ ಬಿಜೆಪಿ ಶಾಸಕ, ಹೆಚ್.ಡಿ.ಕೆ ಮತ್ತು ಬಿಜೆಪಿ ನಾಯಕರ ವಿರುದ್ಧ ತನಿಖೆ ನಡೆಸುವ ತಂಡದಲ್ಲಿ ಒಬ್ಬ ಕಾಂಗ್ರೆಸ್ ಶಾಸಕ ಇದ್ದು ತನಿಖಾ ತಂಡಕ್ಕೆ ಸೂಕ್ತ ದಾಖಲೆ ಒದಗಿಸಿದರೆ ಸತ್ಯಾಂಶ ಹೊರಬರುತ್ತದೆ. ನಿಜವಾದ ಕಳ್ಳರು ಸಿಕ್ಕಿ ಬೀಳುತ್ತಾರೆ. ಅದನ್ನು ಬಿಟ್ಟು ಕೆಸರೆರಚಾಟವಾಡಿಕೊಂಡು ಅಭಿವೃದ್ಧಿ ಮಾಡದೆ ಕಾಲಕಳೆಯುವ ಸರ್ಕಾರ, ಸರ್ಕಾರದ ವೈಫಲ್ಯ ಬಯಲಿಗೆಳೆಯದ ವಿಪಕ್ಷ ಎರಡು ನಿರರ್ಥಕ. ಮೊದಲು ಅಭಿವೃದ್ಧಿ ಕಡೆಗೆ ಗಮನಹರಿಸಿ. ಸಾರ್ವಜನಿಕ ಸಮಸ್ಯೆಗಳ ಇತ್ಯರ್ಥಕ್ಕೆ ಬಳಕೆಯಾಗಬೇಕಾದ ನ್ಯಾಯಾಲಯದ ಸಮಯ ರಾಜಕಾರಣಿಗಳ ಸಮಸ್ಯೆಗೆ ಹೆಚ್ಚು ಬಳಕೆಯಾಗುತ್ತದೆ, ನಿತ್ಯವೂ ನಿಮ್ಮದೆ ಸಮಸ್ಯೆಯಾದರೆ ಸಾರ್ವಜನಿಕರ ಸಮಸ್ಯೆ ಕೇಳೋರ್ಯಾರು.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ

ರೈಲ್ವೆ ಆಸ್ಪತ್ರೆ ಮುಂಭಾಗ ರಸ್ತೆ ಡುಬ್ಬ ನಿರ್ಮಿಸಿ

ಮಾನ್ಯರೆ,

ಮೈಸೂರು ನಗರದ ಕೆಆರ್‌ಎಸ್ ರಸ್ತೆ ಯಾದವಗಿರಿಯಲ್ಲಿರುವ ರೈಲ್ವೆ ಆಸ್ಪತ್ರೆಯ ಮುಂಭಾಗದ ಮುಖ್ಯ ರಸ್ತೆಯು ಯಾವಾಗಲೂ ಭಾರೀ ವಾಹನ ದಟ್ಟಣೆಯಿಂದ ಕೂಡಿದ್ದು, ಅದರಲ್ಲೂ ವಾಹನಗಳು ಮಿತಿ ಮೀರಿದ ವೇಗದಲ್ಲಿ ಸಂಚರಿಸುತ್ತವೆ.

ರೈಲ್ವೆ ಆಸ್ಪತ್ರೆಯ ಮುಂಭಾಗದ ಮೂರು ರಸ್ತೆ ಕೂಡುವ ತಿರುವಿನಲ್ಲಿ ಪ್ರತಿದಿನವೂ ಸಣ್ಣಮಟ್ಟ ಅಪಘಾತಗಳು ಸಂಭವಿಸುತ್ತಿದ್ದು, ವಾಹನ ಸವಾರರ ನಡುವೆ ಘರ್ಷಣೆ ನಡೆಯುವುದು ಮಾಮೂಲಾಗಿದೆ. ಈ ರಸ್ತೆಯ ಮೂಲಕವೇ ಜಿಲ್ಲಾಸ್ಪತ್ರೆ ಮತ್ತು ಜಯದೇವ ಆಸ್ಪತ್ರೆಗೆ ತುರ್ತು ಚಿಕಿತ್ಸಾ ವಾಹನಗಳು ತೆರಳುತ್ತವೆ. ಅಲ್ಲದೆ ರೈಲ್ವೆ ಆಸ್ಪತ್ರೆಯ ಪಕ್ಕದಲ್ಲಿ ಭಾರತಿ ಸ್ತ್ರೀ ಸಮಾಜ ಶಾಲೆ ಇರುತ್ತದೆ.

ಆದಕಾರಣ ಸಂಬಂಧಪಟ್ಟ ಅಧಿಕಾರಿಗಳು ದಯಮಾಡಿ ಇತ್ತ ಗಮನಹರಿಸಿ ರೈಲ್ವೆ ಆಸ್ಪತ್ರೆಯ ಮುಂಭಾಗದ ಮೂರು ರಸ್ತೆ ಕೂಡುವಲ್ಲಿ ಸೂಕ್ತ ಸ್ಥಳವನ್ನು ಗುರುತಿಸಿ ರಸ್ತೆ ಡುಬ್ಬವನ್ನು ನಿರ್ಮಿಸಿ ತನ್ಮೂಲಕ ಹೆಚ್ಚಿನ ಅನಾಹುತಗಳಿಗೆ ಕಡಿವಾಣ ಹಾಕಬೇಕೆಂದು ಈ ಮೂಲಕ ಮನವಿ.

–ಸಾವಿತ್ರಮ್ಮ, ನಿವೃತ್ತ ಶಿಕ್ಷಕರು, ಯಾದವಗಿರಿ.

ವಿಜಯನಗರದಲ್ಲಿ ಸಾರ್ವಜನಿಕ ಗ್ರಂಥಾಲಯ ತೆರೆಯಲು ಮನವಿ

ಮಾನ್ಯರೆ,

ಮೈಸೂರಿನ ವಿಜಯನಗರ 4ನೇ ಹಂತ ಅತ್ಯಂತ ದೊಡ್ಡ ಬಡಾವಣೆ. ಸರಿ ಸುಮಾರು 12 ಸಾವಿರಕ್ಕೂ ಹೆಚ್ಚು ನಿವೇಶನ ಹೊಂದಿರುವ ಬಡಾವಣೆ. ಹೆಚ್ಚು ಹಿರಿಯ ನಾಗರಿಕರು ವಾಸಿಸುವ ಬಡಾವಣೆವೂ ಹೌದು. ಹಿರಿಯ ನಾಗರಿಕರು ಅಂಗಡಿ ಮುಂಗಟ್ಟುಗಳ ಮುಂದೆ, ಮೋರಿಗಳ ಮೇಲೆ ಕುಳಿತು ಕಾಲ ಕಳೆಯುತ್ತಾರೆ. ಪಾರ್ಕ್‌ಗಳಲ್ಲಿ ಕೂರಲು ಯಾವ ಪಾರ್ಕ್‌ಗಳು ಅಭಿವೃದ್ಧಿ ಕಂಡಿಲ್ಲ. ಪಾರ್ಕ್‌ಗಳೆಲ್ಲಾ ಗಿಡಗಂಟಿಗಳು ಬೆಳೆದು ಅವುಗಳ ಸ್ವಚ್ಛಗೊಳಿಸುವತ್ತ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ತಲೆಕೆಡಿಸಿಕೊಂಡಿಲ್ಲ. ಹಾಗಾಗಿ ಹಿರಿಯ ನಾಗರಿಕರು ಸಮಯ ಕಳೆಯಲು ಯಾವುದೇ ಸೂಕ್ತ ಅನುಕೂಲಗಳಿಲ್ಲ.

ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಜಯನಗರ 4ನೇ ಹಂತದ ಜನನಿಬಿಡ ಪ್ರದೇಶವಾದ ಮರಿಮಲ್ಲಪ್ಪ ಶಾಲೆ ಸರ್ಕಲ್‌ನಲ್ಲಿ ಒಂದು ಸಾರ್ವಜನಿಕ ಗ್ರಂಥಾಲಯ ತೆರೆದರೆ ಹಿರಿಯ ನಾಗರಿಕರು ಪ್ರತಿದಿನ ವೃತ್ತ ಪತ್ರಿಕೆಗಳು ಮತ್ತು ಪುಸ್ತಕಗಳನ್ನು ಓದುವ ಮೂಲಕ ಸಮಯ ಕಳೆಯಲು ಅನುಕೂಲವಾಗುತ್ತದೆ. ಸಾರ್ವಜನಿಕ ಗ್ರಂಥಾಲಯ ಇಲಾಖೆ ಇತ್ತ ಗಮನಹರಿಸಿ ತುರ್ತಾಗಿ ಒಂದು ಸಾರ್ವಜನಿಕ ಗ್ರಂಥಾಲಯ ಕೇಂದ್ರ ತೆರೆಯಬೇಕಾಗಿ ಮನವಿ.

–ಬಿ.ಜಿ. ರಂಗೇಗೌಡ, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ವಿದೇಶ ವಿಹಾರ

ಒಂದು ಲೈಬ್ರರಿಯ ಕತೆ

ಅಮೆರಿಕಾದ ವಾಷಿಂಗ್‌ಟನ್ ಸ್ಟೇಟ್ ಸಿಯಾಟಲ್‌ನ ರೆಡ್‌ಮಂಡ್ ಗ್ರಂಥಾಲಯ ಇದು. ಇಲ್ಲಿ ಎಲ್ಲ ಗ್ರಂಥಾಲಯಗಳೂ ಒಂದಕ್ಕೊಂದು ಸಂಪರ್ಕ ಹೊಂದಿರುತ್ತವೆ. ಓದುಗರಿಗೆ ಅತ್ಯಂತ ಸ್ನೇಹಿ ಆಗಿರುತ್ತವೆ. ಓದುಗರ, ಅದರಲ್ಲೂ ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬೆಳೆಸಲು ಏನೇನು ಮಾಡಲು ಸಾಧ್ಯವಿದೆಯೋ ಅದೆಲ್ಲವನ್ನೂ ಅವು ಮಾಡಲು ಉತ್ಸುಕವಾಗಿರುತ್ತವೆ ಎಂದರೆ ಅದರಲ್ಲಿ ಎಳ್ಳಷ್ಟೂ ಅತಿಶಯೋಕ್ತಿ ಇಲ್ಲ. ಪ್ರತೀ ಊರಿನಲ್ಲೂ ಗ್ರಂಥಾಲಯಗಳ ಸಂಖ್ಯೆ ಸಾಕಷ್ಟು ಇರುತ್ತವೆ. ಅವುಗಳಲ್ಲಿ ಶೇಖರವಾಗಿರುವ ಪುಸ್ತಕಗಳ ಸಂಖ್ಯೆಯು ಅಚ್ಚರಿಯಾಗುವಷ್ಟು ದೊಡ್ಡ ಪ್ರಮಾಣದ್ದು. ಅದಕ್ಕೆ ತಕ್ಕಂತೆ ವಿಶಾಲವಾದ ಕಟ್ಟಡದಲ್ಲಿ ಅವುಗಳನ್ನು ಅತ್ಯಂತ ಕ್ರಮಬದ್ಧವಾಗಿ, ಸುಸ್ಥಿತಿಯಲ್ಲಿ ಜೋಡಿಸಿಡಲಾಗಿರುತ್ತದೆ. ಹಿರಿಯರ ಓದಿನಷ್ಟೇ ಪ್ರಾಮುಖ್ಯತೆಯನ್ನು ಮಕ್ಕಳ ಓದಿಗೂ ನೀಡುವುದರಿಂದ ಅಲ್ಲಿ ಯಾವುದೇ ಕೊರತೆಯಾಗಲೀ ರಾಜಿಯಾಗಲೀ ಇರುವುದಿಲ್ಲ.

ಪುಸ್ತಕಗಳನ್ನು ಮನೆಗೆ ಒಯ್ಯಬೇಕಾದಲ್ಲಿ, ನೀವು ಆ ಗ್ರಂಥಾಲಯದ ಸದಸ್ಯರಾಗಿರಬೇಕು. ಸದಸ್ಯತ್ವ ಉಚಿತ. ಒಂದು ಬಾರಿಗೆ ಸುಮಾರು ಮೂವತ್ತು ಪುಸ್ತಕಗಳನ್ನು ಮನೆಗೆ ತೆಗೆದುಕೊಂಡು ಹೋಗಬಹುದು. ಮೂವತ್ತು ದಿನಗಳ ಅವಧಿಯಲ್ಲಿ ಅದನ್ನು ಹಿಂದಿರುಗಿಸಬೇಕು. ತಡ ಮಾಡಿದರೆ, ತೀರಾ ಗೌಣ ಎನಿಸುವಷ್ಟು ದಂಡ ಕಟ್ಟಬೇಕಾಗುತ್ತದೆ. ಪುಸ್ತಕಗಳನ್ನು ಸಿಬ್ಬಂದಿಗೆ ತೋರಿಸಿ, ಅದರ ಎಂಟ್ರಿ ಮಾಡಿಸಬಹುದು, ಅಥವಾ ನೀವೇ ಕಂಪ್ಯೂಟರಿನಲ್ಲಿ ವಿವರಗಳನ್ನು ತುಂಬಿ, ಒಯ್ಯಬಹುದು. ಪ್ರತಿಯೊಂದು ಪುಸ್ತಕಕ್ಕೂ ಬಾರ್ ಕೋಡ್ ಇರುತ್ತದೆ. ಹೀಗಾಗಿ ಒಯ್ಯುವ, ಹಿಂದಿರುಗಿಸುವ ಕೆಲಸ ಸರಳವಾಗಿ ಆಗಿಹೋಗುತ್ತದೆ. ನೀವು ಪುಸ್ತಕ ಹಿಂದಿರುಗಿಸಲು ಬಂದಾಗ ಗ್ರಂಥಾಲಯದ ಸಮಯ ಮುಗಿದು ಬಾಗಿಲು ಹಾಕಿತ್ತೇ? ಚಿಂತೆಯಿಲ್ಲ. ಕಟ್ಟಡದ ಹೊರಗೆ ಇರುವ ಸೆಲ್ಫ್ ಚೆಕ್ ಇನ್‌ಗಳಲ್ಲಿ ಪುಸ್ತಕವನ್ನು ಹಾಕಿ, ಕೂಡಲೇ ರಸೀತಿಯನ್ನು ಪಡೆಯಬಹುದು.

ಬಲು ದೊಡ್ಡ ಹಜಾರದಲ್ಲಿ ಕಾಲಿಡುತ್ತಿದ್ದಂತೆಯೇ ಮಧ್ಯಭಾಗದಲ್ಲಿ ವೃತ್ತಾಕಾರದಲ್ಲಿ ಇರುವ ಮೇಜಿನ ಏಳೆಂಟು ಕಂಪ್ಯೂಟರ್‌ಗಳ ಹಿಂದೆ ನಿಂತ ಗ್ರಂಥಪಾಲಕರು, ಸಿಬ್ಬಂದಿಗಳು. ಎಡಬದಿಯಲ್ಲಿ ಆಲಂಕಾರಿಕವಾಗಿ ಜೋಡಿಸಿದ ಮಕ್ಕಳ ಒಂದು ಕಥೆಯ ಪಾತ್ರಗಳ ದೃಶ್ಯಾವಳಿ. ಒಳಭಾಗಕ್ಕೆ ಕಣ್ಣು ಹಾಯಿಸುತ್ತಾ ಹೋದಂತೆ ಕಂಡುಬರುವ ಹಲವಾರು ವಿಂಗಡಣೆಯ ವಿಭಾಗಗಳು. ಬಲಕ್ಕೆ ಹೊರಳಿದರೆ, ಮಕ್ಕಳ ಪುಸ್ತಕಗಳ ವಿಭಾಗ. ವಿವಿಧ ವಯಸ್ಸಿನ ಮಕ್ಕಳಿಗೆ ಸರಿಹೊಂದುವ ಸಹಸ್ರಾರು ಪುಸ್ತಕಗಳು. ಅಂತಹ ಎರಡು ಮೂರು ಕೋಣೆಯಂತೆ ಮಾಡಿರುವ ಪ್ರತ್ಯೇಕ ವಿಭಜನೆ. ಅಲ್ಲಿ ಇರುವ ಪುಟ್ಟ ಪುಟ್ಟ ಆಸನಗಳು, ಮೇಜು ಮತ್ತು ಕಂಪ್ಯೂಟರ್‌ಗಳು. ಓದಿದ ನಂತರ ಪುಸ್ತಕಗಳನ್ನು ಅಲ್ಲೇ ಇರುವ ಹಳ್ಳದ ಮೇಜಿನಲ್ಲಿ ಇಟ್ಟುಬಿಟ್ಟರೆ ಸಾಕು. ಆ ಕಂಪ್ಯೂಟರ್‌ಗಳಲ್ಲಿ ನಿಮಗೆ ಬೇಕಾದ ಪುಸ್ತಕ ಇದೆಯೋ, ಇಲ್ಲವೋ, ಇದ್ದರೆ ಎಲ್ಲಿವೆ ಎಂಬ ಮಾಹಿತಿ ಲಭ್ಯ.

ದೊಡ್ಡವರಿಗಾಗಿ ಇರುವ ಸೂಕ್ತ ಆಸನಗಳು ಬೇಕಾದಷ್ಟು ಇರುತ್ತವೆ. ನಿಶಬ್ದವಾಗಿ ಓದುತ್ತಿರುವ, ಕಾಫಿ ಹೀರುತ್ತಾ ಓದಿನಲ್ಲಿ ಮಗ್ನರಾಗಿರುವ, ಕಂಪ್ಯೂಟರಿನಲ್ಲಿ ಮುಳುಗಿರುವ ವಿವಿಧ ವಯಸಿನ ಓದುಗರು ಕಾಣ ಸಿಗುವುದು ಸಾಮಾನ್ಯ ದೃಶ್ಯ. ಅವರ ಕಂಪ್ಯೂಟರ್ ಪಕ್ಕದಲ್ಲೇ ಚಿಕ್ಕ ಚಿಕ್ಕ ಹಾಳೆಗಳು ಮತ್ತು ಪೆನ್ಸಿಲ್‌ಗಳನ್ನು ನೀಟಾಗಿ ಜೋಡಿಸಿಡಲಾಗಿರುತ್ತದೆ, ನೀವು ಏನನ್ನಾದರೂ ಗುರುತು ಹಾಕಿಕೊಳ್ಳಬೇಕಾದಲ್ಲಿ ಬಳಸಲು. ಒಂದುವೇಳೆ, ನೀವು ಓದುತ್ತಿರುವ ಪುಸ್ತಕದ ಯಾವುದೋ ಹಾಳೆಯಲ್ಲಿ ನಿಮಗೆ ಬೇಕಾದ ಮುಖ್ಯ ವಿಷಯ ಇತ್ತೆಂದುಕೊಳ್ಳಿ. ಅದರ ಪ್ರಿಂಟೌಟ್ ಅನ್ನು ತೆಗೆದುಕೊಳ್ಳುವ ಸೌಲಭ್ಯವೂ ಇರುತ್ತದೆ. ಅಂದ ಮೇಲೆ, ಹಾಳೆಗಳು ನಾಪತ್ತೆ ಆಗಲು ಅವಕಾಶವೇ ಇರುವುದಿಲ್ಲವಲ್ಲ! ಹಾಗೇ ಮುಂದುವರೆದರೆ, ಆಡಿಯೋ ಮತ್ತು ಡಿವಿಡಿಗಳ ವಿಭಾಗ ಕಾಣಿಸುತ್ತದೆ. ಇಯರ್ ಫೋನನ್ನು ಕಿವಿಗೆ ಸಿಕ್ಕಿಸಿ, ಕಣ್ಣು ಮುಚ್ಚಿ, ನಿಮಗೆ ಬೇಕಾದ ಪುಸ್ತಕದ ಓದನ್ನು ಕೇಳಿಸಿಕೊಳ್ಳುತ್ತಾ ಕೂಡಬಹುದು. ಜಗತ್ತಿನ ಬೇರೆ ಬೇರೆ ಭಾಷೆಗಳ ಹೊತ್ತಗೆಗಳೂ ಲಭ್ಯವಿರುತ್ತದೆ. ಜೀವನ ಚರಿತ್ರೆ, ಕಾಲ್ಪನಿಕ? ನಿಮಗೆ ಬೇಕಾದ ಆಡಿಯೋ ಪುಸ್ತಕವನ್ನು ನೀವು ಆಯ್ದುಕೊಳ್ಳಬಹುದು.





> ಮಕ್ಕಳಿಗೆ ಯಾವುದಾದರೂ ಪ್ರಾಜೆಕ್ಟ್ ಮಾಡಲು ಹೇಳಿದರೆ, ಗೂಗಲ್ ಸರ್ಚ್ ಮಾಡಿದರೆ ಸಾಕು ಎಂಬುದು ಸಾಮಾನ್ಯವಾಗಿ ಕಂಡು ಬರುವ ಸಂಗತಿ. ವಿಷಯಕ್ಕೆ ಸಂಬಂಧಪಟ್ಟ (ಮೂಲ) ಗ್ರಂಥಗಳನ್ನು ನೋಡುವ ಪರಿಪಾಠ ಕಣ್ಮರೆ ಆಗುತ್ತಿದೆ ಎಂಬುದು ಗಾಬರಿ ಹುಟ್ಟಿಸುವ ವಾಸ್ತವ ಸಂಗತಿ. ವಿದ್ಯಾರ್ಥಿಗಳಲ್ಲಿ ಓದುವ ಅಭ್ಯಾಸವನ್ನು ಹುಟ್ಟು ಹಾಕುವುದರ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಿದೆ. ನನ್ನ ಭಾರತ ಮತ್ತೆ ವಿದ್ಯೆಯ ತವರೂರಾಗಲಿ.

ಮಕ್ಕಳ ವಿಭಾಗದಲ್ಲಿ ಓದಲು ಬಾರದ ಚಿಕ್ಕ ಪುಟ್ಟ ಮಕ್ಕಳ ಅಪ್ಪ ಅಮ್ಮಂದಿರು ಮೆಲುದನಿಯಲ್ಲಿ ಅವುಗಳಿಗೆ ಓದಿಹೇಳುತ್ತಾ ಅವುಗಳಲ್ಲಿ ಪುಸ್ತಕ ಪ್ರೀತಿಯನ್ನು ಹುಟ್ಟುಹಾಕುವ ಯತ್ನವನ್ನು ನೋಡುವುದೇ ಸಂತಸದ ವಿಷಯ. ಅವರ ಕಣ್ಣು ಸೆಳೆಯುವಂತಹ ದಪ್ಪ, ಆಕರ್ಷಕ ಅಕ್ಷರಗಳ ಬರಹದ ಫಲಕಗಳು ಮಕ್ಕಳ ಓದಿಗೆ ಅವರು ಕೊಡುವ ಪ್ರಾಮುಖ್ಯತೆಯನ್ನು ವಿವರಿಸುತ್ತವೆ. ಚಿತ್ರ ಕತೆಗಳು, ಆರಂಭಿಕ ಓದುಗರ ಪುಟ್ಟ ಕತೆಗಳು, ನಮ್ಮ ದೇಹದ ವಿವಿಧ ಅಂಗಗಳ ಕೆಲಸವನ್ನು ಆಸಕ್ತಿಕರವಾಗಿ ವರ್ಣಿಸುವ ಬರಹಗಳು, ತಿನ್ನುವ ಆಹಾರ, ಬಟ್ಟೆಯ ಕತೆ, ಯಂತ್ರಗಳ ಹುಟ್ಟು, ವಿಜ್ಞಾನದ ಬರಹಗಳು, ಬಾಹ್ಯಾಕಾಶ ಯಾನ, ಅಲ್ಲಿ ಇಲ್ಲದಿರುವ ವಿಷಯಗಳೇ ಇಲ್ಲ ಎನ್ನಬಹುದು. ಮಕ್ಕಳ ಶೌಚಾಲಯವೇ ಬೇರೆ. ದೊಡ್ಡವರದೂ ಬೇರೆ. ಅಲ್ಲಿಯ ಸ್ವಚ್ಛತೆಯು ಜನರ ಜವಾಬ್ದಾರಿ ನಡವಳಿಕೆಯ ಪ್ರತೀಕವಾಗಿರುತ್ತದೆ.

ಓದುಗರಿಗೆ ಒಂದು ಗಂಟೆ ಉಚಿತ ಇಂಟರ್ನೆಟ್ ಸೌಲಭ್ಯವೂ ಇರುತ್ತದೆ. ನೀವು ಕುಳಿತ ಮೇಜಿನ ಮಧ್ಯದಲ್ಲಿ ಇರುವ ಪ್ಲಗ್ ಪಾಯಿಂಟ್‌ನಲ್ಲಿ ನಿಮ್ಮ ಲ್ಯಾಪ್ ಟಾಪ್‌ಗಳನ್ನು ಅಥವಾ ಮೊಬೈಲನ್ನು ಚಾರ್ಜ್ ಮಾಡಿಕೊಳ್ಳಬಹುದು. ಸಾಮಾನ್ಯವಾಗಿ ವಿಶ್ವವಿದ್ಯಾಲಯಗಳ ಗ್ರಂಥಾಲಯದಲ್ಲಿ ಒಮ್ಮೆಗೇ ಐವತ್ತು ಪುಸ್ತಕಗಳನ್ನು ಮನೆಗೆ ಒಯ್ಯುವ ಸೌಲಭ್ಯವನ್ನು ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ. ಇವೆಲ್ಲವೂ ನಂಬಿಕೆ, ಪ್ರಾಮಾಣಿಕತೆ ಮತ್ತು ಶಿಸ್ತಿನ ಮೇಲೆ ನಡೆಯುತ್ತದೆ.

ಇದೆಲ್ಲ ಏನನ್ನು ಹೇಳುತ್ತವೆ? ಮಕ್ಕಳ, ವಿದ್ಯಾರ್ಥಿಗಳ, ಶ್ರೀಸಾಮಾನ್ಯರ ಓದಿಗೆ, ಜ್ಞಾನಾರ್ಜನೆಗೆ ಸರಕಾರ ನೀಡುವ ಮಹತ್ವವನ್ನು. ನಳಂದಾ, ತಕ್ಷಶಿಲೆ, ಹಂಪಿ ಮುಂತಾದ ವಿಶ್ವವಿದ್ಯಾಲಯ ನಮ್ಮಲ್ಲಿ ಇತ್ತು. ಅಲ್ಲಿ ಓದಲು, ಕಲಿಯಲು ಜಗತ್ತಿನ ಮೂಲೆಮೂಲೆಗಳಿಂದ ಜ್ಞಾನದಾಹಿಗಳು ಬರುತ್ತಿದ್ದರು. ಅಲ್ಲಿ ಶೇಖರವಾಗಿದ್ದ ಸಹಸ್ರ ಸಹಸ್ರ ಹಸ್ತಪ್ರತಿಗಳು, ಓಲೆಗರಿಗಳು, ಪುಸ್ತಕಗಳು ಬೆಂಕಿಗೆ ಆಹುತಿ ಆದುವು. ಸರಿ. ಈಗ ನಮ್ಮ ಮಕ್ಕಳಲ್ಲಿ ಓದಿನ ಪ್ರೀತಿ ಬೆಳೆಸುತ್ತಿದ್ದೇವೆಯೇ? ನಾನು ಒಬ್ಬ ಶಿಕ್ಷಕಿಯಾಗಿ ನನ್ನ ಅನುಭವದಲ್ಲಿ ಹೇಳುವುದಾದರೆ, ಕೇವಲ ಕೆಲವರಲ್ಲಿ ಮಾತ್ರ ಅದನ್ನು ಕಾಣಬಹುದು. ಯಾವುದಾದರೂ ಪ್ರಾಜೆಕ್ಟ್ ಮಾಡಲು ಹೇಳಿದರೆ, ಗೂಗಲ್ ಸರ್ಚ್ ಮಾಡಿದರೆ ಸಾಕು ಎಂಬುದು ಸಾಮಾನ್ಯವಾಗಿ ಕಂಡು ಬರುವ ಸಂಗತಿ. ವಿಷಯಕ್ಕೆ ಸಂಬಂಧಪಟ್ಟ (ಮೂಲ) ಗ್ರಂಥಗಳನ್ನು ನೋಡುವ ಪರಿಪಾಠ ಕಣ್ಮರೆ ಆಗುತ್ತಿದೆ ಎಂಬುದು ಗಾಬರಿ ಹುಟ್ಟಿಸುವ ವಾಸ್ತವ ಸಂಗತಿ. ವಿದ್ಯಾರ್ಥಿಗಳಲ್ಲಿ ಓದುವ ಅಭ್ಯಾಸವನ್ನು ಹುಟ್ಟು ಹಾಕುವುದರ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಿದೆ ನನ್ನ ಭಾರತ ಮತ್ತೆ ವಿದ್ಯೆಯ ತವರೂರಾಗಲಿ ಎಂದು ಆಶಿಸುತ್ತೇನೆ.

ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.



33. ಎಚ್.ಲಿಂಗರಾಜ ಅರಸ್



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಅರಮನೆಯ ವತಿಯಿಂದಲೇ ಪ್ರಾರಂಭಿಸಲಾಗಿದ್ದ ಶಾಲೆ ರಾಯಲ್ ಶಾಲೆ. ಮಹಾರಾಜರ ಹಾಗೂ ಸಂಬಂಧಿ ಅರಸು ಮಕ್ಕಳ ಶಿಕ್ಷಣಕ್ಕಾಗಿ ಈ ಶಾಲೆಯನ್ನು ಪ್ರತ್ಯೇಕವಾಗಿ ಪ್ರಾರಂಭಿಸಲಾಗಿತ್ತು.

ಈ ರಾಯಲ್ ಸ್ಕೂಲಿನಲ್ಲಿ ಮಹಾರಾಜರ ಜೊತೆ ಪಾಠ ಕಲಿತವರ ಪೈಕಿ ಎಚ್.ಲಿಂಗರಾಜ ಅರಸ್ ಒಬ್ಬರು. ಇಲ್ಲಿ ಓದಿದ ನಂತರ ಅವರು ಅರಮನೆಯಲ್ಲಿ ದರ್ಬಾರ್ ಭಕ್ಷಿಯಾಗಿ ರಾಜ ಕುಟುಂಬಕ್ಕೆ ಹಲವಾರು ರೀತಿ ನೆರವಾಗಿ ಹೆಸರು ಪಡೆದರು.

ಲಿಂಗರಾಜ ಅರಸ್ ಹುಟ್ಟಿದ್ದು ಮೈಸೂರಿನಲ್ಲಿ, 1855ರಲ್ಲಿ. ರಾಯಲ್ ಸ್ಕೂಲ್ ಮಹಾರಾಜ ಚಾಮರಾಜ ಒಡೆಯರ ಶಿಕ್ಷಣಕ್ಕಾಗಿಯೇ ಪ್ರಾರಂಭಿಸಲಾಗಿದ್ದ ರಾಜಮನೆತನದ ಶಾಲೆ. ಈ ರಾಯಲ್ ಸ್ಕೂಲಿನಲ್ಲಿ ಲಿಂಗರಾಜ ಅರಸ್ ಅವರು ಮಹಾರಾಜ ಚಾಮರಾಜ ಒಡೆಯರ ಸಹ ಪಾಠಿಗಳು. ಅವರಿಗೆ ಶಿಕ್ಷಣದಲ್ಲಿ ಮಾರ್ಗದರ್ಶನ ಮಾಡಿದವರು ಕರ್ನಲ್ ಮಲ್ಲೇಸನ್ ಮತ್ತು ಮಹಾರಾಜರ ಪಾಲಕರಾಗಿದ್ದ (ರೆಸಿಡೆಂಟ್) ಸರ್ ಜೇಮ್ಸ್ ಗೋರ್ಡನ್.

1863ರಲ್ಲಿ ಜನಿಸಿ ಮುಮ್ಮಡಿ ಕೃಷ್ಣರಾಜ ಒಡೆಯರ ದತ್ತುಪುತ್ರರಾಗಿ 1868ರಲ್ಲಿ ಪಟ್ಟಕ್ಕೆ ಬಂದ ಚಾಮರಾಜ ಒಡೆಯರು ತಮ್ಮ ಎಂಟನೇ ವಯಸ್ಸಿನಲ್ಲಿ ಕಲಿಯುವ ಆಸಕ್ತಿ ತೋರಿಸಿದರು.

ಆ ವೇಳೆಗೆ 1869ರಲ್ಲಿಯೇ ಕರ್ನಲ್ ಮಲ್ಲೇಸನ್ ಅವರನ್ನು ಮಹಾರಾಜರ ರೆಸಿಡೆಂಟ್ ಆಗಿ ನೇಮಕ ಮಾಡಲಾಗಿತ್ತು.

1871ರ ವೇಳೆಗೆ ಕರ್ನಲ್ ಮಲ್ಲೇಸನ್ ರಜಾ ಹೋದಾಗ ಅವರ ಬದಲಿಗೆ ರಾಜ್ಯದ ಜ್ಯುಡಿಷಿಯಲ್ ಕಮೀಷನರ್ ಆಗಿದ್ದ ಜೇಮ್ಸ್ ಡಿ. ಗೋರ್ಡನ್ ಅವರನ್ನು ಚಾಮರಾಜ ಒಡೆಯರ ಗಾರ್ಡಿಯನ್ ಆಗಿ ತಾತ್ಕಾಲಿಕವಾಗಿ ನೇಮಿಸಲಾಯಿತು. ಮುಂದೆ ದಿವಾನರಾದ ರಂಗಾಚಾರ್ಲು ಮತ್ತು ಜಯರಾಮರಾವ್ ಅವರ ಜೊತೆ ಗೋರ್ಡನ್ ಇವರು ಸೇರಿ ಮಹಾರಾಜರಿಗೆ ಪಾಠ ಹೇಳಿಕೊಡುವ ಸಲುವಾಗಿಯೇ ಪ್ರತ್ಯೇಕ ಶಾಲೆಯನ್ನು ಪ್ರಾರಂಭಿಸಿದರು.

ರಾಯಲ್ ಸ್ಕೂಲ್ ಮುಮ್ಮಡಿ ಕೃಷ್ಣರಾಜ ಒಡೆಯರು ಈ ಮುಂಚೆ ಕಟ್ಟಿಸಿದ್ದ ಲೋಕರಂಜನ ಅರಮನೆಯಲ್ಲಿ ರಾಜ ವಂಶದ ಮಕ್ಕಳಿಗಾಗಿಯೇ ಪ್ರತ್ಯೇಕವಾಗಿ ಕಾರ್ಯನಿರ್ವಹಿಸಲಾರಂಭಿಸಿತು.

ಲೋಕರಂಜನ್ ಮಹಲ್ ಅರಮನೆಯಿಂದ ಸ್ವಲ್ಪ ದೂರವಿದ್ದು, ಬೇಸಿಗೆ ಅರಮನೆ ಎಂದೆನಿಸಿಕೊಂಡಿದ್ದು, ಅಲ್ಲಿ ಪ್ರಾರಂಭಿಸಲಾದ ರಾಯಲ್ ಸ್ಕೂಲ್ ಇಂಗ್ಲೆಂಡಿನ ಪಬ್ಲಿಕ್ ಶಾಲೆಗಳ ಮಾದರಿಯಲ್ಲಿತ್ತು. ಈ ಶಾಲೆಯಲ್ಲಿ ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳ ಬದಲಿಗೆ ಇಂಗ್ಲಿಷ್ ಭಾಷೆಗೆ ಹೆಚ್ಚು ಪ್ರಾಮುಖ್ಯತೆ ಕೊಡಲಾಗಿತ್ತು.

ರಂಗಾಚಾರ್ಲು ಅವರ ಜೊತೆ ರಾಯಲ್ ಸ್ಕೂಲ್ ಪ್ರಾರಂಭಿಸಿದ ಜಯರಾಮರಾವ್ ಮೇಧಾವಿ. ಅತ್ಯುತ್ತಮ ಗುಣಗಳ ಆದರ್ಶ ವ್ಯಕ್ತಿ. ಚಾಮರಾಜ ಒಡೆಯರಿಗೆ ಉತ್ತಮ ಶಿಕ್ಷಣ, ಮಾರ್ಗದರ್ಶನ ನೀಡುವ ಕಾರ್ಯಕ್ಕೆ ಸೂಕ್ತರಾಗಿದ್ದ ಕಾರಣ ಅವರನ್ನು ಶಾಲೆಯ ಪ್ರಾಧ್ಯಾಪಕರನ್ನಾಗಿ ನೇಮಿಸಲಾಯಿತು. ಗಾರ್ಡಿಯನ್ ಆಗಿದ್ದ ಕರ್ನಲ್ ಮಲ್ಲೇಸನ್ ಚಾಮರಾಜ ಒಡೆಯರ ಅಧ್ಯಾಪಕರುಗಳಲ್ಲಿ ಒಬ್ಬರಾದರು. ಈ ಶಾಲೆಯಲ್ಲಿ ಮಹಾರಾಜ ಚಾಮರಾಜ ಒಡೆಯರ ಒಡನಾಡಿಯಾಗಿ ವಿದ್ಯಾಭ್ಯಾಸ ಮಾಡಿದವರಲ್ಲಿ ಲಿಂಗರಾಜ ಅರಸ್ ಒಬ್ಬರಾಗಿದ್ದರು.

ಅಲ್ಲಿ ವಿದ್ಯಾಭ್ಯಾಸ ಮುಗಿದ ಮೇಲೆ ಲಿಂಗರಾಜ ಅರಸ್ ತಮ್ಮ ಬದುಕಿನ ಉದ್ದಕ್ಕೂ ಅರಮನೆಯಲ್ಲಿ ಸೇವೆ ಮಾಡಿಕೊಂಡು ಬಂದರು.

ಪ್ರಾರಂಭದಲ್ಲಿ ಇವರನ್ನು ಅರಮನೆಯ ಪಶು ಮತ್ತು ಗಜಶಾಲೆ ಇಲಾಖೆಗಳ ಮೇಲುಸ್ತುವಾರಿ ನೋಡಿಕೊಳ್ಳಲು ಜನವರಿ 1880ರಂದು ಸೂಪರ್‌ವೈಸರ್ ಆಗಿ ನೇಮಿಸಲಾಯಿತು. ಅದರ ಜೊತೆಯಲ್ಲಿಯೇ ಮಹಾರಾಜ ಕುಟುಂಬದ ಆಫೀಸರ್ ಇನ್ ಚಾರ್ಜ್ ಆಗಿ ಕಾರ್ಯ ನಿರ್ವಹಿಸಬೇಕಾಯಿತು. ಜೊತೆಗೆ 1895ರ ಸೆಪ್ಟೆಂಬರ್ ತಿಂಗಳಲ್ಲಿ ಮಹಾರಾಜರ ದರ್ಬಾರ್ ಭಕ್ಷಿಯೂ ಆಗಿ ನೇಮಕವಾಗಿ ಅವರಿಗೆ ಆ ಜವಾಬ್ದಾರಿಯೂ ಸೇರಿತು.

ಈ ಎರಡೂ ಹುದ್ದೆಗಳಲ್ಲಿಯೂ, ಅಂದರೆ ಮಹಾರಾಜ ಕುಟುಂಬದ ಆಫೀಸರ್ ಇನ್ ಚಾರ್ಜ್ ಮತ್ತು ಮಹಾರಾಜರ ದರ್ಬಾರ್ ಭಕ್ಷಿಯಾಗಿ ಮಹಾರಾಜರ ಹಾಗೂ ರಾಜ ಕುಟುಂಬಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ ಭಾಗವಹಿಸಿ ನೆರವಾಗಬೇಕಾಗುತ್ತಿತ್ತು ಇದು ಅವರ ಪ್ರಮುಖ ಹೊಣೆಗಾರಿಕೆಯಾಗಿತ್ತು. ಹಲವಾರು ಖಾಸಗಿ ಕೆಲಸಗಳಲ್ಲಿ ರಾಜಕುಟುಂಬದ ಸದಸ್ಯರೇ ನೇರವಾಗಿ ಭಾಗವಹಿಸಲು ಸಾಧ್ಯವಾಗುತ್ತಿರಲಿಲ್ಲ. ಇಂತಹ ಖಾಸಗೀ ಕಾರ್ಯಗಳ ಇಡೀ ನಿರ್ವಹಣೆಗೆ ನಂಬಿಕೆಯಾದ ಸಂಬಂಧಿಯೊಬ್ಬರ ನೆರವು–ಸಹಕಾರ ಬೇಕಾಗುತ್ತಿತ್ತು. ಅಂತಹ ನಂಬಿಕೆಯ ಸಂಬಂಧಿಯೊಬ್ಬರನ್ನು ಈ ಕಾರ್ಯಕ್ಕಾಗಿಯೇ ವಿಶೇಷವಾಗಿ ನೇಮಿಸಿಕೊಳ್ಳುತ್ತಿದ್ದರು. ದರ್ಬಾರ್ ಭಕ್ಷಿಯಾಗಿದ್ದವರು ಈ ಜವಾಬ್ದಾರಿ ನಿರ್ವಹಿಸುತ್ತಿದ್ದರು.

ದರ್ಬಾರ್ ಭಕ್ಷಿಯಾದವರು ಎಲ್ಲಾ ಹಬ್ಬಗಳು, ಅಧಿಕೃತ ಸಮಾರಂಭಗಳು, ಮನರಂಜನಾ ಕಾರ್ಯಕ್ರಮಗಳು ಇತ್ಯಾದಿ ಸಂದರ್ಭಗಳಲ್ಲಿ ಹಾಜರಿರಬೇಕಾಗುತ್ತಿತ್ತು. ಅವುಗಳ ವ್ಯವಸ್ಥೆ ನೋಡಿಕೊಳ್ಳಬೇಕಾಗುತ್ತಿತ್ತು. ಮಹಾರಾಜರ ಜೊತೆ ಹೋಗಿ ಬರ ಬೇಕಾಗುತ್ತಿತ್ತು. ಬಹು ಮುಖ್ಯವಾಗಿ ಮಹಾರಾಜರ ದರ್ಬಾರ್ ಸಂದರ್ಭದಲ್ಲಿ ಅಗತ್ಯ ವ್ಯವಸ್ಥೆಗಳನ್ನು ನೋಡಿಕೊಂಡು ಹಾಜರಿರಬೇಕಾಗುತ್ತಿತ್ತು. ದರ್ಬಾರ್ ಭಕ್ಷಿಯಾಗಿ ಅಂತಹ ಕಾರ್ಯಗಳನ್ನು ಮಾಡುತ್ತಿದ್ದರು ಎಚ್.ಲಿಂಗರಾಜ ಅರಸ್ ಅವರು.

ಇವರು ದರ್ಬಾರ್ ಭಕ್ಷಿಯಾಗಿ ರಾಜಮನೆತನದ ಖಾಸಗೀ ಕಾರ್ಯಗಳಲ್ಲಿ ನೆರವಾಗಿದ್ದ ಮಹತ್ವದ ಒಂದು ಕಾರ್ಯವೆಂದರೆ ನಾಲ್ವಡಿ ಕೃಷ್ಣರಾಜ ಒಡೆಯರ ಮದುವೆಗೆ ಸಂಬಂಧಪಟ್ಟದ್ದು. ರೀಜೆಂಟ್ ಆಗಿದ್ದ ಮಹಾರಾಣಿ ವಾಣೀವಿಲಾಸ ಸನ್ನಿಧಾನದವರು ನಾಲ್ವಡಿ ಕೃಷ್ಣರಾಜ ಒಡೆಯರ ಮದುವೆಯನ್ನು ಮಾಡಲು ನಿರ್ಧರಿಸಿ ಅದರ ಸಲುವಾಗಿ ಉತ್ತರ ಭಾರತದಿಂದ ಸೂಕ್ತ ಕನ್ಯೆಯನ್ನು ನೋಡಿಬರುವಂತೆ ಕೆಲವು ಆಪ್ತರನ್ನು ಕಳುಹಿಸಿದರು. ಅದರಂತೆ ಒಂದು ನಿಯೋಗ 1898ರಲ್ಲಿ ಗುಜರಾತಿಗೆ ಭೇಟಿ ನೀಡಿತ್ತು. ಎಳಂದೂರಿನ ತಹಶೀಲ್ದಾರರಾಗಿದ್ದ ಪಿ.ಎನ್. ಕೃಷ್ಣಮೂರ್ತಿ ಅವರು ಆ ಉನ್ನತ ಅಧಿಕಾರಿಗಳ ನಿಯೋಗದ ನೇತೃತ್ವದಲ್ಲಿದ್ದರು. ಅವರ ಜೊತೆಗೆ ವಾಣೀವಿಲಾಸ ಮಹಾರಾಣಿಯವರ ಸಹೋದರ ಎಂ.ಕಾಂತರಾಜ ಅರಸ್, ಬೆಂಗಳೂರಿನಲ್ಲಿ ಸರ್ಜನ್ ಆಗಿದ್ದ ಡಿ. ಎ. ಚೋಕ್ಸಿ, ಅವರಲ್ಲದೆ ದರ್ಬಾರ್ ಭಕ್ಷಿ ಲಿಂಗರಾಜ ಅರಸ್ ಅವರೂ ಈ ನಿಯೋಗದಲ್ಲಿ ಇದ್ದರು. ಇವರು ನೋಡಿಬಂದ ಕಾಥೇವಾಡದ ವಾನಾ ಕುಟುಂಬದ ಜೂಲಾ ಸಂಸ್ಥಾನದ ರಾಣಾ ಸಾಹೇಬ್ ವಿನಯ ಸಿಂಹ ಅವರ ಪುತ್ರಿ ಪ್ರತಾಪಕುಮಾರಿ ದೇವಿಯವರೊಂದಿಗೆ ನಾಲ್ವಡಿಯವರ ಮದುವೆ ಜಗನ್ಮೋಹನ ಅರಮನೆಯಲ್ಲಿ 1900ರ ಜೂನ್ ತಿಂಗಳಲ್ಲಿ ಅದ್ಧೂರಿಯಿಂದ ಜರುಗಿತು. ಇಂತಹ ಹಲವಾರು ಪ್ರಮುಖ ಕಾರ್ಯಗಳಲ್ಲಿ ಲಿಂಗರಾಜ ಅರಸ್ ಪಾಲ್ಗೊಂಡಿದ್ದು ರಾಜಮನೆತನಕ್ಕೆ ದರ್ಬಾರ್ ಭಕ್ಷಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಒಂದನೇ ಪುಟದಿಂದ

ಪರ್ಯಾಯ ನಾಯಕನ ಆಯ್ಕೆಗೆ ಕಾಂಗ್ರೆಸ್ ಪ್ರಕ್ರಿಯೆ

ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ನೀಡಿದರೆ ಸಿದ್ದರಾಮಯ್ಯ ಬೆಂಬಲಿಗರು ಸಿಡಿದೇಳಬಹುದೆಂಬ ಭಯ ಕಾಡಿದೆ.

ಇಂತಹ ಸನ್ನಿವೇಶವನ್ನು ಬಿಜೆಪಿ ತನ್ನ ರಾಜಕೀಯ ಲಾಭಕ್ಕೆ ಬಳಕೆ ಮಾಡಿಕೊಳ್ಳಬಹುದು. ಇದನ್ನು ತಪ್ಪಿಸುವ ಉದ್ದೇಶದಿಂದಲೇ ಎಲ್ಲರಿಗೂ ಒಪ್ಪಿಗೆಯಾಗುವಂತಹ ವ್ಯಕ್ತಿಯನ್ನು ನಾಯಕತ್ವಕ್ಕೆ ತರಲು ಮುಂದಾಗಿದೆ. ಎಐಸಿಸಿ ವರಿಷ್ಠರು ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರನ್ನು ದೆಹಲಿಗೆ ಕರೆಸಿಕೊಂಡು ಮಾತನಾಡುವುದಕ್ಕೂ ಮುನ್ನ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಅಧಿನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರುಗಳು ಆಂತರಿಕವಾಗಿ ಎಲ್ಲಾ ಕೋನಗಳಿಂದಲೂ ಚರ್ಚಿಸಿದ್ದಾರೆ. ಸಿದ್ದರಾಮಯ್ಯ ಅವರಿಗೆ ಪರ್ಯಾಯವಾಗಿ ಮಲ್ಲಿಕಾರ್ಜುನ ಖರ್ಗೆ ಇಲ್ಲವೇ ಡಾ.ಜಿ.ಪರಮೇಶ್ವರ್ ಅವರನ್ನು ಸಿಎಲ್‌ಪಿ ನಾಯಕರನ್ನಾಗಿ ಮಾಡಿದರೆ ಸರ್ಕಾರ ಸುಭದ್ರವಾಗಿರುತ್ತದೆ ಎಂಬ ಆಲೋಚನೆಯೂ ಇದೆ.

ಆದರೆ, ಖರ್ಗೆ ಅವರಿಗೆ ಈಗಿರುವ ಉನ್ನತ ಹುದ್ದೆಗಳನ್ನು ಬಿಟ್ಟು ರಾಜ್ಯ ರಾಜಕಾರಣಕ್ಕೆ ಹಿಂತಿರುಗಲು ಆಸಕ್ತಿ ಇಲ್ಲ. ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅಷ್ಟೇ ಅಲ್ಲದೆ, ಡಾ.ಪರಮೇಶ್ವರ್ ಅವರನ್ನೂ ವರಿಷ್ಠರು ನಿನ್ನೆ ದೆಹಲಿಗೆ ಕರೆಸಿಕೊಂಡಿದ್ದರು. ಸಚಿವರಾದ ಡಾ. ಎಚ್.ಸಿ.ಮಹದೇವಪ್ಪ, ಕೆ.ಜೆ.ಜಾರ್ಜ್, ಜಮೀರ್ ಅಹಮದ್ ಖಾನ್, ಆರ್.ಬಿ. ತಿಮ್ಮಾಪುರ್, ಪ್ರಿಯಾಂಕ್ ಖರ್ಗೆ ಅಲ್ಲದೆ, ಕೆಲವು ಶಾಸಕರು ಮುಖ್ಯಮಂತ್ರಿ ಅವರ ಜೊತೆ ದೆಹಲಿಗೆ ತೆರಳಿದ್ದರೇ ಹೊರತು ಅವರುಗಳಿಗೆ ವರಿಷ್ಠರಿಂದ ಆಹ್ವಾನ ಇರಲಿಲ್ಲ. ಆದರೆ, ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರೊಂದಿಗೆ ಸಮಾಲೋಚನೆ ಮಾಡುವಾಗ ಡಾ. ಪರಮೇಶ್ವರ್ ಸಭೆಯಲ್ಲಿ ಉಪಸ್ಥಿತರಿರಲಿಲ್ಲವಾದರೂ, ಅವರೊಂದಿಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿದ್ದಾರೆ.

ಖರ್ಗೆ ಇಲ್ಲವೇ ಡಾ. ಪರಮೇಶ್ವರ್ ಅವರನ್ನು ಅಧಿಕಾರಕ್ಕೆ ತಂದರೆ ಸಿದ್ದರಾಮಯ್ಯ ಬೆಂಬಲಿಗರು ಪ್ರಶ್ನೆ ಮಾಡುವುದಿಲ್ಲ. ದಲಿತ ನಾಯಕನ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದರೆ ಪಕ್ಷಕ್ಕೆ ಒಳ್ಳೆಯ ವರ್ಚಸ್ಸು ಬರಲಿದೆ. ಸರ್ಕಾರ ಉರುಳಿಸುವ ಪ್ರಯತ್ನವನ್ನು ಪ್ರತಿಪಕ್ಷ ಬಿಜೆಪಿ ಮಾಡುವುದಿಲ್ಲ ಎಂಬ ಎಲ್ಲಾ ರೀತಿಯ ಆಲೋಚನೆಗಳು ವರಿಷ್ಠರದ್ದಾಗಿದೆ. ಅಂತಹ ಸನ್ನಿವೇಶದಲ್ಲಿ ಶಿವಕುಮಾರ್ ಅವರ ಮನವೊಲಿಸಿ ಈಗಿನ ಹುದ್ದೆಗಳಲ್ಲೇ ಮುಂದುವರೆಸಬಹುದು ಎಂಬ ಚಿಂತನೆಯೂ ನಡೆದಿದೆ. ನ್ಯಾಯಾಲಯದ ಆದೇಶವನ್ನೇ ವರಿಷ್ಠರು ಎದುರು ನೋಡುತ್ತಿದ್ದು, ಸಿದ್ದರಾಮಯ್ಯ ಅವರ ರಾಜಕೀಯ ಭವಿಷ್ಯ ಈ ತೀರ್ಪಿನ ಮೇಲೆ ನಿಂತಿದೆ. ವರಿಷ್ಠರ ಜೊತೆಗಿನ ಸಮಾಲೋಚನೆ ವೇಳೆ ಇಂಡಿಯಾ ಮೈತ್ರಿಕೂಟದ ಸದಸ್ಯರ ಜೊತೆಗೂಡಿ ರಾಷ್ಟ್ರಪತಿ ಅವರನ್ನು ಭೇಟಿ ಮಾಡುವುದಲ್ಲದೆ, ಕರ್ನಾಟಕ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ನಿರ್ಧಾರದ ವಿರುದ್ಧ ದೆಹಲಿಯಲ್ಲಿ ಬೃಹತ್ ಪ್ರತಿಭಟನೆ ನಡೆಸುವ ಬಗ್ಗೆಯೂ ಸಭೆಯಲ್ಲಿ ಪ್ರಸ್ತಾಪವಾಗಿದೆ. ಆದರೆ, ನ್ಯಾಯಾಲಯದ ತೀರ್ಪು ಬರುವವರೆಗೂ ಇಂತಹ ನಿರ್ಧಾರಕ್ಕೆ ಮುಂದಾಗುವುದು ಬೇಡ ಎಂದು ವೇಣುಗೋಪಾಲ್ ಸಲಹೆಗೆ ರಾಹುಲ್, ಖರ್ಗೆ ಸಮ್ಮತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರತಿಭಟನೆ ನಿರ್ಧಾರವನ್ನು ತಾತ್ಕಾಲಿಕವಾಗಿ ಕೈಬಿಡಲಾಗಿದೆ.

ಕಾಂಗ್ರೆಸ್ ನಾಯಕರ ಮ್ಯೂಸಿಕಲ್ ಚೇರ್

ಬಗ್ಗೆ ನಾನು ಪ್ರತಿದಿನ ಪತ್ರಿಕೆಗಳು ಮತ್ತು ದೂರದರ್ಶನ ಮಾಧ್ಯಮಗಳಲ್ಲಿ ನೋಡುತ್ತಿದ್ದೇನೆ. ಅಲ್ಲಿ ಮ್ಯೂಸಿಕಲ್ ಚೇರ್ ನಡೆಯುತ್ತಿದೆ ಎಂದು ಅಶೋಕ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ರಾಜ್ಯಪಾಲರು ಅನುಮೋದನೆಗೆ ಕಳಿಸಿದ್ದ ಬಿಲ್‌ಗಳನ್ನು ವಾಪಸ್ಸು ಮಾಡಿದ್ದಕ್ಕೆ ಸರ್ಕಾರದ ನಿರ್ಲಕ್ಷ್ಯತನ ಕಾರಣವೇ ಹೊರತು ಬೇರೆ ಯಾವುದೇ ಕಾರಣವಿಲ್ಲ. ಬಿಲ್‌ಗಳನ್ನು ಕಳಿಸಿದ ಬಳಿಕ ಸಾರ್ವಜನಿಕರು ಅವುಗಳ ಬಗ್ಗೆ ಆಕ್ಷೇಪಣೆ ಮತ್ತು ದೂರುಗಳನ್ನು ರಾಜ್ಯಪಾಲರಿಗೆ ಸಲ್ಲಿಸಿರುತ್ತಾರೆ. ಆ ಆಕ್ಷೇಪಣೆಗಳ ಆಧಾರದಲ್ಲಿ ರಾಜ್ಯಪಾಲರು ಸರ್ಕಾರಕ್ಕೆ ಸ್ಪಷ್ಟೀಕರಣಗಳನ್ನು ಕೇಳಿರುತ್ತಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಬೇರೆ ಅಧಿಕಾರಿಗಳು ರಾಜ ಭವನಕ್ಕೆ ತೆರಳಿ ರಾಜ್ಯಪಾಲರಿಗೆ ಮಾಹಿತಿ ನೀಡಿ ಗೊಂದಲಗಳನ್ನು ನಿವಾರಿಸಿದರೆ ಅವರು ಅನುಮೋದನೆ ನೀಡುತ್ತಾರೆ ಎಂದು ಅಶೋಕ್ ಹೇಳಿದರು.

ಸ್ಪಷ್ಟೀಕರಣ ಕೇಳುವುದು ರಾಜ್ಯಪಾಲರಿಗಿರುವ ಸಂವಿಧಾನದತ್ತ ಹಕ್ಕು ಮತ್ತು ಅಧಿಕಾರ. ಅದನ್ನು ಗೌರವಿಸುವುದನ್ನು ಬಿಟ್ಟು ಸರ್ಕಾರದ ಪ್ರತಿನಿಧಿಗಳು ರಾಜ್ಯಪಾಲರನ್ನು ಮನಬಂದಂತೆ ನಿಂದಿಸಿದ್ದಾರೆ. ಯಾರೋ ಜನಸಾಮಾನ್ಯ ನಿಂದಿಸಿದರೆ ಅದು ಬೇರೆಯಾಗಿರುತಿತ್ತು ಅದರೆ ಮಂತ್ರಿಗಳು ದಲಿತ ಎಂದು ಏಕವಚನದಲ್ಲಿ ಹಿಯ್ಯಾಳಿಸಿದ್ದಾರೆ. ಗೌರವಾನ್ವಿತ ರಾಜ್ಯಪಾಲರ ಪೋಟೋ ಗಳನ್ನು ಸುಟ್ಟಿದ್ದಾರೆ. ಈ ಹಿಂದೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ರಾಜ್ಯಪಾಲ ಎಚ್.ಎನ್ ಭಾರದ್ವಾಜ್ ಹಲವು ವಿಧೇಯಕಗಳನ್ನು ವಾಪಸ್ ಕಳುಹಿಸಿದ್ದರು, ಆವಾಗ ನಾವು ಕಾಂಗ್ರೆಸ್ ಪಕ್ಷದ ವಿರುದ್ಧ ಆರೋಪ ಮಾಡಿದ್ದೇವಾ? ಎಂದು ಪ್ರಶ್ನಿಸಿದರು.

ದಿನದ 24 ಗಂಟೆಯೂ ಭದ್ರತೆ!

ಪ್ರತಿಭಟನೆಗಳು ನಡೆಯಬಹುದೆಂಬ ಕಾರಣಕ್ಕೆ ಕಚೇರಿಗೆ ದಿನದ 24 ಗಂಟೆಯೂ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ, ಬಂದೋಬಸ್ತ್ ಮಾಡಲಾಗಿದೆ.

ಪ್ರಾಧಿಕಾರದ ಕಚೇರಿ ಮುಂದೆ ಜೆಎಲ್‌ಬಿ ರಸ್ತೆಯಲ್ಲಿ ಕೆಎಸ್‌ಆರ್‌ಪಿ ಮತ್ತು ನಗರ ಸಶಸ್ತ್ರ ಮೀಸಲು ಪಡೆಯ ತಲಾ ಒಂದು ವಾಹನವನ್ನು ಖಾಯಂ ಆಗಿ ನಿಲ್ಲಿಸಲಾಗಿದೆ. ಜುಲೈ 10ರಿಂದ ಓರ್ವ ಸಬ್ ಇನ್ಸ್‌ಪೆಕ್ಟರ್, ಓರ್ವ ಎಎಸ್‌ಐ ನೇತೃತ್ವದಲ್ಲಿ 10 ಸಿವಿಲ್ ಪೊಲೀಸ್ ಸಿಬ್ಬಂದಿ, 1 ಸಿಎಆರ್ ತುಕಡಿ, 1 ಕೆಎಸ್‌ಆರ್‌ಪಿ ತುಕಡಿಯ 30 ಮಂದಿ ಕಾನ್ಸ್‌ಟೇಬಲ್‌ಗಳನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ.

ಜುಲೈ ಮೊದಲ ವಾರ ಬಿಜೆಪಿ-ಜೆಡಿಎಸ್ ಮತ್ತು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಮುಡಾ ಹಗರಣ ಸಂಬಂಧ ಪ್ರತಿಭಟನೆ ನಡೆಸಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ್ದರಿಂದಾಗಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರು ಮುಂಜಾಗ್ರತಾ ಕ್ರಮವಾಗಿ ಸ್ಥಳದಲ್ಲಿ ದಿನದ 24 ಗಂಟೆಯೂ ಮೂರು ಪಾಳಿಯಲ್ಲಿ ಸಿಬ್ಬಂದಿಗಳನ್ನು ನಿಯೋಜಿಸಿದ್ದರು. ಹಗರಣದ ಹಿನ್ನೆಲೆಯಲ್ಲಿ ಸರ್ಕಾರ ತನಿಖೆಗಾಗಿ ಹಿರಿಯ ಐಎಎಸ್ ಅಧಿಕಾರಿ ನೇತೃತ್ವದ ತಂಡ ರಚಿಸಿ ತದನಂತರ ಅವರನ್ನು ವಾಪಸ್ ಕರೆಸಿಕೊಂಡು ಬದಲಿಯಾಗಿ ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದ ಏಕ ಸದಸ್ಯ ಸಮಿತಿ ರಚಿಸಿ ತನಿಖೆ ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಮುಡಾ ಕಚೇರಿಗೆ ಭಾರೀ ಭದ್ರತೆ ಒದಗಿಸಲಾಗಿದೆ. 'ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದಂತೆ' ಎಂಬ ಗಾದೆಯಂತೆ ನಿವೇಶನಗಳನ್ನು ಕಂಡ ಕಂಡವರಿಗೆ ಹಂಚಿಕೆ ಮಾಡಿದ ಮೇಲೆ ಮುಡಾಗೆ ಪೊಲೀಸ್ ಭದ್ರತೆ ಒದಗಿಸಲಾಗಿದೆ ಎಂದು ಸಾರ್ವಜನಿಕರು ಗೇಲಿ ಮಾಡುವಂತಾಗಿದೆ ನಮ್ಮ ಹೆಮ್ಮೆಯ ಮುಡಾ ಸ್ಥಿತಿ.

ಆರ್‌ಟಿ ನಗರದಲ್ಲಿ 25 ನಿವೇಶನ ಮಂಜೂರು


ಅಂದಿನ ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಮಂಜೂರು ಮಾಡಿರುವ ದಾಖಲೆ 'ಮೈಸೂರು ಮಿತ್ರ'ನಿಗೆ ಲಭ್ಯವಾಗಿದೆ. 'ಜಮೀನು ಕಳೆದುಕೊಂಡವರಿಗೆ ಭೂ ಪರಿಹಾರ ರೂಪದಲ್ಲಿ ನೀಡುವ ನಿವೇಶನ ಮಂಜೂರಾತಿ ಪತ್ರ' ಶೀರ್ಷಿಕೆಯ ಹಂಚಿಕೆ ಪತ್ರ (Allotment Letter)ದಲ್ಲಿ ಮೈಸೂರು ತಾಲೂಕು, ಕಸಬಾ ಹೋಬಳಿ, ದೇವನೂರು ಗ್ರಾಮದ ಸರ್ವೆ ನಂಬರ್ 180ರಲ್ಲಿ 5.02 ಎಕರೆ ವಿಸ್ತೀರ್ಣದ ಜಮೀನನ್ನು ಪರಿಹಾರ ನೀಡದೇ ಬಡಾವಣೆ ಮತ್ತು ಹೊರವರ್ತುಲ ರಸ್ತೆ ನಿರ್ಮಾಣಕ್ಕಾಗಿ ಪ್ರಾಧಿಕಾರವು ಉಪಯೋಗಿಸಿಕೊಂಡಿರುವುದರಿಂದ ಮುಡಾ ಸಭಾ ನಿರ್ಣಯ (ದಿನಾಂಕ 6-11-2020, 20-11-2020 ಮತ್ತು 7-01-2023)ದಂತೆ ಭೂ ಮಾಲೀಕರಾದ ಮೆ॥ ಕ್ಯಾಥಡ್ರಲ್ ಪ್ಯಾರಿಸ್ ಸೊಸೈಟಿ (ರಿ) ಅವರಿಗೆ ಪರಿಹಾರಾತ್ಮಕವಾಗಿ 54,994 ಚದರಡಿಗಳಷ್ಟು ನಿವೇಶನಗಳನ್ನು ಮಂಜೂರು ಮಾಡಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ ಮೈನಪ್ರಾ ಎಲ್‌ಎಕ್ಯೂ2022-23 ದಿನಾಂಕ 18-3-2023ರಲ್ಲಿ ಆದೇಶ ಮಾಡಲಾಗಿದೆ ಎಂದು ಆಯುಕ್ತರು ನಮೂದಿಸಿದ್ದಾರೆ.

ಅದರಂತೆ ದೇವನೂರು ಗ್ರಾಮದ ಸರ್ವೆ ನಂಬರ್ ಜಮೀನಿಗೆ ಪರಿಹಾರದ ರೂಪದಲ್ಲಿ ಸೊಸೈಟಿ ಹೆಸರಿಗೆ ಮೈಸೂರಿನ ರವೀಂದ್ರನಾಥ ಠಾಗೋರ್‌ನಗರ (ಆರ್‌ಟಿ ನಗರ)ದಲ್ಲಿ 18 ಹಾಗೂ ನಾಚನಹಳ್ಳಿ-ಕುಪ್ಪಲೂರು 3ನೇ ಹಂತ 'ಎ' ವಲಯ ಬಡಾವಣೆಯಲ್ಲಿ 7 ವಿವಿಧ ಅಳತೆಯ ನಿವೇಶನಗಳನ್ನು ಶೇ. ದರ ರಹಿತವಾಗಿ ಯಾವುದೇ ಹಣ ಪಾವತಿಸಿಕೊಳ್ಳದೇ ಹಂಚಿಕೆ ಮಾಡಿ ಪ್ರತಿಯೊಂದು ನಿವೇಶನಗಳಿಗೂ ಸಂಖ್ಯೆ ಸಮೇತ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಸಹಿ ಮಾಡಿರುವ ಮಂಜೂರಾತಿ ಪತ್ರಗಳನ್ನು ವಿತರಿಸಿದ್ದಾರೆ. 5.02 ಎಕರೆ ಜಮೀನು ಭೂಸ್ವಾಧೀನಕ್ಕೆ ಮುಡಾ ಅಧಿಸೂಚನೆ ಹೊರಡಿಸಿತ್ತೇ? ಸದರಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತ್ತೇ? ಎಂಬುದರ ಬಗ್ಗೆ ಮಂಜೂರಾತಿ ಪತ್ರದಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ, ಈ ಜಮೀನಿಗೆ ಪರಿಹಾರ ನೀಡದೇ ಬಡಾವಣೆ ಹಾಗೂ ಹೊರವರ್ತುಲ ರಸ್ತೆ ನಿರ್ಮಾಣಕ್ಕಾಗಿ ಮುಡಾ ಉಪಯೋಗಿಸಿಕೊಂಡಿದೆ ಎಂದು ಮಾತ್ರ ಉಲ್ಲೇಖಿಸಲಾಗಿದೆ.


ಈ ಜಮೀನಿಗೆ ಪರಿಹಾರ ಕೊಡುವ ವಿಚಾರವಾಗಿ 2020ರ ನವಂಬರ್ 6ರಂದು ನಡೆದ ಮುಡಾ ಸಭೆಯಲ್ಲಿ ಉಲ್ಲೇಖವಿದೆ. ಈ ಜಮೀನನ್ನು ಯಾವಾಗ ಮುಡಾ ಉಪಯೋಗಿಸಿಕೊಂಡಿತು ಹಾಗೂ ಸೊಸೈಟಿಯವರು ಪರಿಹಾರಕ್ಕಾಗಿ ಯಾವಾಗ ಅರ್ಜಿ ಸಲ್ಲಿಸಿದ್ದರು ಎಂಬುದರ ಬಗ್ಗೆ ಮಂಜೂರಾತಿ ಪತ್ರದಲ್ಲಿ ನಮೂದಿಸಿಲ್ಲ.

ದಸರಾ ಗಜಪಡೆಯ ಕ್ಯಾಪ್ಟನ್ ಅಭಿಮನ್ಯು ತೂಕದಲ್ಲೂ ಬಾಸ್!

● ಲಕ್ಷ್ಮಿಯೇ ಸ್ಲಿಮ್! ● ಧನ್ವಂತ್ರಿ ರಸ್ತೆಯಲ್ಲಿರುವ ಸಾಯಿರಾಂ ಅಂಡ್ ಕೋ. ವೇ ಬ್ರಿಡ್ಜ್‌ನಲ್ಲಿ ಆನೆಗಳ ತೂಕ ಪರೀಕ್ಷೆ



ಅಭಿಮನ್ಯು ಬಲು ಭಾರ 5560 ಕೆಜಿ



ಲಕ್ಷ್ಮಿಯ ತೂಕ 2480 ಕೆಜಿ

ಅಭಿಮನ್ಯು: 5560 ಕೆಜಿ ತೂಕ	
ಧನಂಜಯ	: 5155
ಗೋಪಿ	: 4970
ಭೀಮ	: 4945
ಏಕಲವ್ಯ	: 4730
ಕಂಜನ್	: 4515
ರೋಹಿತ್	: 3625
ವರಲಕ್ಷ್ಮಿ	: 3495
ಲಕ್ಷ್ಮಿ	: 2480

> ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಮೊದಲ ತಂಡದಲ್ಲಿ ಆಗಮಿಸಿರುವ ಎಲ್ಲಾ 9 ಆನೆಗಳು ಆರೋಗ್ಯದಿಂದಿವೆ. ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲು ಸಮರ್ಥವಾಗಿವೆ. ಆನೆಗಳ ದೈಹಿಕ ಸಾಮರ್ಥ್ಯವನ್ನು ತಿಳಿದುಕೊಳ್ಳಲು ತೂಕ ಪರೀಕ್ಷೆ ಮಾಡಿಸಲಾಗಿದೆ. ಆನೆಗಳ ತೂಕದ ಆಧಾರದ ಮೇಲೆ ಅವುಗಳಿಗೆ ಪೌಷ್ಟಿಕ ಆಹಾರವನ್ನು ನೀಡಲಾಗುವುದು. ಸದ್ಯ ಎಲ್ಲಾ ಆನೆಗಳ ಆರೋಗ್ಯವು ಸ್ಥಿರವಾಗಿದ್ದು, ಪೌಷ್ಟಿಕ ಆಹಾರವನ್ನು ನೀಡಲಾಗುತ್ತಿದೆ. ಭಾನುವಾರದಿಂದ ನಡಿಗೆ ತಾಲೀಮು ಆರಂಭವಾಗಲಿದೆ. -ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ

ಮೈಸೂರು, ಆ.24(ಎಂಟಿವೈ)- ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿ ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಮೊದಲ ತಂಡದ 9 ಆನೆಗಳಿಗೆ ಶನಿವಾರ ತೂಕ ಪರೀಕ್ಷೆ ಮಾಡಲಾಯಿತು. ಅಭಿಮನ್ಯು ತೂಕದಲ್ಲೂ ಬಾಸು.

ದಸರಾ ಗಜಪಡೆಯಲ್ಲಿ ಸ್ಥಾನಗಿಟ್ಟಿಸಿಕೊಂಡು ವಿವಿಧ ಕ್ಯಾಂಪ್‌ಗಳಿಂದ ಮೈಸೂರಿಗೆ ಆಗಮಿಸಿದ ಆನೆಗಳಿಗೆ ಪ್ರತಿ ವರ್ಷವೂ ತೂಕ ಮಾಡಿಸುವುದು ಸಂಪ್ರದಾಯ. ಇಂದು ಅರಮನೆಯಿಂದ ಬಿಗಿ ಭದ್ರತೆಯಲ್ಲಿ ಆನೆಗಳನ್ನು ವೇ ಬ್ರಿಡ್ಜ್‌ಗೆ ಕರೆತಂದು, ಒಂದೊಂದೇ ಆನೆಯ ತೂಕ ಮಾಡಿಸಿ ದಾಖಲಿಸಲಾಯಿತು.

ಅರಮನೆಯಿಂದ ಮೊದಲ ಬಾರಿಗೆ ಹೊರಗೆ ಬಂದ ಗಜಪಡೆ: ಶುಕ್ರವಾರವಷ್ಟೇ ಅರಮನೆ ಆವರಣ ಪ್ರವೇಶಿಸಿದ್ದ ಗಜಪಡೆಯನ್ನು ಶನಿವಾರ ಮೊದಲ ಬಾರಿಗೆ ಅರಮನೆಯಿಂದ ಹೊರಗೆ ಕರೆತರಲಾಯಿತು. ಅರಮನೆಯ ಬಲರಾಮ ದ್ವಾರದಿಂದ ಕೋಟೆ ಆಂಜನೇಯಸ್ವಾಮಿ ದೇವಾಲಯ, ಚಾಮರಾಜ ವೃತ್ತ, ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ ಮೂಲಕ ಧನ್ವಂತ್ರಿ ರಸ್ತೆಯಲ್ಲಿರುವ ಸಾಯಿರಾಂ ಅಂಡ್ ಕೋ- ಎಲೆಕ್ಟ್ರಾನಿಕ್ ತೂಕದ ಕೇಂದ್ರಕ್ಕೆ ಕರೆತರಲಾಯಿತು.

ನಂತರ ಅರಣ್ಯಾಧಿಕಾರಿ ಗಳ ಸಮ್ಮುಖದಲ್ಲಿ ಮೊದಲಿಗೆ ದಸರಾ ಗಜಪಡೆಯ ಕ್ಯಾಪ್ಟನ್ ಅಭಿಮನ್ಯು ಆನೆಯ ತೂಕ ಪರೀಕ್ಷಿಸಲಾಯಿತು. ನಂತರ ವರ ಲಕ್ಷ್ಮಿ, ಭೀಮ, ಏಕಲವ್ಯ, ಲಕ್ಷ್ಮಿ, ರೋಹಿತ್, ಗೋಪಿ, ಕಂಜನ್ ಮತ್ತು ಧನಂಜಯ ಆನೆಗಳ ತೂಕವನ್ನು ಪರೀಕ್ಷಿಸಲಾಯಿತು.

ಬಲಶಾಲಿ ಅಭಿಮನ್ಯು

ಮೊದಲ ತಂಡದ 9 ಆನೆಗಳಲ್ಲಿ ಅಂಬಾರಿ ಆನೆ ಅಭಿಮನ್ಯು ಹೆಚ್ಚು ತೂಕ ಹೊಂದುವ ಮೂಲಕ ಮೊದಲ ಸ್ಥಾನದಲ್ಲಿ ಗುರುತಿಸಿಕೊಂಡಿತು. ಈ ಹಿಂದೆ ಅರ್ಜುನ ಆನೆ ತೂಕದಲ್ಲಿ ಮೊದಲ ಸ್ಥಾನ ಪಡೆಯುತ್ತಿದ್ದರೆ, ಅಭಿಮನ್ಯು ಎರಡನೇ ಸ್ಥಾನದಲ್ಲಿರುತ್ತಿತ್ತು. ಅರ್ಜುನನ ನಂತರವಿದ್ದ 58 ವರ್ಷದ ಅಭಿಮನ್ಯು 5560 ಕೆ.ಜಿ. ತೂಕದೊಂದಿಗೆ ಈಗ ಪ್ರಥಮ ಸ್ಥಾನಕ್ಕೇರಿದ್ದಾನೆ. 45 ವರ್ಷದ ಧನಂಜಯ ಆನೆಯು 5155 ಕೆ.ಜಿ. ತೂಕದೊಂದಿಗೆ 2ನೇ ಸ್ಥಾನ, 43 ವರ್ಷದ ಗೋಪಿ 4970 ಕೆ.ಜಿ. ತೂಕದೊಂದಿಗೆ 3ನೇ ಸ್ಥಾನ, 24 ವರ್ಷದ ಭೀಮ 4945 ಕೆ.ಜಿ. ತೂಕದೊಂದಿಗೆ ನಾಲ್ಕನೇ ಸ್ಥಾನ ಪಡೆಯಿತು. ಇದೇ ಮೊದಲ ಬಾರಿಗೆ ದಸರೆಯಲ್ಲಿ ಪಾಲ್ಗೊಳ್ಳುತ್ತಿರುವ 39 ವರ್ಷದ ಏಕಲವ್ಯ ಆನೆ 4730 ಕೆ.ಜಿ. ತೂಕದೊಂದಿಗೆ 5ನೇ ಸ್ಥಾನ ಪಡೆಯುವ ಮೂಲಕ ಗಮನ ಸೆಳೆಯಿತು.

25 ವರ್ಷದ ಕಂಜನ್ 4515 ಕೆ.ಜಿ.ಯಿಂದ 6ನೇ ಸ್ಥಾನ, 22 ವರ್ಷದ ರೋಹಿತ್ 3625 ಕೆ.ಜಿ. ತೂಕದೊಂದಿಗೆ 7ನೇ ಸ್ಥಾನ, 68 ವರ್ಷದ ವರಲಕ್ಷ್ಮಿ 3495 ಕೆ.ಜಿ. ತೂಕದೊಂದಿಗೆ 8ನೇ ಸ್ಥಾನ ಹಾಗೂ 23 ವರ್ಷದ ಲಕ್ಷ್ಮೀ 2480 ಕೆ.ಜಿ. ತೂಕದೊಂದಿಗೆ 9ನೇ ಸ್ಥಾನದಲ್ಲಿ ಗುರುತಿಸಿಕೊಂಡಿದೆ.

ಕಣ್ತುಂಬಿಕೊಂಡ ಜನ: ಅರಮನೆಯಿಂದ ಜಂಬೂಸವಾರಿ ಮಾರ್ಗದಲ್ಲಿ ಗಜಪಡೆ ಸಾಗುತ್ತಿರುವಾಗ ಸಾರ್ವಜನಿಕರು, ವ್ಯಾಪಾರಿಗಳು ಆನೆಗಳಿಗೆ ಹೂವು ನೀಡಿ ಭಕ್ತಿಯಿಂದ ನಮಿಸಿದರು.

ವಾಹನ ಸವಾರರು ಮೊಬೈಲ್‌ಗಳಲ್ಲಿ ಗಜಪಡೆಯ ವಿಡಿಯೋ ಚಿತ್ರೀಕರಣ ಮಾಡಿಕೊಂಡು ಸಂಭ್ರಮಿಸಿದರು. ತೂಕ ಮಾಡಿಸಿಕೊಂಡ ನಂತರೂ ಅದೇ ಮಾರ್ಗದಲ್ಲಿ ಸಾಗಿದ್ದರಿಂದ ಜನರು ಕುತೂಹಲದಿಂದ ಆನೆಗಳನ್ನು ವೀಕ್ಷಿಸಿದರು.

ಕಾಲು ಊರದ ಕಂಜನ್: ಕಳೆದ ವರ್ಷ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿರುವ ಕಂಜನ್ ಆನೆಯ ಬಲಭಾಗದ ಮುಂಗಾಲಿನ ಪಾದದಲ್ಲಿ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ನೆಲಕ್ಕೆ ಪಾದ ಊರಲು ಪ್ರಯಾಸ ಪಡುತ್ತಿತ್ತು. ಅದರ ಪರಿಸ್ಥಿತಿ ಗಮನಿಸಿದ ಮಾವುತ, ಕಾವಾಡಿಗಳು ಪಾದವನ್ನು ಪರಿಶೀಲಿಸಿದರು. ಯಾವುದೇ ಗಾಯದ ಗುರುತು ಕಾಣಿಸಲಿಲ್ಲ. ಆದರೂ ವೇ ಬ್ರಿಡ್ಜ್ ಮೇಲೆ ಮತ್ತೆ ಪಾದ ಪರಿಶೀಲಿಸಲಾಯಿತು.

ಪಾದಕ್ಕೆ ಕಲ್ಲು ಒತ್ತಿರುವುದರಿಂದ ನೋವು ಕಾಣಿಸಿ ಕೊಂಡಿರಬಹುದೆಂದು ಶಂಕಿಸಲಾಗಿದ್ದು, ಅರಮನೆ ಪ್ರವೇಶಿಸಿದ ನಂತರ ಚಿಕಿತ್ಸೆ ನೀಡಲಾಯಿತು. ಈ ಸಂದರ್ಭದಲ್ಲಿ ಡಿಸಿಎಫ್ ಡಾ. ಐ.ಬಿ.ಪ್ರಭುಗೌಡ, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಸಾಯಿರಾಂ ಅಂಡ್ ಕೋ ವೇ ಬ್ರಿಡ್ಜ್‌ನಲ್ಲಿ ತೂಕದ ಪರೀಕ್ಷೆ ಮಾಡಿಸಲು ಎಲ್ಲಾ ಆನೆಗಳನ್ನು ಕರೆತರುತ್ತಿರುವುದು.

ಇಂದು 'ಚುರುಮುರಿ' ಲಘು ಹಾಸ್ಯದ 10ನೇ ವರ್ಷಾಚರಣೆ

ಮೈಸೂರು,ಆ.24- ಮೈಸೂರು ಆಕಾಶವಾಣಿ ಹಾಗೂ ಸಮುದ್ಯತಾ ಶ್ರೋತೃ ಬಳಗ ಮೈಸೂರು ವತಿಯಿಂದ ಮೈಸೂರು ರಂಗಾಯಣದ ಸಹಯೋಗದೊಂದಿಗೆ ಆ.25 ರಂದು ಮಧ್ಯಾಹ್ನ 2.30 ಗಂಟೆಗೆ ರಂಗಾಯಣದ ಆವರಣದಲ್ಲಿರುವ ಬಿ.ವಿ ಕಾರಂತ ರಂಗ ಚಾವಡಿಯಲ್ಲಿ, ಮೈಸೂರು ಆಕಾಶವಾಣಿಯಿಂದ ಬಿತ್ತರಗೊಂಡ "ಚುರುಮುರಿ" ಲಘು ಹಾಸ್ಯ ಕಾರ್ಯಕ್ರಮದ 10ನೇ ವರ್ಷಾಚರಣೆಯನ್ನು ಏರ್ಪಡಿಸಲಾಗಿದೆ. ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಉದ್ಘಾಟಿಸಲಿದ್ದು, ಸಮುದ್ಯತಾ ಶ್ರೋತೃ ಬಳಗದ ಅಧ್ಯಕ್ಷ ಕಣ್ಣೂರು ವಿ.ಗೋವಿಂದಾಚಾರಿ ಅಧ್ಯಕ್ಷತೆ ವಹಿಸಲಿದ್ದಾರೆ. ಆಕಾಶವಾಣಿ ಉಪನಿರ್ದೇಶಕ ಉಮೇಶ್ ಎಸ್.ಎಸ್ ಉಪಸ್ಥಿತಿ ಇರಲಿದ್ದು, ಕನ್ನಡ-ಸಂಸ್ಕೃತಿ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ರಂಗಾಯಣದ ಉಪನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕ ಎನ್.ಕೇಶವ ಮೂರ್ತಿ, ಸಮುದ್ಯತಾ ಶ್ರೋತೃ ಬಳಗದ ಸುಧಾರಾಜ್ ಉಪಸ್ಥಿತರಿರಲಿದ್ದಾರೆ.

ದೇವಾಲಯದ ಹೆಬ್ಬಾಗಿಲು ನಿರ್ಮಾಣ ಕಾಮಗಾರಿಗೆ ಶಾಸಕ ಜಿ.ಟಿ.ದೇವೇಗೌಡ ಚಾಲನೆ



ಮೈಸೂರು ತಾಲೂಕು ಜಯಪುರ ಗ್ರಾಮದ ಶ್ರೀ ಮಲೆಯ ಋಷಿ ಕೋಣಪ್ಪ ಸ್ವಾಮಿ ದೇವಾಲಯದಲ್ಲಿ ಸಮಾಜ ಸೇವಕ ಎಸ್.ಶ್ರೀಕಾಂತ್ 12 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ಮಹಾದ್ವಾರ (ಹೆಬ್ಬಾಗಿಲು) ನಿರ್ಮಾಣಕ್ಕೆ ಶಾಸಕ ಜಿ.ಟಿ.ದೇವೇಗೌಡರು ಭೂಮಿಪೂಜೆ ನೆರವೇರಿಸಿದರು. ಬರಡನಪುರ ಮಹಾಂತೇಶ್ವರ ಸ್ವಾಮಿ ಮಠದ ಪೀಠಾಧಿಪತಿ ಪರಶಿವಮೂರ್ತಿ ಸ್ವಾಮೀಜಿ, ಶಾಸಕರನ್ನು ಅಭಿನಂದಿಸಲಾಯಿತು. ಗಣೇಶ್ ಬುದ್ಧಿ, ಜಯಪುರ ಪಂಚಾಯಿತಿ ವ್ಯಾಪ್ತಿಯ ಮುಖಂಡರು ಉಪಸ್ಥಿತರಿದ್ದರು.

ಹವಾಮಾನ ವೈಪರೀತ್ಯ: ಹೈದರಾಬಾದ್‌ಗೆ ತೆರಳುತ್ತಿದ್ದ ಹೆಲಿಕಾಪ್ಟರ್ ಪುಣೆಯಲ್ಲಿ ಪತನ

ಪೈಲಟ್‌ಗೆ ಗಂಭೀರ ಗಾಯ



ಪುಣೆ: ಮಹಾರಾಷ್ಟ್ರದ ಪುಣೆಯಲ್ಲಿ ಭಾರೀ ಮಳೆಯ ನಡುವೆ ಶನಿವಾರ ಹೆಲಿಕಾಪ್ಟರ್ ಪತನವಾಗಿದ್ದು, ಪೈಲಟ್ ಸೇರಿದಂತೆ ನಾಲ್ವರು ಗಾಯಗೊಂಡಿದ್ದಾರೆ. ಈ ಹೆಲಿಕಾಪ್ಟರ್ ಮುಂಬೈನಿಂದ ಹೈದರಾಬಾದ್‌ಗೆ ಹೋಗುತ್ತಿತ್ತು. ಪ್ರಾಥಮಿಕ ವರದಿಗಳ ಪ್ರಕಾರ, ಎಲ್ಲಾ ನಾಲ್ವರು ಪ್ರಯಾಣಿಕರು ಗಾಯಗೊಂಡಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಖಾಸಗಿ ಹೆಲಿಕಾಪ್ಟರ್ ಮುಂಬೈನಿಂದ ಹೈದರಾಬಾದ್‌ಗೆ ತೆರಳುತ್ತಿದ್ದಾಗ ಪುಣೆ ಜಿಲ್ಲೆಯ ಪೌಡ್ ಗ್ರಾಮದ ಬಳಿ ಅಪಘಾತಕ್ಕೀಡಾಗಿದ್ದು ಹೆಲಿಕಾಪ್ಟರ್‌ನಲ್ಲಿ ನಾಲ್ವರು ಪ್ರಯಾಣಿಸುತ್ತಿದ್ದರು.

ಪುಣೆ ಗ್ರಾಮಾಂತರ ಪೊಲೀಸ್ ಎಸ್ಪಿ ಪಂಕಜ್ ದೇಶಮುಖ್ ಮಾತನಾಡಿ, ಪೈಲಟ್ ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಇತರ ಮೂವರು ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯವಾಗಿದೆ ಎಂದರು.

ಮಾಹಿತಿ ಪ್ರಕಾರ, AW 139 ಹೆಸರಿನ ಹೆಲಿಕಾಪ್ಟರ್ ಮುಂಬೈನ ಜುಹುದಿಂದ ಹೊರಟು ಹೈದರಾಬಾದ್‌ಗೆ ಹೋಗುತ್ತಿತ್ತು. ನಂತರ ಪೌಡ್ ಪ್ರದೇಶದಲ್ಲಿ ಪತನಗೊಂಡಿದೆ. ಘಟನೆಯಲ್ಲಿ ಕ್ಯಾಪ್ಟನ್ ಆನಂದ್ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಸದರ್ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಹೆಲಿಕಾಪ್ಟರ್ ಅನ್ನು ಗ್ಲೋಬಲ್ ವೆಕ್ಟ್ರಾ ಹೆಲಿಕಾಪ್ಟರ್‌ಗಳನ್ನು ನಿರ್ವಹಿಸುತ್ತಿದ್ದವು.

ಸಾರಿಗೆ ಬಸ್ ದರ ಹೆಚ್ಚಳ ಸುಳಿವು ನೀಡಿದ ಸಚಿವ ರಾಮಲಿಂಗಾರೆಡ್ಡಿ

ಬೆಂಗಳೂರು: ನೀರಿನ ಬಿಲ್ ಏರಿಕೆ ಮಾಡುವುದಾಗಿ ಶಾಕ್ ನೀಡಿದ್ದ ರಾಜ್ಯ ಸರ್ಕಾರ, ಇದೀಗ ಮತ್ತೊಂದು ಶಾಕ್ ನೀಡಿದೆ.



ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ದರ ಏರಿಕೆ ಮಾಡುವ ಸುಳಿವನ್ನು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿಯವರು ಶನಿವಾರ ನೀಡಿದ್ದಾರೆ.

ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮಾದರಿಯಲ್ಲೇ ಸಾರಿಗೆ ನಿಗಮಗಳಲ್ಲಿ ಪ್ರಯಾಣ ದರ ಏರಿಕೆ ನಿರ್ಧಾರಗಳನ್ನು ಕೈಗೊಳ್ಳಲು ಪ್ರತ್ಯೇಕ ನಿಯಂತ್ರಣ ಆಯೋಗ ರಚನೆಗೆ ಸರ್ಕಾರ ಮುಂದಾಗಿದೆ ಎಂಬ ಪತ್ರಿಕೆಯ ವರದಿ ಕುರಿತು ವಿಧಾನಸಭೆ ವಿರೋಧ ಪಕ್ಷದ ನಾಯಕರ ಆರ್.ಅಶೋಕ್ ಅವರು ಸರ್ಕಾರದ ವಿರುದ್ಧ ಕಿಡಿಕಾರಿದ್ದರು.

ಅಧಿಕಾರಕ್ಕೆ ಬಂದ ದಿನದಿಂದ ಬೆಲೆ ಏರಿಕೆ, ತೆರಿಗೆ ಹೆಚ್ಚಳ ಹೀಗೆ ಒಂದಲ್ಲ ಒಂದು ರೀತಿ ಜನ ಸಾಮಾನ್ಯರ ಸುಲಿಗೆ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರ, ಈಗ ಬಸ್ ದರ ಏರಿಕೆಗೆ ಪ್ರತ್ಯೇಕ ಆಯೋಗ ರಚಿಸಿ ಪಿಕ್ ಪಾಕೆಟ್‌ಗಾಗಿ ಹೊಸ ಪ್ರಯೋಗ ಮಾಡಲು ಹೊರಟಿದೆ. ಆಡಳಿತ ಮಾಡುವಲ್ಲಿ ಮೂರು ಕಾಸು ಪ್ರಯೋಜನ ಇಲ್ಲದಿದ್ದರೂ ಜನರಿಗೆ ಮಂಕು ಬೂದಿ ಎರಚಿ ಹೊಸ ಪ್ರಯೋಗಗಳ ಮೂಲಕ ಜನರನ್ನ ಸುಲಿಗೆ ಮಾಡುವಲ್ಲಿ ಕಾಂಗ್ರೆಸ್ ಪಕ್ಷದವರು ಬಹಳ ನಿಸ್ಸೀಮರು ಎಂದು ಹೇಳಿದ್ದರು.

ಈ ಹೇಳಿಕೆಗೆ ಪ್ರತಿಕ್ರಿಯೆ ನೀಡಿರುವ ರಾಮಲಿಂಗಾ ರೆಡ್ಡಿಯವರು, ಬಿಜೆಪಿ ಸರ್ಕಾರದ ವಿರುದ್ಧ ಕಿಡಿಕಾರಿದ್ದಾರೆ. ಅಲ್ಲದೆ, ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ದರ ಏರಿಕೆ ಮಾಡುವ ಸುಳಿವನ್ನೂ ನೀಡಿದ್ದಾರೆ.

ಅಶೋಕ್‌ರವರೇ, ನೀವು ಸಾರಿಗೆ ಸಚಿವರಾಗಿದ್ದವರು. ಸಾರಿಗೆ ಸಂಸ್ಥೆಗಳ ಬಗ್ಗೆ ತಿಳಿದೂ ಕೂಡ ಈ ರೀತಿ ಮಾತನಾಡುತ್ತಿದ್ದಾರೆ ಎಂದರೆ ಆಶ್ಚರ್ಯವಾಗುತ್ತಿದೆ. 2013ರಲ್ಲಿ ತಾವು ಸಾರಿಗೆ ಸಚಿವರಾಗಿದ್ದಾಗ ಬಸ್ ಪ್ರಯಾಣ ದರ ಶೇ.10.5 ಏರಿಕೆ ಮಾಡಿರುವುದು ಮರೆತುಬಿಟ್ಟಿದ್ದೀರಾ. 2020ರಲ್ಲಿ ತಮ್ಮದೇ ಪಕ್ಷ ಅಧಿಕಾರದಲ್ಲಿದ್ದಾಗ ಬಸ್ ಪ್ರಯಾಣ ದರ 12% ಹೆಚ್ಚಳ ಮಾಡಿದಾಗ ನೀವು ಕ್ಯಾಬಿನೆಟ್ ಮಂತ್ರಿಯಾಗಿದ್ದರಲ್ಲವೇ. ಆಗ ಯಾಕೆ ವಿರೋಧ ವ್ಯಕ್ತಪಡಿಸಲಿಲ್ಲ ಎಂದು ಪ್ರಶ್ನಿಸಿದ್ದಾರೆ.



15/11/2021ರಲ್ಲಿ ಎಂ.ಆರ್ ಶ್ರೀನಿವಾಸಮೂರ್ತಿ ಅಧ್ಯಕ್ಷತೆಯಲ್ಲಿ ಏಕಸದಸ್ಯ ಸಮಿತಿಯನ್ನು ತಮ್ಮದೇ ಬಿಜೆಪಿ ಸರ್ಕಾರ ರಚಿಸಿತ್ತು. ಅನೇಕ ಶಿಫಾರಸುಗಳೊಂದಿಗೆ ಪ್ರಮುಖವಾಗಿ, ಬಸ್ ಪ್ರಯಾಣ ದರವನ್ನು Institutional Arrangement for Revision of Bus Fares ಶೀರ್ಷಿಕೆಯಡಿಯಲ್ಲಿ KERC ಮಾದರಿಯಲ್ಲಿ ಕಾಲಕಾಲಕ್ಕೆ ಬಸ್ ದರವನ್ನು ಹೆಚ್ಚಿಸಬೇಕು, ಆಗಷ್ಟೇ ಸಾರಿಗೆ ಸಂಸ್ಥೆಗಳು ಉಳಿಯಲು ಸಾಧ್ಯವೆಂದು ಸದರಿ ಸಮಿತಿಯು ವರದಿ ನೀಡಿದ್ದು, ನೀವು ಕ್ಯಾಬಿನೆಟ್ ಮಂತ್ರಿಯಾಗಿದ್ದಾಗ ಯಾಕೆ ಈ ವರದಿಯನ್ನು ತಿರಸ್ಕರಿಸಲಿಲ್ಲ. ತಮ್ಮದೇ ಸರ್ಕಾರ ಅಂಗೀಕಾರ ಮಾಡಿದ ವರದಿಯನ್ನು ಈಗ ಸರಿಯಿಲ್ಲವೆಂದು ಹೇಳಲು ಹೊರಟ್ಟಿದ್ದೀರಾ?

ಸರ್ಕಾರವು 30.09.2000ರಂದು ಹೊರಡಿಸಲಾದ ಸರ್ಕಾರದ ಆದೇಶ ಸಂಖ್ಯೆ ಹೆಚ್‌ಟಿಡಿ/85/ಟಿಆರ್‌ಎ/2000ರ ಅನ್ವಯ ಕರಾರಸಾ ನಿಗಮ ಹಾಗೂ ಇತರೆ ರಾಜ್ಯ ರಸ್ತೆ ಸಾರಿಗೆ ನಿಗಮಗಳು ಡೀಸೆಲ್ ತೈಲದ ಬೆಲೆಯಲ್ಲಿ ಹೆಚ್ಚಳವಾದಾಗ ಮತ್ತು ನೌಕರರಿಗೆ ನೀಡುವ ತುಟ್ಟಿಭತ್ಯೆ ದರಗಳಲ್ಲಿ ಹೆಚ್ಚಳವಾದಾಗ ಪ್ರಯಾಣ ದರಗಳನ್ನು ಸ್ವಯಂಚಾಲಿತ ದರ ಹೊಂದಾಣಿಕೆ ನೀತಿಯಂತೆ ಪರಿಷ್ಕರಿಸಲು ಅನುಮತಿ ನೀಡಿರುತ್ತದೆ ಎಂಬ ಮಾಹಿತಿಯೇ ತಮಗೆ ಇಲ್ಲವೇ. ತಮ್ಮದೇ ಬಿ.ಜೆ.ಪಿ ಸರ್ಕಾರ ಕಳೆದ 5 ವರ್ಷಗಳಲ್ಲಿ ಸಾರಿಗೆ ಸಂಸ್ಥೆಗಳನ್ನು ರೂ.5900 ಕೋಟಿ ನಷ್ಟದಲ್ಲಿಟ್ಟು ಹೋಗಿದ್ದು, ಈಗ ಸಾರಿಗೆ ಸಂಸ್ಥೆಗಳ ಪಾಡೇನು ಎಂಬುದರ ಬಗ್ಗೆ ತಾವು ಉತ್ತರ ನೀಡುವಿರಾ. ನನಗೆ ರಾಜಕೀಯವೇ ಮುಖ್ಯ. ಸಾರಿಗೆ ಸಂಸ್ಥೆಗಳು ಉಳಿದರೇನು. ಮುಳುಗಿದರೆ ನನಗೇನು. ಅನ್ನುವ ನಿಮ್ಮ ಮನಸ್ಥಿತಿಯೇ ತಿಳಿಯದಾಗಿದೆ. ಅಶೋಕ್ ಅವರೇ ತಾವು ಕೂಡ ಸರ್ಕಾರದ ಭಾಗವಾಗಿ ತೆಗೆದುಕೊಂಡ ಎಲ್ಲಾ ಕ್ರಮಗಳನ್ನು ಇಂದು ಮರೆಮಾಚಿ ಜನರಿಗೆ ತಪ್ಪು ಮಾಹಿತಿ ನೀಡುತ್ತಿರುವುದು ಎಷ್ಟು ಸಮಂಜಸ ಎಂದು ಆತ್ಮಾವಲೋಕನ ಮಾಡಿಕೊಳ್ಳಿ ಎಂದು ಹೇಳಿದ್ದಾರೆ.

ಆ.28ಕ್ಕೆ ಮಂಡ್ಯ ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ

ಅಧಿಕಾರ ಹಿಡಿಯಲು ಚಲುವರಾಯಸ್ವಾಮಿ, ಕುಮಾರಸ್ವಾಮಿ ನಡುವೆ ರಾಜಕೀಯ ಗುದ್ದಾಟ





ಹೆಚ್.ಡಿ.ಕುಮಾರಸ್ವಾಮಿ ಚಲುವರಾಯಸ್ವಾಮಿ

ಮಂಡ್ಯ,ಆ.24– ಲೋಕಸಭಾ ಚುನಾವಣೆ ಬಳಿಕ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ರಾಜಕೀಯ ಗುದ್ದಾಟಕ್ಕೆ ಮಂಡ್ಯ ನಗರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಚುನಾವಣೆ ವೇದಿಕೆಯಾಗಿದ್ದು, ಆ.28ಕ್ಕೆ ಚುನಾವಣೆ ನಿಗದಿಯಾಗಿದೆ.

ಸ್ಥಳೀಯ ಸಂಸ್ಥೆಗಳಿಗೆ ಮೀಸಲಾತಿ ನಿಗದಿ ಮಾಡಿದ್ದು, ಅದರಂತೆ ಮಂಡ್ಯ ನಗರಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಆ.28ರಂದು ಮಧ್ಯಾಹ್ನ 12 ಗಂಟೆಗೆ ಚುನಾವಣೆ ನಡೆಯಲಿದೆ

ಕಾಂಗ್ರೆಸ್, ಜೆಡಿಎಸ್ ನಡುವೆ ಖುರ್ಚಿಗಾಗಿ ತೀವ್ರ ಪೈಪೋಟಿ: ಹಾಲಿ ಮಂಡ್ಯ ನಗರಸಭೆಯಲ್ಲಿ ಜೆಡಿಎಸ್ ಬಹುಮತ ಹೊಂದಿದ್ದರೂ ಹೇಗಾದರೂ ಮಾಡಿ ಅಧಿಕಾರ ಗಿಟ್ಟಿಸಿಕೊಳ್ಳಲು ಆಡಳಿತರೂಢ ಕಾಂಗ್ರೆಸ್ ಹವಣಿಸುತ್ತಿದ್ದು, ಜೆಡಿಎಸ್‌ನ ಮೂವರು ಸದಸ್ಯರನ್ನು ಹೈಜಾಕ್ ಮಾಡಿದೆ.

ಎರಡೂ ಪಕ್ಷಗಳಲ್ಲಿ ಪೈಪೋಟಿ ಎದುರಾಗಿತ್ತು. ಇದೀಗ ದಿನಾಂಕ ನಿಗದಿಯಾಗಿರುವುದರಿಂದ ಅಧಿಕಾರ ಹಿಡಿಯಲು ಕಸರತ್ತು ಚುರುಕುಗೊಂಡಿದೆ. ನಗರಸಭೆಯಲ್ಲಿ ಕಾಂಗ್ರೆಸ್ 10, ಬಿಜೆಪಿ 2 ಹಾಗೂ ಜೆಡಿಎಸ್ 18, ಪಕ್ಷೇತರ 5 ಸೇರಿದಂತೆ 35 ಮಂದಿ ಸದಸ್ಯರ ಬಲಾಬಲವಿದೆ. ಇದರಲ್ಲಿ ಸಂಸದ ಹಾಗೂ ಶಾಸಕರು ಮತ ಹಕ್ಕು ಹೊಂದಿರುವುದರಿಂದ 37 ಮತಗಳ ಸಂಖ್ಯೆ ಹೆಚ್ಚಿದೆ.

ಪ್ರಸ್ತುತ ಮಂಡ್ಯ ನಗರಸಭೆಯಲ್ಲಿ ಜೆಡಿಎಸ್ ಬಹುಮತ ಹೊಂದಿದೆ. ಆದರೆ ಈ ಎಲ್ಲಾ ಲೆಕ್ಕಾಚಾರ ಉಲ್ಟಾ ಆಗಿದ್ದು, ಆಡಳಿತರೂಢ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿಯಲು ಹವಣಿಸಿದ್ದು, ಜೆಡಿಎಸ್‌ನಿಂದ ಈ ಹಿಂದೆ ಅಧ್ಯಕ್ಷರಾಗಿದ್ದ ಹೆಚ್.ಎಸ್.ಮಂಜು ಇದೀಗ ಕಾಂಗ್ರೆಸ್ ಪಾಳಯದಲ್ಲಿ ಗುರುತಿಸಿಕೊಂಡು ಅಲ್ಲಿಂದ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದಾರೆ. ತಮ್ಮ ಜೊತೆಗೆ ಜೆಡಿಎಸ್‌ನ ಇಬ್ಬರು ಸದಸ್ಯರನ್ನು ಕರೆದುಕೊಂಡು ಹೋಗಿದ್ದಾರೆ. ಪ್ರಸ್ತುತ ಕಾಂಗ್ರೆಸ್‌ನಲ್ಲಿ 9 ಮಂದಿ ನಗರಸಭಾ



ಸದಸ್ಯರಿದ್ದು, ಜೆಡಿಎಸ್‌ನಿಂದ ಬಂದಿರುವ ಮೂವರು ಹಾಗೂ ಐದು ಮಂದಿ ಪಕ್ಷೇತರರು ಸೇರಿ 17 ಮಂದಿ ಇದ್ದರೆ, ಶಾಸಕ ಗಣಿಗ ರವಿಕುಮಾರ್ ಹಾಗೂ ವಿಧಾನಪರಿಷತ್ ಸದಸ್ಯ ದಿನೇಶ್‌ಗೂಳಿಗೌಡ ಮತ ಸೇರಿ ಕಾಂಗ್ರೆಸ್ ಒಟ್ಟು 19 ಮತಗಳನ್ನು ಹೊಂದಿದೆ.

ಇತ್ತ ಜೆಡಿಎಸ್ 18 ಮಂದಿ ಸದಸ್ಯರನ್ನು ಹೊಂದಿದ್ದರಾದರೂ 3 ಮಂದಿ ಕಾಂಗ್ರೆಸ್ ಜೊತೆಗೆ ಗುರುತಿಸಿಕೊಂಡಿರುವುದರಿಂದ ಜೆಡಿಎಸ್ ಬಲ 15ಕ್ಕೆ ಕುಸಿದಿದೆ. ಜೊತೆಗೆ ಮೈತ್ರಿ ಪಕ್ಷ ಬಿಜೆಪಿಯ ಇಬ್ಬರು ಸದಸ್ಯರು ಜೆಡಿಎಸ್‌ನೊಂದಿಗೆ ಗುರುತಿಸಿಕೊಂಡಿದ್ದು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಜೆಡಿಎಸ್ ಜೊತೆಗೆ ಇರುವಂತೆ ಖಡಕ್ ಸೂಚನೆ ಕೊಟ್ಟಿದ್ದಾರೆ. ಜೊತೆಗೆ ಕಾಂಗ್ರೆಸ್‌ನ ಓರ್ವ ಸದಸ್ಯ ಜೆಡಿಎಸ್ ಜೊತೆಗೆ ಗುರುತಿಸಿಕೊಂಡಿರುವುದರಿಂದ ದಳಪತಿಗಳ ಸಂಖ್ಯೆ 18ಕ್ಕೇರಿದೆ. ಇದರೊಂದಿಗೆ ಸಂಸದ ಹೆಚ್.ಡಿ.ಕುಮಾರಸ್ವಾಮಿ ಮತ ಸೇರಿ 19 ಆಗಲಿದ್ದು, ಕಾಂಗ್ರೆಸ್–ಜೆಡಿಎಸ್ ನಡುವೆ ಸಮಬಲದ ಪೈಪೋಟಿ ಇದೆ.

ಕಾಂಗ್ರೆಸ್‌ನೊಂದಿಗಿರುವ 17 ಸದಸ್ಯರು ಗೋವಾದ ರೆಸಾರ್ಟ್‌ನಲ್ಲಿ ಬೀಡು ಬಿಟ್ಟಿದ್ದರೆ, ಇತ್ತ ಜೆಡಿಎಸ್‌ನ 18 ಮಂದಿ ದೆಹಲಿಯಲ್ಲಿ ಬೀಡು ಬಿಟ್ಟಿದ್ದಾರೆ. ಕಾಂಗ್ರೆಸ್ ಜೊತೆಗಿರುವ ಮೂವರು ಜೆಡಿಎಸ್‌ನವರು ಅಥವಾ ಜೆಡಿಎಸ್ ಜೊತೆಗಿರುವ ಕಾಂಗ್ರೆಸ್‌ನ ಒಬ್ಬರು ಉಲ್ಟಾ ಹೊಡೆದರೆ ಪರಿಸ್ಥಿತಿ ಏನು ಬೇಕಾದರೂ ಆಗಲಿದೆ

ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳೆಡರಲ್ಲೂ ಪಕ್ಷಾಂತರ ಪರ್ವ ನಡೆಯುತ್ತಿರುವ ಹಿನ್ನೆಲೆಯಲ್ಲಿ ಎರಡು ಪಕ್ಷಗಳ ನಾಯಕರಿಗೆ ಬಂಡಾಯ ಬಿಸಿ ತಟ್ಟಿದೆ ಅಸಮಾಧಾನಗೊಂಡ ಸದಸ್ಯರ ಮನವೊಲಿಕೆ ಯತ್ನ ಮುಂದುವರೆದಿದೆ. ಸಂಧಾನ ಫಲಿಸದಿದ್ದರೆ ಎಲ್ಲ ಸದಸ್ಯರಿಗೂ ವಿಪ್ ಜಾರಿ ಮಾಡಲು ಎರಡೂ ಪಕ್ಷಗಳು ನಿರ್ಧರಿಸಿವೆ. ಇದರಿಂದ ಸದಸ್ಯರ ಹಿಡಿದಿಟ್ಟುಕೊಳ್ಳುವ ಸರ್ಕಸ್ ಮುಂದುವರೆದಿದೆ.

ಕಾಂಗ್ರೆಸ್ ರಣತಂತ್ರ, ಜೆಡಿಎಸ್‌ಗೆ ಮುಖಭಂಗ

ನಾಗಮಂಗಲ ಪುರಸಭೆ ಕಾಂಗ್ರೆಸ್ ತೆಕ್ಕೆಗೆ, ಸಂಖ್ಯಾಬಲ ಇದ್ದರೂ ಸೋಲು ಅನುಭವಿಸಿದ ಜೆಡಿಎಸ್



ನೂತನ ಅಧ್ಯಕ್ಷ, ಉಪಾಧ್ಯಕ್ಷರೊಂದಿಗೆ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ

ನಾಗಮಂಗಲ, ಆ.24–ಕಾಂಗ್ರೆಸ್ ಪಕ್ಷದ ರಣತಂತ್ರದಿಂದ ನಾಗಮಂಗಲ ಪುರಸಭೆ ಕಾಂಗ್ರೆಸ್ ತನ್ನ ತೆಕ್ಕೆಗೆ ತೆಗೆದುಕೊಂಡಿದ್ದು, ಸಂಖ್ಯಾಬಲವಿದ್ದರೂ ಜೆಡಿಎಸ್ ಸೋಲು ಅನುಭವಿಸಿ ಭಾರಿ ಮುಖಭಂಗಕ್ಕೊಳಗಾಗಿದೆ

ನಾಗಮಂಗಲ ಪುರಸಭೆಯಲ್ಲಿ 23 ಮಂದಿ ಸದಸ್ಯರಿದ್ದು, ಕಾಂಗ್ರೆಸ್ 10 ಸದಸ್ಯರು ಹಾಗೂ ಜೆಡಿಎಸ್ 13 ಮಂದಿ ಸದಸ್ಯ ಬಲದಿಂದ ಕೂಡಿದ್ದು, ಸುಲಭವಾಗಿ ಅಧಿಕಾರ ಹಿಡಿಯಲು ಬಹುಮತವಿದ್ದ ಜೆಡಿಎಸ್ ಸೋಲು ಅನುಭವಿಸುವಂತಾಗಿದೆ.

ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್‌ನಿಂದ 12ನೇ ವಾರ್ಡ್ ಸದಸ್ಯ ಅಲಿ ಅನ್ಸರ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ 19ನೇ ವಾರ್ಡ್ ಸದಸ್ಯೆ ವಸಂತ ಲಕ್ಷ್ಮಿ ಅಶೋಕ್ ನಾಮಪತ್ರ ಸಲ್ಲಿಸಿದರೆ, ಇದೇ ರೀತಿ ಜೆಡಿಎಸ್‌ನಿಂದ ಅಧ್ಯಕ್ಷ ಸ್ಥಾನಕ್ಕೆ 7ನೇ ವಾರ್ಡ್ ಸದಸ್ಯೆ ಚಂದ್ರಕಲಾ ಹಾಗೂ ಉಪಾಧ್ಯಕ್ಷ ಸ್ಥಾನದ 3ನೇ ವಾರ್ಡ್ ಸದಸ್ಯೆ ಸೌಮ್ಯ ತಿರುಮಲಯ್ಯ ನಾಮಪತ್ರ ಸಲ್ಲಿಸಿದರು.

ನಂತರ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಸಚಿವ ಚೆಲುವರಾಯಸ್ವಾಮಿ ಸೇರಿದಂತೆ 11 ಮಂದಿ ಅಲಿ ಅನ್ಸರ್ ಹಾಗೂ ವಸಂತ ಲಕ್ಷ್ಮಿ ಅಶೋಕ್ ಪರವಾಗಿ ಕೈ ಎತ್ತುವ ಮೂಲಕ ಕಾಂಗ್ರೆಸ್ ಪಕ್ಷಕ್ಕೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನದ ಗೆಲುವು ತಂದುಕೊಟ್ಟರು. ಜೆಡಿಎಸ್ ಪಕ್ಷದಿಂದ ಚಂದ್ರಕಲಾ ಹಾಗೂ ಸೌಮ್ಯ ತಿರುಮಲಯ್ಯ ಪರವಾಗಿ 10 ಮಂದಿ ಕೈ ಎತ್ತಿದ ಹಿನ್ನೆಲೆಯಲ್ಲಿ ಎರಡು ಸ್ಥಾನಗಳಲ್ಲಿ ಸೋಲನ್ನು ಅನುಭವಿಸಬೇಕಾಯಿತು. ಕಾಂಗ್ರೆಸ್ ಜೆಡಿಎಸ್‌ನ ಒಬ್ಬ ಸದಸ್ಯ ಚುನಾವಣೆಗೆ ಹಾಜರಾಗದೆ ಗೈರಾಗುವಂತೆ ಮಾಡಿತ್ತಲ್ಲದೆ, ಇದರೊಂದಿಗೆ ಸಭೆಯಲ್ಲಿ ಪಾಲ್ಗೊಂಡಿದ್ದ ಮತ್ತೊಬ್ಬರು ಕೈ ಎತ್ತದೆ ತಟಸ್ಥರಾಗಿ ಉಳಿಯುವಂತೆ ರಣತಂತ್ರ ರೂಪಿಸಿದ್ದರಿಂದ ಜೆಡಿಎಸ್ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನ ಕಳೆದುಕೊಳ್ಳಬೇಕಾಯಿತು.

ನಾಗಮಂಗಲ ತಹಸೀಲ್ದಾರ್ ನಹಿಮ್ ಉನ್ನಿಸಾ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು. ಪುರಸಭೆ ಅಧ್ಯಕ್ಷ, ಉಪಾಧ್ಯಕ್ಷರ ಹೆಸರು ಘೋಷಣೆಯಾಗುತ್ತಿದ್ದಂತೆ ಕಾರ್ಯಕರ್ತರು ಹಾಗೂ ಕಾಂಗ್ರೆಸ್ ಮುಖಂಡರು ಪುರಸಭಾ ಕಚೇರಿ ಮುಂಭಾಗ ಪಟಾಕಿ ಸಿಡಿಸಿ ಸಿಹಿ ಹಂಚಿ ಜೊತೆಗೆ ಸಿಎಂ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾಗೂ ಸಚಿವ ಚಲುವರಾಯಸ್ವಾಮಿ ಪರ ಘೋಷಣೆಗಳ ಮೊಳಗಿಸಿ ವಿಜಯೋತ್ಸವ ಆಚರಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಜೆ. ರಾಜೇಶ್, ಪುರಸಭೆ ಸದಸ್ಯರಾದ ರಮೇಶ್, ತಿಮ್ಮಪ್ಪ, ಮಾಜಿ ಅಧ್ಯಕ್ಷ ಎಚ್.ಟಿ.ಕೃಷ್ಣೇಗೌಡ, ಅಮೀರ್ ಉಲ್ಲಾ ಮುತ್ತುಜಾ, ಕೃಷ್ಣೇಗೌಡ, ಸಂಪತ್ ಕುಮಾರ್, ಶರತ್ ರಾಮಣ್ಣ, ಉಪ್ಪಾರಹಳ್ಳಿ ಅಶೋಕ್, ಎನ್. ಸ್ವಾಮಿ, ರವಿಕಾಂತ್‌ಗೌಡ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ನರಸಿಂಹಮೂರ್ತಿ, ರಾಜೇಗೌಡ, ಸಾಧಿಕ್ ಉಲ್ಲಾಖಾನ್, ಡಿಶ್ ಚಂದ್ರು, ತಮ್ಮಣ್ಣ ಗೌಡ, ಅತಿಕ್ ಪಾಷ ಹಾಗೂ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು ನೂತನ ಅಧ್ಯಕ್ಷರಿಗೆ ಹಾಗೂ ಉಪಾಧ್ಯಕ್ಷರಿಗೆ ಅಭಿನಂದಿಸಿದರು.

ನೂತನವಾಗಿ ಆಯ್ಕೆಯಾದ ಅಧ್ಯಕ್ಷ ಹಾಗೂ ಉಪಾಧ್ಯಕ್ಷೆ ಮಾತನಾಡುತ್ತಾ ಕೃಷಿ ಸಚಿವ ಚೆಲುವರಾಯಸ್ವಾಮಿ ನಮ್ಮನ್ನು ಗುರುತಿಸಿ ಸ್ಥಾನ ನೀಡಿದ್ದಾರೆ. ಎಲ್ಲಾ ಸದಸ್ಯರ ಸಭೆ ಕರೆದು ಪುರಸಭಾ ವ್ಯಾಪ್ತಿಯಲ್ಲಿ ಕುಂದು ಕೊರತೆಗಳನ್ನು ಆಲಿಸಿ ಅಭಿವೃದ್ಧಿ ಕೆಲಸಗಳನ್ನು ನಮ್ಮ ಅಧಿಕಾರವಧಿಯಲ್ಲಿ ಮಾಡಲಾಗುವುದು ಎಂದರು.

ಬಲ್ಲೇನಹಳ್ಳಿ ಗ್ರಾಪಂಗೆ ಸೌಮ್ಯ ಪುಟ್ಟೇಗೌಡ ಅಧ್ಯಕ್ಷೆ



ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆ ಹೋಬಳಿಯ ಬಲ್ಲೇನಹಳ್ಳಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಸೌಮ್ಯ ಪುಟ್ಟೇಗೌಡ ಅವಿರೋಧವಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ಗ್ರಾಪಂ ಸದಸ್ಯರಾದ ಹೆಗ್ಗನಹಳ್ಳಿ ಪ್ರಶಾಂತ್, ಬಸ್ತಿ ಹೊಸಕೋಟೆ ಹೇಮಾಶ್ರೀ, ಕಬ್ಬಲಗೆರೆಪುರ ಸವಿತಾ, ಕಾಶಿ ಮುರುಕನಹಳ್ಳಿ ಚಂದ್ರಶೇಖರ್, ಮಾಚಗೋನಹಳ್ಳಿ ಯೋಗೇಂದ್ರ, ಮತ್ತಿಕೆರೆ ಮನು, ಮತ್ತಿಕೆರೆ ಚೇತನಾ, ಅಭಿಲಾಷ ದೊಡ್ಡಗಾಡಿಗನಹಳ್ಳಿ, ಬಲ್ಲೇನಹಳ್ಳಿ ನಂದೀಶ್, ಗೀತಾ ಬಲ್ಲೇನಹಳ್ಳಿ, ಪಲ್ಲವಿ ಬಲ್ಲೇನಹಳ್ಳಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಪಾಂಡವಪುರ ಉಪವಿಭಾಗಾಧಿಕಾರಿ ನಂದೀಶ್ ಅಮಾನತು

ಮೈಸೂರು ಉಪವಿಭಾಗದ ಪ್ರಭಾರ ಉಪವಿಭಾಗಾಧಿಕಾರಿಯಾಗಿದ್ದ ವೇಳೆ ಕರ್ತವ್ಯಲೋಪವೆಸಗಿದ ಆರೋಪ

ಪಾಂಡವಪುರ, ಆ.24–ಅಧಿಕಾರ ದುರುಪಯೋಗ ಆರೋಪದ ಮೇರೆಗೆ ಮೈಸೂರು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆ ಮೇರೆಗೆ ಪಾಂಡವಪುರ ಉಪವಿಭಾಗದ ಉಪವಿಭಾಗಾಧಿಕಾರಿ ಎಲ್.ಎಂ.ನಂದೀಶ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಸಿಬ್ಬಂದಿ ಮತ್ತು ಆಡಳಿತಾ ಸುಧಾರಣಾ ಇಲಾಖೆಯ ಅಧೀನ ಕಾರ್ಯದರ್ಶಿ ಉಮಾದೇವಿ ಆದೇಶ ಹೊರಡಿಸಿದ್ದಾರೆ.

ಫೆ.28.2024ರಂದು ಮೈಸೂರು ಉಪವಿಭಾಗದ ಪ್ರಭಾರ ಉಪವಿಭಾಗಾಧಿಕಾರಿಯಾಗಿ ಎಲ್.ಎಂ.ನಂದೀಶ್ ಅವರು ಅಧಿಕಾರ ವಹಿಸಿಕೊಂಡ ಬಳಿಕ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ದಾಖಲಾಗಿದ್ದ ಪ್ರಕರಣಗಳ ಎದುರುದಾರರಿಗೆ ವಿಚಾರಣೆಗೆ ಅವಕಾಶ ಕಲ್ಪಿಸದೆ, ಅವರಿಂದ ದಾಖಲೆಗಳನ್ನು ಪಡೆದುಕೊಳ್ಳದೆ, ವಿಚಾರಣೆಗೆ ತೆಗೆದುಕೊಂಡ ದಿನದಂದೇ ಆದೇಶ ಹೊರಡಿಸಿರುವುದರ ಜತೆಗೆ ಪಕ್ಷಕಾರರು ಅವರ ನಿಲುವುಗಳನ್ನು ಮಂಡಿಸಲು ಅವಕಾಶ ನೀಡದೆ ನೈಸರ್ಗಿಕ ನ್ಯಾಯದ ತತ್ವಗಳಿಗೆ ವಿರುದ್ಧವಾಗಿ ಅಧಿಕಾರ ದುರುಪಯೋಗಪಡಿಸಿ ಕೊಂಡಿದ್ದಾರೆ ಎಂಬಿತ್ಯಾದಿ ಆರೋಪಗಳ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗಿದೆ ಎಂದು ಅಮಾನತು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಇತ್ಯರ್ಥಪಡಿಸಿ ಆಟೋ–ಮ್ಯುಟೇಶನ್ ಮೂಲಕ ಅಪ್‌ಲೋಡ್ ಮಾಡಲಾಗಿರುವ 46 ಪ್ರಕರಣಗಳಲ್ಲಿ ಕೆಲವು ಪ್ರಕರಣಗಳು ಸರ್ಕಾರದ ಹಿತಾಸಕ್ತಿಗೆ ಒಳಪಟ್ಟಿರುವುದನ್ನು ಗಮನಿಸಿದ್ದರೂ, ದಾಖಲೆಗಳನ್ನು ಮಂಡಿಸಲು ತಹಸೀಲ್ದಾರ್ ಅವರಿಗೆ ಅವಕಾಶ ನೀಡದೇ ಆದೇಶ ಹೊರಡಿಸಲಾಗಿದೆ. ಒಟ್ಟು 46 ಪ್ರಕರಣಗಳಲ್ಲಿ ತಹಸೀಲ್ದಾರ್ ಅವರು



ನಂದೀಶ್

ಪ್ರತೇಕ ವರದಿ ಸಲ್ಲಿಸಿದ್ದರೂ, ಅದನ್ನು ಪರಿಶೀಲಿಸಿಲ್ಲ. ಜತೆಗೆ ಇದರಲ್ಲಿ ಕೆಲವು ಪ್ರಕರಣಗಳು ಸರ್ಕಾರಿ ಜಮೀನುಗಳಿಗೆ ಸಂಬಂಧಿಸಿದ್ದಾಗಿದ್ದು, ಈ ಪ್ರಕರಣದ ವಿರುದ್ಧ ವ್ಯತಿರಿಕ್ತ ಆದೇಶ ಹೊರಡಿಸಲಾಗಿದೆ ಎಂಬ ಆರೋಪಗಳನ್ನು ಆದೇಶ ಪತ್ರದಲ್ಲಿ ವಿವರಿಸಲಾಗಿದೆ.

ಕೇಳಿ ಬಂದಿರುವ ಆರೋಪಗಳು: 40 ಪ್ರಕರಣಗಳಿಗೆ ನೋಟೀಸ್ ನೀಡದೆ ಆದೇಶಿಸಿರುವುದು, ಒಂದೇ ವಿಚಾರಣೆಯಲ್ಲಿ ಪಕ್ಷಕಾರರಿಗೆ ನೋಟೀಸ್ ಜಾರಿ ಮಾಡದೇ ಆದೇಶಕ್ಕೆ ಕಾಯ್ದಿರಿಸಿಕೊಂಡ 37 ಪ್ರಕರಣಗಳು, ಮೇಲ್ಮನವಿ(ಅಪೀಲು) ಸ್ವೀಕೃತವಾದ ಒಂದೇ ದಿನದಲ್ಲಿ 6 ಪ್ರಕರಣಗಳನ್ನು ಇತ್ಯರ್ಥಪಡಿಸಿರುವುದು, ಆರ್‌ಸಿಸಿಎಂಎಸ್ ತಂತ್ರಾಂಶದಲ್ಲಿ ಅಳವಡಿಸದೇ ವಿಚಾರಣೆ ನಡೆಸಿ 1 ಪ್ರಕರಣಕ್ಕೆ ಆದೇಶ ನೀಡಿರುವುದು, ಸರ್ಕಾರದ ಹಿತಾಸಕ್ತಿ ಇರುವ 10 ಪ್ರಕರಣಗಳಲ್ಲಿ ತಹಸೀಲ್ದಾರ್ ಅವರಿಂದ ದಾಖಲೆ, ಮಾಹಿತಿ ಪಡೆಯದೆ ಆದೇಶ ನೀಡಲಾಗಿದೆ ಎಂಬ ಆರೋಪಗಳನ್ನು ಆದೇಶದಲ್ಲಿ ಪಟ್ಟಿ ಮಾಡಲಾಗಿದೆ.

ಗಂಭೀರ ಸ್ವರೂಪದ ಕರ್ತವ್ಯಲೋಪ ಎಸಗಿರುವ ಆರೋಪಗಳು ಕಂಡುಬಂದಿರುವುದರಿಂದ ಸರ್ಕಾರಿ ಸೇವೆಯಲ್ಲಿ ಮುಂದುವರೆದರೆ ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದ್ದು, ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ಸೇವೆಯಿಂದ ಅಮಾನತುಗೊಳಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಭಾರತೀನಗರದಲ್ಲಿ ನಾಳೆ ಶ್ರೀಕೃಷ್ಣ ವೇಷ ಸ್ಪರ್ಧೆ

ಭಾರತೀನಗರ, ಆ.24– ಭಾರತೀನಗರದ ಭಾರತ ವಿಕಾಸ ಪರಿಷದ್ ಬೌದ್ಧಾಯನ ಶಾಖೆ ಹಾಗೂ ಶ್ರೀ ಜಯಮ್ಮ ಮಾರೇಗೌಡ ಕನ್ವೆನ್ಷನ್ ಹಾಲ್ ಸಂಯುಕ್ತಾಶ್ರಯದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಶ್ರೀಕೃಷ್ಣ ವೇಷ ಸ್ಪರ್ಧೆಯನ್ನು ಸೋಮವಾರ (ಆ.26) ಬೆಳಿಗ್ಗೆ 10 ಗಂಟೆಗೆ ಇಲ್ಲಿನ ಶ್ರೀಜಯಮ್ಮ ಮಾರೇಗೌಡ ಕನ್ವೆನ್ಷನ್ ಹಾಲ್‌ನಲ್ಲಿ ಏರ್ಪಡಿಸಲಾಗಿದೆ. ಮಾಹಿತಿಗಾಗಿ ಸಂಪರ್ಕಿಸಿ: 9740505345, 9900631469.

ಬೂಕನಕೆರೆ ಡೇರಿ ವೆಂಕಟೇಶ್ ನಿಧನ




ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆ ಗ್ರಾಮದ ಹಿರಿಯ ಮುಖಂಡ ಹಾಗೂ ಬೂಕನಕೆರೆ ಹಾಲು ಉತ್ಪಾದಕರ ಸಹಕಾರ ಸಂಘದ ನಿವೃತ್ತ ಕಾರ್ಯದರ್ಶಿ ವೆಂಕಟೇಶ್(62) ಶನಿವಾರ ನಿಧನ ಹೊಂದಿದ್ದಾರೆ.

ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಭಾನುವಾರ (ಆ.25) ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಮೇಘಾಲಯದಲ್ಲಿ ಶಿಕ್ಷಣ, ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿಗೆ ಕೈ ಜೋಡಿಸಿ

ಮೈಸೂರು ಉದ್ಯಮಿಗಳಲ್ಲಿ ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಮನವಿ



ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ ಮತ್ತು ಸಂಘ ಸಂಸ್ಥೆಗಳ ವತಿಯಿಂದ ಶನಿವಾರ ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಆ.24– ಮೇಘಾಲಯದಲ್ಲಿ ಶಿಕ್ಷಣ ಹಾಗೂ ಕೈಗಾರಿಕಾ ಕ್ಷೇತ್ರಗಳ ಅಭಿವೃದ್ಧಿಗೆ ಮೈಸೂರಿನ ಕೈಗಾರಿಕೋದ್ಯಮಿಗಳೂ ಸಹಕಾರ ನೀಡುವಂತೆ ಮೇಘಾಲಯದ ರಾಜ್ಯಪಾಲ ಸಿ.ಎಚ್.ವಿಜಯಶಂಕರ್ ಮನವಿ ಮಾಡಿದರು.

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ ಮತ್ತು ಸಂಘ ಸಂಸ್ಥೆಗಳ ವತಿಯಿಂದ ನಗರದ ಹೊರ ವಲಯದಲ್ಲಿರುವ ಜ್ಞಾನ ಸರೋವರ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಮೇಘಾಲಯದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ನೀಡುವುದರೊಂದಿಗೆ ಕೈಗಾರಿಕಾ ಕ್ಷೇತ್ರದಲ್ಲಿ ಬಂಡವಾಳ ಹೂಡುವಂತೆ ಮೈಸೂರಿನ ಕೈಗಾರಿಕೋದ್ಯಮಿಗಳನ್ನು ಸ್ವಾಗತಿಸಿದರು.

ಮೇಘಾಲಯದ ರಾಜ್ಯಪಾಲರಾಗಿ ನೇಮಕವಾದ ಮೇಲೆ ಅಲ್ಲಿನ ಶೈಕ್ಷಣಿಕ ಮತ್ತು ಕೈಗಾರಿಕಾ ವಾತಾವರಣವನ್ನು ಪರಿಶೀಲಿಸಲಾಗಿದ್ದು, ಇಲ್ಲಿ ಹೆಚ್ಚಿನ ಮಟ್ಟದ ಬಂಡವಾಳ ಹೂಡಿಕೆ ಮಾಡಲು ಅವಕಾಶವಿದೆ. ಮೈಸೂರಿನ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಅಲ್ಲಿಯೂ ಶಾಲಾ–ಕಾಲೇಜುಗಳನ್ನು ತೆರೆಯಬೇಕು. ಈ ಮೂಲಕ ಉದ್ಯೋಗ ಸೃಷ್ಟಿಯೊಂದಿಗೆ ಅಲ್ಲಿನ ಆರ್ಥಿಕ ಅಭಿವೃದ್ಧಿಗೆ ನೆರವಾಗಬೇಕು. ಅಲ್ಲಿನ ಇಂಫಾಲ ನಗರವನ್ನು ಮೈಸೂರು ಮಾದರಿಯಲ್ಲಿ ಅಭಿವೃದ್ಧಿ ಪಡಿಸುವ ಯೋಜನೆ ಇದ್ದು, ಮೈಸೂರಿನ ಇಂಜಿನಿಯರ್‌ಗಳು ಮತ್ತು ವಾಸ್ತುಶಿಲ್ಪಿಗಳು ಭೇಟಿ ನೀಡಿ, ಸಲಹೆ ನೀಡುವಂತೆ ಮನವಿ ಮಾಡಿದರು.

ಸಂಸದ ಕೋಟಾ ಶ್ರೀನಿವಾಸ ಪೂಜಾರಿ ಮಾತನಾಡಿ, ಚುನಾಯಿತ ಪ್ರತಿನಿಧಿಗಳು ತಮ್ಮ ವೈಯಕ್ತಿಕ ಅಭಿವೃದ್ಧಿಯನ್ನು ಜಪಿಸಬಾರದು. ಜನರ ಋಣ ತೀರಿಸುವ ನಿಟ್ಟಿನಲ್ಲಿ ಸಮಾಜ ಮತ್ತು ಸಮುದಾಯದ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಸಮಾರಂಭದಲ್ಲಿ ಮಾಜಿ ಶಾಸಕ ಸಾ.ರಾ.ಮಹೇಶ್, ಮೈಸೂರು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ್ಷ ಕೆ.ಬಿ.ಲಿಂಗರಾಜು, ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ ಸುಧಾಕರ್ ಶೆಟ್ಟಿ, ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಆನಂದ್, ಹೆಬ್ಬಾಳು ಕೈಗಾರಿಕಾ ವಸಾಹತು ಸಂಘದ ಅಧ್ಯಕ್ಷ ಕೆ.ಜಿ.ಪ್ರಕಾಶ್, ಕಾಸಿಯಾ ಜಂಟಿ ಕಾರ್ಯದರ್ಶಿ ಸತೀಶ್, ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟದ ಅಧ್ಯಕ್ಷ ಗ್ರೇಷಿಯನ್ ರೋಡ್ರಿಗಸ್ ಮತ್ತಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ, ರಾಜ್ಯಪಾಲರ ನಡೆ ಖಂಡಿಸಿ

ಕರ್ನಾಟಕ ಜನರಂಗ ನೇತೃತ್ವದಲ್ಲಿ ಮೈಸೂರಲ್ಲಿ ಅಹೋರಾತ್ರಿ ಪ್ರತಿಭಟನೆ

ನಮಗೆ ಕೇಂದ್ರಪಾಲ ಬೇಡ; ಸಂವಿಧಾನ ಪಾಲ ಬೇಕು; ಹಂಸಲೇಖ



ಮೈಸೂರಿನ ಚಿಕ್ಕ ಗಡಿಯಾರ ವೃತ್ತದಲ್ಲಿ ಕರ್ನಾಟಕ ಜನರಂಗ ಹಮ್ಮಿಕೊಂಡಿರುವ ಅಹೋರಾತ್ರಿ ಪ್ರತಿಭಟನಾ ಧರಣಿಯ ಉದ್ಘಾಟನೆಯಲ್ಲಿ ಸಂಗೀತ ನಿರ್ದೇಶಕ ಹಂಸಲೇಖ ಮಾತನಾಡಿದರು.

ಮೈಸೂರು,ಆ.24(ಪಿಎಂ)– ಕರ್ನಾಟಕ ರಾಜ್ಯಪಾಲರನ್ನು 'ಕೇಂದ್ರಪಾಲ' ಎಂದು ಹೆಸರಿಸಿದರೆ ಚೆನ್ನಾಗಿರುತ್ತದೆ. ನಮಗೆ ಈ ಕೇಂದ್ರಪಾಲ ಬೇಡ. ನಮಗೆ ಬೇಕಿರುವುದು ಸಂವಿಧಾನ ಪಾಲ. ಕೇಂದ್ರ ಪಾಲರನ್ನು ನಾವಿಲ್ಲಿ ಇಟ್ಟುಕೊಂಡು ಏನು ಮಾಡುವುದು ಎಂದು ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಟೀಕಾಪ್ರಹಾರ ನಡೆಸಿದರು.

ಮೈಸೂರಿನ ಚಿಕ್ಕ ಗಡಿಯಾರ ವೃತ್ತದಲ್ಲಿ ವಿವಿಧ ಜನಪರ, ಪ್ರಗತಿಪರ ಸಂಘಟನೆಗಳು ಕರ್ನಾಟಕ ಜನರಂಗ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ರಾಜ್ಯಪಾಲರ ನಡೆ ಖಂಡಿಸಿ 'ರಾಜ್ಯಪಾಲರ ನಡೆಗೆ ನುಡಿ ಖಂಡನೆ' ಶೀರ್ಷಿಕೆಯಡಿ ಶನಿವಾರ ಸಂಜೆಯಿಂದ ಭಾನುವಾರ ಸಂಜೆಯವರೆಗೆ ಹಮ್ಮಿಕೊಂಡಿರುವ ಅಹೋರಾತ್ರಿ ಪ್ರತಿಭಟನಾ ಧರಣಿಯ ಉದ್ಘಾಟನೆಯಲ್ಲಿ ಶನಿವಾರ ಪಾಲ್ಗೊಂಡು ಅವರು ಮಾತನಾಡಿದರು. ನನಗೆ ಸರ್ಕಾರ, ಪಕ್ಷ ಮತ್ತು ಅಧಿಕಾರ ಯಾವುದೂ ಬೇಕಿಲ್ಲ. ಆದರೆ ಸಹೃದಯ ನಾಯಕ ಸಿದ್ದರಾಮಯ್ಯರ ಬಗ್ಗೆ ಇಂದು ಸಣ್ಣಪುಟ್ಟವರು, ಕೆಲಸಕ್ಕೆ ಬಾರದವರು ಮಾತನಾಡುವಂತೆ ಆಗಿರುವುದು ಅತ್ಯಂತ ಬೇಸರದ ಸಂಗತಿ. ರಾಜ್ಯಪಾಲರು ಸಿದ್ದರಾಮಯ್ಯರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದು ಇದಕ್ಕೆ ಕಾರಣ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕನ್ನಡ ಅಂದರೆ ರಾಜ್‌ಕುಮಾರ್, ರಾಜ್‌ಕುಮಾರ್ ಎಂದರೆ ಕನ್ನಡ ಎನ್ನಿಸಿಕೊಳ್ಳುವಷ್ಟು ಸಾಧನೆ ಮಾಡಲು ರಾಜ್‌ಕುಮಾರ್ ಅವರಿಗೆ 4 ದಶಕಗಳಾದವು. ಕುವೆಂಪು ಅವರು ಐದು ದಶಕಗಳ ಕಾಲ ಭಾರತ ಸಾಂಸ್ಕೃತಿಕ ಹಾಗೂ ವೈದಿಕ ಚಹರೆಗಳಿಗೆ ಉತ್ತರ ಕೊಟ್ಟರು. ಜೊತೆಗೆ ಒಂದು ಮಹಾಕಾವ್ಯದ ಮೂಲಕವೂ ಉತ್ತರಿಸಿದರು. ಅಷ್ಟು ದೊಡ್ಡ ವ್ಯಕ್ತಿತ್ವ ಐದು ದಶಕಗಳ ಕಾಲ ಎದುರಿಸಿತು. ದೇವರಾಜ ಅರಸು ಅವರು 4 ದಶಕಗಳ ಕಾಲ ಹೋರಾಡಿ ರಾಜ್ಯಕ್ಕೆ ಕರ್ನಾಟಕ ಎಂಬ ಗೌರವ ತಂದುಕೊಟ್ಟರು. ಒಂದು ನಾಡಿಗೆ ಒಂದು ಅಸ್ಮಿತೆ ಹುಟ್ಟೋಕ್ಕೆ ಹಲವು ದಶಕಗಳೇ ಬೇಕು. ಈ ರೀತಿಯ ಗುರುತುಗಳು ಕೇವಲ ಒಂದು ದಿನದಲ್ಲಿ ಸಿಗುವುದಿಲ್ಲ. ಹಾಗೆಯೇ ಸಿದ್ದರಾಮಯ್ಯನವರು ಕೂಡ. ಅವರು ನಿನ್ನೆ–ಮೊನ್ನೆ ಹುಟ್ಟಿಕೊಂಡಿರುವ ಪುಡಾರಿ ರಾಜಕಾರಣಿಯಲ್ಲ. ಅವರು ಬಡವರ ಪರವಾಗಿ ಧ್ವನಿ ಎತ್ತಿ, ಕನ್ನಡವನ್ನು ಉಸಿರು ಎಂದುಕೊಂಡವರು. 40 ವರ್ಷಗಳ ಕಾಲ ಶ್ರಮಿಸಿ ಬೆಳೆದವರು. ಅಂತಹ ನಾಯಕನನ್ನು ಕೆಳಗೆ ಇಳಿಸಿದರೆ, ಪರ್ಯಾಯ ಯಾರು? ಇಷ್ಟು ತೂಕದ ವ್ಯಕ್ತಿ ರಾಜ್ಯದಲ್ಲಿ ಎಲ್ಲಿದ್ದಾರೆ ತೋರಿಸಿ ಎಂದರು. ಪ್ರಜಾಪ್ರಭುತ್ವದ ಗೌರವವನ್ನು ಜಗತ್ತಿಗೇ ತೋರಿಸಿದ ಬಸವಣ್ಣ ಕಟ್ಟಿದ ಕರ್ನಾಟಕ ಇದು. ಆದರೆ ಇಂದು ಜನಿವಾರ ಹಾಕಿಕೊಂಡು, ದಾಡಿ ಬಿಟ್ಟುಕೊಂಡು 'ವಚನ ದರ್ಶನ' ಎಂದು ವಿಕೃತಿ ಮಾಡುತ್ತಿದ್ದಾರೆ. ನಾವು ಇದನ್ನು ಸುಮ್ಮನೆ ಕುಳಿತು ನೋಡಬೇಕೇ? ಅಧಿಕಾರಕ್ಕಾಗಿ ಬಸವಣ್ಣನನ್ನು ಈಗಾಗಲೇ ಮುಕ್ಕುತ್ತಿದ್ದಾರೆ. ಇದನ್ನು ನೋಡಬೇಕೇ? ಎಂದು ಪ್ರಶ್ನಿಸಿದರು. ನಮ್ಮ ಕೇಂದ್ರಪಾಲರಿಗೆ ಝೆಡ್ ಸೆಕ್ಯೂರಿಟಿ ಕೊಟ್ಟಿದ್ದಾರೆ ಎಂಬ ಸುದ್ದಿ ಓದಿದೆ. ಆದರೆ 'ಎ ಟು ಝೆಡ್' ಸೆಕ್ಯೂರಿಟಿಯನ್ನು ಸಂವಿಧಾನಕ್ಕೆ ಕೊಡಬೇಕಿದೆ. ಬಹುಮತ ಪಡೆದವರು ಆಳ್ವಿಕೆ ಮಾಡಲು ಡಾ.ಬಿ.ಆರ್.ಅಂಬೇಡ್ಕರ್ ಅವಕಾಶ ಕಲ್ಪಿಸಿದ್ದಾರೆ. ಆಳ್ವಿಕೆ ಮಾಡುತ್ತಿರುವವರನ್ನು ಬೇಡ ಎನ್ನಲಾಗಲ್ಲ. ಅವರು ಶಾಸ್ತ್ರ, ವೇದ–ಉಪನಿಷತ್ತು ಮತ್ತು ಎರಡು ಮಹಾಕಾವ್ಯ ಕೊಟ್ಟಿದ್ದಾರೆ. ಜೊತೆಯಲ್ಲಿ ಹಾಳಾದ ವರ್ಣಾಶ್ರಮವನ್ನೂ ಕೊಟ್ಟಿದ್ದಾರೆ. ಇದನ್ನು ತಿದ್ದುವುದೇ ನಮ್ಮ ಕೆಲಸ ಎಂದರು.

ಸಂವಿಧಾನದ ನಮ್ಮನ್ನು ಕಾಪಾಡುತ್ತದೆ ಎಂದು ಸುಮ್ಮನಿದ್ದರೆ ಅದು ನಮ್ಮನ್ನು ಕಾಪಾಡಲು ಸಾಧ್ಯವಿಲ್ಲ. ಹಾಗಾಗಿ ಮೊದಲು ನಾವು ಅದನ್ನು ಕಾಪಾಡಿಕೊಳ್ಳಬೇಕು. ಸಂವಿಧಾನ ಇರುವುದು ನಿರ್ಬಂಧಿಸುವುದಕ್ಕಲ್ಲ. ನಿರ್ಮಿಸುವುದಕ್ಕೆ ಎಂಬ ಅದ್ಭುತ ಮಾತನ್ನು ಬಂಜಗೆರೆ ಜಯಪ್ರಕಾಶ್ ಹೇಳಿದ್ದಾರೆ. ಅಂತಹ ಸಂವಿಧಾನವನ್ನು ನಾವು ಕಾಪಾಡಿಕೊಳ್ಳಬೇಕು ಎಂದು ಹೇಳಿದರು.

ಏಕವಚನದಲ್ಲೇ ವಾಗ್ದಾಳಿ: ಹೋರಾಟಕ್ಕೆ ಚಾಲನೆ ನೀಡಿದ ಪ್ರಗತಿಪರ ಚಿಂತಕ ಬಂಜಗೆರೆ ಜಯಪ್ರಕಾಶ್ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ಬಂದಿರುವುದು ನಿಮ್ಮ ಕೋಮುವಾದ ಹಾಗೂ ರಾಜಶಾಹಿ ನಡೆಸಲು ಅಲ್ಲ. ರಾಜ್ಯಪಾಲರ ಈ ನಡೆಯು ಕುತಂತ್ರ ರಾಜಕೀಯ ಪ್ರೇರಿತವಾಗಿದೆ. ಬೇರೆ ರಾಜಕೀಯ ನಾಯಕರ ಬಗ್ಗೆ ಭ್ರಷ್ಟಾಚಾರದ ಆರೋಪಗಳು ಬಂದು 6ರಿಂದ 12 ತಿಂಗಳಾಯಿತು. ಅವು ಭ್ರಷ್ಟಾಚಾರಗಳಲ್ಲವೇ? ಸಿದ್ದರಾಮಯ್ಯರನ್ನು ಭ್ರಷ್ಟಾಚಾರ ಮುಕ್ತರು ಎಂದು ಪ್ರಮಾಣಪತ್ರ ಕೊಡಿ ಎಂದೇನು ಕೇಳುತ್ತಿಲ್ಲ. ಏನಾದರೂ ವಿಚಾರಣೆ ಇದ್ದರೆ ನ್ಯಾಯಬದ್ಧವಾಗಿ ಮಾಡಬೇಕು. ಲಿಖಿತ ಸಾಕ್ಷ್ಯಾಧಾರಗಳು ಸಿಕ್ಕಿದ್ದರೆ, ಭ್ರಷ್ಟಾಚಾರ ಚೆಕ್ ಮೂಲಕ ನಡೆದಿದ್ದರೆ, ಕಂಪನಿಗಳ ಮೇಲೆ ದಾಳಿ ಮಾಡಿ ಆನಂತರ ಪಕ್ಷಕ್ಕೆ ಲಕ್ಷಾಂತರ ದೇಣಿಗೆ ಪಡೆದಿದ್ದರೆ, ಆಗ ಪ್ರಾಸಿಕ್ಯೂಷನ್‌ಗೆ ನೀನು ಅನುಮತಿ ಕೊಡು ಎಂದು ರಾಜ್ಯಪಾಲರ ವಿರುದ್ಧ ಏಕವಚನದಲ್ಲೇ ವಾಗ್ದಾಳಿ ನಡೆಸಿದರು.

ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡುವುದು ನಿನ್ನ ಅಧಿಕಾರವಾಗಿದ್ದರೆ ಉಳಿದವನ್ನೆಲ್ಲಾ ಬಾಕಿ ಇಟ್ಟುಕೊಳ್ಳಲು ಹೇಗೆ ಸಾಧ್ಯ. ರಾಷ್ಟ್ರಪತಿಯಿಂದ ನೇಮಕವಾದವನು ನೀನು. ರಾಷ್ಟ್ರಪತಿ ಪ್ರತಿನಿಧಿ ನೀನು. ರಾಷ್ಟ್ರಪತಿ, ರಾಜ್ಯಪಾಲರು ಹಾಗೂ ಸಭಾಧ್ಯಕ್ಷರು ಯಾವುದೇ ಪಕ್ಷದ ಪ್ರತಿನಿಧಿಯಂತೆ ವರ್ತಿಸುವಂತಿಲ್ಲ. ಪಕ್ಷಾತೀತವಾಗಿ ಇರಬೇಕು. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕೋಮುವಾದ, ಜಾತಿವಾದದ ವಿರುದ್ಧವಿದೆ. ಸಾಮಾಜಿಕ ನ್ಯಾಯದ ಪರವಾಗಿದೆ. ಭ್ರಷ್ಟಾಚಾರ, ದ್ವೇಷ ರಾಜಕಾರಣ ಮಾಡದ ಒಬ್ಬ ಪ್ರಜಾಪ್ರಭುತ್ವವಾದಿ ನಾಯಕನನ್ನು ಸದೆಬಡಿಯುವ ದುರುದ್ದೇಶ ಇಲ್ಲಿ ಕೆಲಸ ಮಾಡುತ್ತಿದೆ ಎಂದು ಕಿಡಿಕಾರಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ವಿಜಯ್ ಕುಮಾರ್, ಪತ್ರಕರ್ತ ಗುರುರಾಜ್, ವಿವಿಧ ಸಂಘಟನೆಗಳ ಮುಖಂಡರಾದ ಕೆ.ಎಸ್.ಶಿವರಾಮು, ಪ್ರೊ.ಕಾಳಚೆನ್ನೇಗೌಡ, ಪ್ರೊ.ಸಬಿಹಾ ಭೂಮಿಗೌಡ, ಪ್ರೊ.ರತಿರಾವ್, ನಾ.ದಿವಾಕರ್, ಸವಿತಾ ಪ.ಮಲ್ಲೇಶ್, ಹೆಚ್.ಜನಾರ್ಧನ್ (ಜನ್ನಿ) ಮತ್ತಿತರರು ಪಾಲ್ಗೊಂಡಿದ್ದರು.

ಸಾರಿಗೆ ಬಸ್‌ನಲ್ಲಿ ವೃದ್ಧೆಯ ಚಿನ್ನಾಭರಣವಿದ್ದ ಪರ್ಸ್ ಕಳವು

ಮೈಸೂರು, ಆ.24(ಎಸ್‌ಪಿಎನ್)– ನಗರ ಸಾರಿಗೆ ಬಸ್‌ನಲ್ಲಿ ಚಿನ್ನಾಭರಣವಿದ್ದ ವೃದ್ಧೆಯ ಪರ್ಸ್ ಅನ್ನು ಖದೀಮರು ಎಗರಿಸಿರುವ ಘಟನೆ ಬಗ್ಗೆ ವರದಿಯಾಗಿದೆ.

ಮೈಸೂರು ತಾಲೂಕು ಜಯಪುರ ಹೋಬಳಿ ದೊಡ್ಡಕಾನ್ಯ ಗ್ರಾಮದ ನಿವಾಸಿ ರುದ್ರಮ್ಮ(71) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಆ.23ರಂದು ಸೀರೆ ಖರೀದಿ ಮಾಡಲು ಮಗಳ ಜೊತೆಯಲ್ಲಿ ಮೈಸೂರಿನ ಕರ್ನಾಟಕ ಸ್ಯಾರಿ ಸೆಂಟರ್ಸ್‌ಗೆ ಹೋಗಿ ಪುನಃ ಮನೆಗೆ ವಾಪಸ್ಸಾಗಲು ಮೃಗಾಲಯದ ಬಳಿ ಕೆಎ–42 ಎಫ್–1958 ನಂಬರಿನ ನಗರ ಸಾರಿಗೆ ಬಸ್‌ನಲ್ಲಿ ಪ್ರಯಾಣಿಸಿದರು.

ರಶ್ ಹೆಚ್ಚಾಗಿದ್ದ ಬಸ್‌ನ ಹಿಂಬದಿಯಲ್ಲಿ ವೃದ್ಧೆ ಬಸ್ ನಿಂತಿದ್ದರೆ, ಅವರ ಮಗಳು ಬಸ್ ಮುಂಬದಿಯಲ್ಲಿದ್ದರು. ಬಸ್ ನಗರ ಬಸ್ ನಿಲ್ದಾಣದ ಬಳಿ ಸಂಚರಿಸುತ್ತಿದ್ದಾಗ ವೃದ್ಧೆಯ ಪಕ್ಕದಲ್ಲಿ ನಿಂತಿದ್ದ ವ್ಯಕ್ತಿ 'ನಿಮ್ಮ ಕತ್ತಿನಲ್ಲಿರುವ ಚಿನ್ನದ ಸರ ಕಿತ್ತುಹೋಗಿದೆ' ಎಂದು ವೃದ್ಧೆಯ ಗಮನ ಸೆಳೆದಿದ್ದಾನೆ. ಆಗ ಅವರು ಕತ್ತಿನಲ್ಲಿದ್ದ ಚಿನ್ನದ ಸರವನ್ನು ಪರ್ಸ್ ಹಾಕಿ ವ್ಯಾನಿಟಿ ಬ್ಯಾಗ್‌ನಲ್ಲಿ ಇಟ್ಟುಕೊಂಡರು.

ಕೆಲ ಸಮಯದ ನಂತರ ವ್ಯಾನಿಟಿ ಬ್ಯಾಗ್ ನೋಡಿದಾಗ ಅದರಲ್ಲಿ 46 ಗ್ರಾಂ ತೂಕದ ಚಿನ್ನದಸರ, ತಲಾ 2 ಲಕ್ಷ್ಮೀಕಾಸು, ಮುತ್ತು, ಹವಳವಿದ್ದ ಪರ್ಸ್ ಕಾಣೆಯಾಗಿರುವುದು ಗಮನಕ್ಕೆ ಬಂದಿದೆ. ಈ ಸಂಬಂಧ ಚಿನ್ನಾಭರಣವಿದ್ದ ಪರ್ಸ್ ಹುಡುಕಿಕೊಡುವಂತೆ ವೃದ್ಧೆ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಒಂದನೇ ಪುಟದಿಂದ

ಬದಲಿಗೆ ಯುಪಿಎಸ್ ಯೋಜನೆ

* ಪ್ರತಿ ಆರು ತಿಂಗಳ ಸೇವೆಗೆ, ನಿವೃತ್ತಿಯ ನಂತರ ಮಾಸಿಕ ಸಂಬಳದ ಹತ್ತನೇ ಒಂದು ಭಾಗವನ್ನು (ಸಂಬಳ + ಡಿಎ) ಸೇರಿಸಲಾಗುತ್ತದೆ.

'ವಿಜ್ಞಾನ ಧಾರಾ' ಯೋಜನೆ: ದೇಶದಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಗೆ ಸಂಬಂಧಿಸಿದ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸಾಮರ್ಥ್ಯ ವರ್ಧನೆಯೊಂದಿಗೆ ಸಂಶೋಧನೆ, ನಾವೀನ್ಯತೆ ಮತ್ತು ತಂತ್ರಜ್ಞಾನ ಅಭಿವೃದ್ಧಿಯನ್ನು ಉತ್ತೇಜಿಸುವುದು 'ವಿಜ್ಞಾನ ಧಾರಾ' ಯೋಜನೆಯ ಪ್ರಾಥಮಿಕ ಉದ್ದೇಶವಾಗಿದೆ. ಈ ಯೋಜನೆಯ ಅನುಷ್ಠಾನವು ಶಿಕ್ಷಣ ಸಂಸ್ಥೆಗಳಲ್ಲಿ ಸಂಪೂರ್ಣ ಸುಸಜ್ಜಿತ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯಗಳನ್ನು ಉತ್ತೇಜಿಸುವ ಮೂಲಕ ದೇಶದ ವಿಜ್ಞಾನ ಮತ್ತು ತಂತ್ರಜ್ಞಾನ ಮೂಲ ಸೌಕರ್ಯವನ್ನು ಬಲಪಡಿಸುತ್ತದೆ.

ಪರೀಕ್ಷೆ ಮುಂದೂಡಲು ಆಗ್ರಹ

ಯಾವುದಾದರೂ ಒಂದು ಪರೀಕ್ಷೆಯಿಂದ ವಂಚಿತರಾಗಬೇಕಿದೆ. ಆದ್ದರಿಂದ, ಕೆಪಿಎಸ್‌ಸಿ ಪರೀಕ್ಷೆಯನ್ನು ಮುಂದೂಡುವಂತೆ ಕೋರಿದರು.

ಮಂಗಳವಾರ ಕೇಂದ್ರ ಸರ್ಕಾರದ ನೌಕರರಿಗೆ ಹಾಗೂ ಖಾಸಗಿ ಸಂಸ್ಥೆಗಳ ನೌಕರರಿಗೆ ರಜೆ ಸಿಗುವುದಿಲ್ಲ. ಅಲ್ಲದೇ ಪರೀಕ್ಷಾ ಕೇಂದ್ರಗಳೂ 400 ಕಿ.ಮೀ ದೂರದಲ್ಲಿವೆ. ಆ ಸ್ಥಳಕ್ಕೆ ತಲುಪುವುದೂ ಕಷ್ಟವಾಗಿದೆ ಎಂದು ಹೇಳಿದರು.

2017–18ನೇ ಬ್ಯಾಚ್‌ನ ಅಭ್ಯರ್ಥಿಗಳಿಗೂ ಅವಕಾಶ ನೀಡಲಾಗಿದೆ. ಆದರೆ, ಅಭ್ಯಾಸಕ್ಕೆ ಸಮಯ ಇಲ್ಲ. ಪ್ರಶ್ನೆ ಪತ್ರಿಕೆಗಳನ್ನು ಒಂದು ತಿಂಗಳ ಮೊದಲೇ ಮುದ್ರಿಸಿ ಇಟ್ಟುಕೊಂಡಿರುವ ಮಾಹಿತಿಯಿದೆ. ಪ್ರಶ್ನೆ ಪತ್ರಿಕೆ ತಲುಪಿಸುವ ಮಾರ್ಗದ ಮಾಹಿತಿ ಸಹ ಸೋರಿಕೆಯಾಗಿದ್ದು, ಈ ಪರೀಕ್ಷೆಯಲ್ಲೂ ಭ್ರಷ್ಟಾಚಾರ ಮತ್ತು ಅಕ್ರಮ ನಡೆಯುವ ಸಾಧ್ಯತೆ ಇದೆ ಎಂದು ಆಕಾಂಕ್ಷಿಗಳು ಹೇಳಿದರು.

ಸಂಸ್ಕೃತೋತ್ಸವ, ಅಸ್ಮಾಕಂ ಸಂಸ್ಕೃತಮ್ ಕಾರ್ಯಕ್ರಮಃ



'ಸಂಸ್ಕೃತೋತ್ಸವ ಮತ್ತು ಅಸ್ಮಾಕಂ ಸಂಸ್ಕೃತಮ್ ಕಾರ್ಯಕ್ರಮಃ''ವನ್ನು ವಿಶ್ವಪ್ರಜ್ಞ ವಿದ್ಯಾಸಂಸ್ಥೆಯ ಕಾರ್ಯಾಧ್ಯಕ್ಷ ಎಂ.ಎನ್.ಕೃಷ್ಣಸ್ವಾಮಿ ಉದ್ಘಾಟಿಸಿದರು.

ಮೈಸೂರು, ಆ. 24– ವಿಶ್ವ ಸಂಸ್ಕೃತ ದಿನಾಚರಣೆ ಅಂಗವಾಗಿ ಶ್ರೀ ಗಣೇಶ ಸಂಸ್ಕೃತ ಜ್ಯೌತಿಷ ಪಾಠಶಾಲಾ, ಮತ್ತು ವಿಶ್ವ ಪ್ರಜ್ಞ ವಿದ್ಯಾಸಂಸ್ಥೆಗಳ ಸಹಯೋಗದಲ್ಲಿ 'ಸಂಸ್ಕೃತೋತ್ಸವ ಮತ್ತು ಅಸ್ಮಾಕಂ ಸಂಸ್ಕೃತಮ್ ಕಾರ್ಯಕ್ರಮಃ'' ನಡೆಯಿತು.

ವಿಶ್ವಪ್ರಜ್ಞ ವಿದ್ಯಾಸಂಸ್ಥೆಯ ಕಾರ್ಯಾಧ್ಯಕ್ಷ ಎಂ.ಎನ್.ಕೃಷ್ಣಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿದರು. ಶಾಲೆ ಆಡಳಿತಾಧಿಕಾರಿ ವೆಂಕಟರಮಣ ಹೆಗಡೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಮುಖ್ಯ ಅಭ್ಯಾಗತರಾಗಿ ರಾಷ್ಟ್ರಪತಿ ಪುರಸ್ಕೃತ ಸಂಸ್ಕೃತ ವಿದ್ವಾಂಸ ಡಾ॥ ಹೆಚ್.ವಿ.ನಾಗರಾಜರಾವ್ ಆಗಮಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಶಾಲೆಯ ಕಾರ್ಯದರ್ಶಿ ಎಲ್.ಎನ್. ಹೆಗಡೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ವಿಶ್ವಪ್ರಜ್ಞ ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಜಿ.ಎನ್.ಸುಧಾ, ವಿಶ್ವಪ್ರಜ್ಞ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಎ.ಆರ್. ದೇವರಾಜು, ಆಡಳಿತ ಮಂಡಳಿ ಸದಸ್ಯರು, ಸಂಸ್ಕೃತ ಪಾಠಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ತುಳಸಿ, ಸಹಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಂಸ್ಕೃತ ಪಾಠಶಾಲೆಯ ಸಂಸ್ಥಾಪಕ ನಿಗಮಾಗಮ ಪ್ರವೀಣ ಚತುಶ್ಶಾಸ್ತ್ರ ವಿದ್ವಾನ್ ಕೋಟ ವಾಸುದೇವ ಸೋಮಯಾಜಿ ಅವರ ಸ್ಮರಣಾರ್ಥವಾಗಿ ನಡೆದ ಶ್ರೀಮದ್ಭಗವದ್ಗೀತಾ ಕಂಠಪಾಠ ಸ್ಪರ್ಧೆ ವಿಜೇತರಿಗೆ ಪ್ರಶಸ್ತಿ ಪತ್ರ ಮತ್ತು ಬಹುಮಾನಗಳನ್ನು ವಿತರಿಸಲಾಯಿತು.

ಸಿ.ಹೆಚ್.ವಿಜಯಶಂಕರ್‌ಗೆ ಅಭಿನಂದನೆ...



ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಅವರನ್ನು ಪೌರಕಾರ್ಮಿಕರ ಸಂಘದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಮಹಿಳಾ ಪೌರಕಾರ್ಮಿಕರಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ



ಮೈಸೂರಿನ ವಿದ್ಯಾರಣ್ಯಪುರಂನ ರಾಮಕೃಷ್ಣ ಹಾಸ್ಪಿಟಲ್, ನಾರಾಯಣ ಹೆಲ್ತ್ ಆಸ್ಪತ್ರೆಯ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು. ವಿಶೇಷವಾಗಿ ಮಹಿಳೆಯರಿಗೆ ಸ್ತನ ಕ್ಯಾನ್ಸರ್‌ನ ಬಗ್ಗೆ ಜಾಗೃತಿ ಮೂಡಿಸಿ, ಉಚಿತವಾಗಿ ಸ್ಕ್ರೀನಿಂಗ್ ಮಾಡಲಾಯಿತು. ಆರೋಗ್ಯ ತಪಾಸಣಾ ಶಿಬಿರವನ್ನು ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್ ಉದ್ಘಾಟಿಸಿದರು. ಶಿಬಿರವು ಡಾ.ಲಕ್ಷ್ಮೀದೇವಿ ನೇತೃತ್ವದಲ್ಲಿ ನಡೆಯಿತು. ಆಸ್ಪತ್ರೆಯ ಮುಖ್ಯಸ್ಥ ಸತೀಶ್, ಸಮಾಜ ಸೇವಕ ವಿಕ್ರಮ್ ಅಯ್ಯಂಗಾರ್, ಸಿಬ್ಬಂದಿ ವರ್ಗ ಇದ್ದರು.

'ಚಂದ್ರಯಾನ–3' ಯಶಸ್ವಿಯಾದ ದಿನವೇ 'ರಾಷ್ಟ್ರೀಯ ಬಾಹ್ಯಾಕಾಶ ದಿನ'



ಮೈಸೂರಿನ ಆರ್‌ಐಇ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ.ಎಸ್‌ಎನ್ ಪ್ರಸಾದ್ ಮಾತನಾಡುತ್ತಿರುವುದು.

ಮೈಸೂರು,ಆ.24–ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ನಡೆದ ವಾರದ ಸಮಾವೇಶದಲ್ಲಿ ಭೌತಶಾಸ್ತ್ರ ವಿಭಾಗದ ವತಿಯಿಂದ 'ರಾಷ್ಟ್ರೀಯ ಬಾಹ್ಯಕಾಶ ದಿನ'ದ ಬಗ್ಗೆ ಮಾಹಿತಿ ನೀಡಲಾಯಿತು.

ಸಮಾವೇಶಕ್ಕೆ ಪ್ರಸ್ತುತ ನ್ಯಾಕ್‌ನಲ್ಲಿ ಮೌಲ್ಯಮಾಪಕರಾಗಿ ಮತ್ತು 'ಕಾಸ್ಮೋಸ್' ಬಾಹ್ಯಾಕಾಶ ಯೋಜನೆಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿರುವ, ಮೈಸೂರಿನ ಆರ್‌ಐಇ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ.ಎಸ್.ಎನ್.ಪ್ರಸಾದ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ರಾಷ್ಟ್ರೀಯ ಬಾಹ್ಯಾಕಾಶ ದಿನದ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸುತ್ತಾ ಮಾತನಾಡಿದ ಅವರು, "2023 ಆಗಸ್ಟ್ 23ರಂದು ಇಸ್ರೋ ಸಂಸ್ಥೆಯು 'ಚಂದ್ರಯಾನ–3' ಅನ್ನು ಯಶಸ್ವಿಗೊಳಿಸಿದ ಸಂಭ್ರಮದ ದಿನದ ಪರಿಣಾಮವಾಗಿ ಈ ವರ್ಷದಿಂದ 'ರಾಷ್ಟ್ರೀಯ ಬಾಹ್ಯಾಕಾಶ ದಿನ'ವನ್ನಾಗಿ ಆಚರಿಸಲಾಗುತ್ತಿದೆ. ಶ್ರೀಹರಿಕೋಟದಲ್ಲಿ ಈ ಅಭೂತಪೂರ್ವ ಕ್ಷಣವನ್ನು ನೋಡಲು ನನಗೆ ಅವಕಾಶ ಸಿಕ್ಕಿತು ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡರು. ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಪೂರ್ಣಿಮಾ ಇನ್ನಿತರರಿದ್ದರು.

ಇನ್ಶೂರೆನ್ಸ್ ಹಣಕ್ಕಾಗಿ ಬದುಕಿದ್ದೂ ಹೆಣವಾದ ಮುನಿಸ್ವಾಮಿ!

●ತನ್ನನ್ನೇ ಹೋಲುವ ವ್ಯಕ್ತಿಯನ್ನು ಸುಪಾರಿ ಕೊಟ್ಟು ಪೂರ್ವಯೋಜಿತ ಅಪಘಾತದಲ್ಲಿ ಕೊಂದು ಪರಾರಿ ●ಅದೃಷ್ಟ ಕೈಕೊಟ್ಟು ಇನ್ಸ್‌ಪೆಕ್ಟರ್ ಕೈಗೆ ಸಿಕ್ಕಿಬಿದ್ದ!

ಹಾಸನ, ಆ.24– ಪಾಪ, ಆ ಮನುಷ್ಯ ಅಪಘಾತದಲ್ಲಿ ಸತ್ತೇ ಹೋದ ಅಂತಾ ಎಲ್ಲರೂ ಅಂದುಕೊಂಡಿದ್ದರು, ಅನುಕಂಪ ಪಟ್ಟಿದ್ದರು. ಈ ಸಂಬಂಧ ಗಂಡಸಿ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲಾಗಿತ್ತು. ಕೆಲವು ಕಾನೂನಾತ್ಮಕ ಪ್ರಕ್ರಿಯೆಗಳು ಮುಗಿಸಿದ ನಂತರ ಆ ಕೇಸ್ ಕ್ಲೋಸ್ ಮಾಡಿ ಪೊಲೀಸರೂ ಸುಮ್ಮನಾಗಿದ್ದರು.

ಆದರೆ, ಅದೊಂದು ದಿನ ಸತ್ತು ಹೋಗಿದ್ದ ವ್ಯಕ್ತಿಯನ್ನು, ಹೋಟೆಲೊಂದರ ಬಳಿ ಇದ್ದಕ್ಕಿದ್ದಂತೆ ನೋಡಿದ ಪೊಲೀಸ್ ಇನ್ಸ್‌ಪೆಕ್ಟರ್ ಅರೆಕ್ಷಣ ಗಾಬರಿಯಾಗಿ ಬಳಿಕ ಅನುಮಾನಗೊಂಡು ಆ ವ್ಯಕ್ತಿಯ ಜಾಡು ಹಿಡಿದು ಹೋದಾಗ ತೆರೆದುಕೊಂಡಿದ್ದು ಭಯಾನಕ ಮರ್ಡರ್ ಕೇಸ್.

ಕೇಸ್ ವಿವರ: ಕಳೆದ ಆ. 12ರಂದು ಅರಸೀಕೆರೆ ತಾಲೂಕಿನ, ಗೊಲ್ಲರಹೊಸಳ್ಳಿ ಗೇಟ್ ಬಳಿ ಕಾರಿಗೆ ಲಾರಿ ಡಿಕ್ಕಿಯಾಗಿ ವ್ಯಕ್ತಿಯೊಬ್ಬ ಮೃತಪಟ್ಟಿದ್ದ. ಕಾರಿನ ಆಧಾರದಲ್ಲಿ ಪೊಲೀಸರು ಮೃತನ ಗುರುತು ಪತ್ತೆ ಹಚ್ಚಿದ್ದರು. ಬೆಂಗಳೂರು ಹೊಸಕೋಟೆ ಮೂಲದ ಶಿಲ್ಪರಾಣಿ ಆ.13ರಂದು ಜಿಲ್ಲಾಸ್ಪತ್ರೆಗೆ ಬಂದು ಈ ಮೃತದೇಹ ನನ್ನ ಪತಿ ಮುನಿಸ್ವಾಮಿಗೌಡರದ್ದು ಎಂದು ಗುರುತು ಹಚ್ಚಿದ್ದರು. ಆ.13 ರಂದು ಹೊಸಕೋಟೆ ತಾಲೂಕಿನ ಚಿಕ್ಕಕೋಲಿಗ ಗ್ರಾಮದಲ್ಲಿ ಅಂತ್ಯಸಂಸ್ಕಾರ ಕೂಡ ನಡೆಸಿ, ಸಮಾಧಿಯನ್ನೂ ಕಟ್ಟಿಸಲಾಗಿತ್ತು.



ಆದರೆ, ಈಗ ಕೇಸ್ ಮರು ತನಿಖೆಯಾದಾಗ ಮೃತಪಟ್ಟಿರುವ ಮುನಿಸ್ವಾಮಿಗೌಡ ಅಸಲಿಗೆ ಸತ್ತೇ ಇರಲಿಲ್ಲ. ಅಂದರೆ, ಅಲ್ಲಿ ಸತ್ತವನೇ ಬೇರೆ. ಸತ್ತವನ ಮುಖ, ಬದುಕಿದ್ದ ಮುನಿಸ್ವಾಮಿಗೌಡನ ಮುಖ ಒಂದೇ ತರಹ ಇದ್ದುದ್ದರಿಂದ ಮೃತಪಟ್ಟವನು ಮುನಿಸ್ವಾಮಿಯೇ ಎಂದು ಪ್ರಪಂಚವನ್ನು ನಂಬಿಸಲಾಗಿತ್ತು. ಆ ಘಟನೆಯಾದ ನಂತರ ಮುನಿಸ್ವಾಮಿ ಕೂಡ ಭೂಗತನಾಗಿ ಹೋಗಿ ನಾಪತ್ತೆಯಾಗಿದ್ದ. ಆದರೆ, ಅದೊಂದು ದಿನ ಮುನಿಸ್ವಾಮಿಗೌಡ ಶಿಡ್ಲಘಟ್ಟ ಪೊಲೀಸ್ ಇನ್ಸ್‌ಪೆಕ್ಟರ್‌ಗೆ ಕಾಣಿಸಿಕೊಂಡಿದ್ದ. ಘಟನೆಯ ವಿಚಾರ ಗೊತ್ತಿದ್ದರಿಂದ ಆ ಇನ್ಸ್‌ಪೆಕ್ಟರ್ ಆತನನ್ನು ಹಿಡಿದು ವಿಚಾರಿಸಲಾಗಿ ಮಹಾ ಸಂಚೊಂದು ಹೊರಬಿದ್ದಿದೆ.

ಹೊಸಕೋಟೆಯಲ್ಲಿ ಎಂಆರ್‌ಎಫ್ ಟೈರ್ ಅಂಗಡಿ ನಡೆಸುತ್ತಿದ್ದ ಮುನಿಸ್ವಾಮಿಗೌಡ, ತನ್ನಂತೆಯೇ ಹೋಲುವ ವ್ಯಕ್ತಿಯನ್ನು ಹುಡುಕಿಕೊಂಡು ಬಂದು ಆತನನ್ನು ತನ್ನ ಕಾರಿನಲ್ಲೇ ಕರೆದುಕೊಂಡು ಹೋಗಿ ಕೊಂದಿದ್ದಾನೆ. ಈ ಕೊಲೆಗೆ ಮುನಿಸ್ವಾಮಿಯ ಪತ್ನಿ ಶಿಲ್ಪಾ ಸಾಥ್ ನೀಡಿದ್ದಾಳೆ. ಈ ಹತ್ಯೆಗೆ ಕಾರಣ 2 ಕೋಟಿ ರೂ. ಇನ್ಶೂರೆನ್ಸ್ ಹಣ. ಮುನಿಸ್ವಾಮಿ 2 ಕೋಟಿ ರೂ. ಮೊತ್ತದ ವಿಮೆ ಮಾಡಿಸಿದ್ದನಂತೆ. ತನ್ನ ವ್ಯವಹಾರ ಮತ್ತಿತರ ಕಾರಣಗಳಿಗಾಗಿ ಸಿಕ್ಕಾಪಟ್ಟೆ ಸಾಲ ಮಾಡಿಕೊಂಡಿದ್ದ ಆತ ಸಾಲ ತೀರಿಸಲು ಬೇರೆ ದಾರಿ ಕಾಣದೇ ತನ್ನಂತೆಯೇ ಹೋಲುವ ವ್ಯಕ್ತಿಯೊಬ್ಬನನ್ನು ಹುಡುಕಿ ಕರೆತಂದು ಕೊಲೆ ಮಾಡಿ, ಮುನಿಸ್ವಾಮಿಯೇ ಸತ್ತನೆಂದು ಬಿಂಬಿಸಿ ಇನ್ಶೂರೆನ್ಸ್ ಕಂಪನಿಯಿಂದ ಎರಡು ಕೋಟಿ ರೂ. ಪಡೆಯುವುದು ಆತನ ಪ್ಲ್ಯಾನ್ ಆಗಿತ್ತು. ಆತನಿಗೆ ಆತನ ಪತ್ನಿ ಶಿಲ್ಪಾ ಸಾಥ್ ನೀಡಿದ್ದಳು.

ಈ ದಂಪತಿಯ ಈ ಪ್ಲ್ಯಾನ್‌ಗೆ ತಕ್ಕದಾಗಿ ಮುನಿಸ್ವಾಮಿಯನ್ನೇ ಹೋಲುವ ವ್ಯಕ್ತಿಯೊಬ್ಬ ಆತನ ಕಣ್ಣಿಗೆ ಬಿದ್ದಿದ್ದ. ಆತನನ್ನು ಕೊಲ್ಲಲು ಪ್ಲ್ಯಾನ್ ಮಾಡಿದ್ದ ಈ ದಂಪತಿ, ಈ ಕೆಲಸಕ್ಕಾಗಿ ಲಾರಿ ಚಾಲಕ, ಲಾರಿಯ ಕ್ಲೀನರ್ ಒಬ್ಬನನ್ನೂ ಬುಕ್ ಮಾಡಿಕೊಂಡಿದ್ದರು. ಮುನಿಸ್ವಾಮಿಯನ್ನು ಹೋಲುವ ವ್ಯಕ್ತಿಯನ್ನು ಪರಿಚಯ ಮಾಡಿಕೊಂಡು ಆ.12ರಂದು ತನ್ನ ಕಾರಿನಲ್ಲೇ ಕರೆದುಕೊಂಡು ಹೋಗಿದ್ದ ದಂಪತಿ, ಅರಸೀಕೆರೆ ತಾಲೂಕಿನ ಗೊಲ್ಲರಹೊಸಳ್ಳಿ ಗೇಟ್ ಬಳಿ ಕಾರು ಪಂಕ್ಚರ್ ಆಗಿ ಸ್ವಲ್ಪ ತಳ್ಳಬೇಕೆಂದು ಹೇಳಿ ಆತನನ್ನು ಉಪಾಯವಾಗಿ ಕಾರಿನಿಂದ ಕೆಳಕ್ಕೆ ಇಳಿಸಿದ್ದರು.

ಅದೇ ಸಂದರ್ಭದಲ್ಲಿ ಇವರು ಬುಕ್ ಮಾಡಿದ್ದ ಲಾರಿಯು ವೇಗವಾಗಿ ಬಂದು ಆತನಿಗೆ ಡಿಕ್ಕಿ ಹೊಡೆದು ಆತ ಹತ್ಯೆಯಾಗುವಂತೆ ಮಾಡಿದ್ದರು. ಕಾರು ಮುನಿಸ್ವಾಮಿಯದ್ದಾಗಿದ್ದು, ಆ ಕಾರಿನ ಪಕ್ಕದಲ್ಲಿ ಮುನಿಸ್ವಾಮಿಯನ್ನೇ ಹೋಲುವ ವ್ಯಕ್ತಿ ಶವವಾಗಿ ಬಿದ್ದಿದ್ದರಿಂದ ಪೊಲೀಸರು ಕೂಡ ಇದು ಆಕ್ಸಿಡೆಂಟ್‌ನಲ್ಲಿ ಮುನಿಸ್ವಾಮಿಯೇ ಸತ್ತಿದ್ದಾನೆಂದು ನಂಬಿದ್ದರು.

ಆದರೆ, ಆಕ್ಸಿಡೆಂಟ್ ಆದ ನಂತರ ಭೂಗತನಾಗಿದ್ದ ಮುನಿಸ್ವಾಮಿಗೌಡ ತಲ್ಲಣಗೊಂಡಿದ್ದ. ಏನಾಗುತ್ತೋ ಏನೋ ಎಂಬ ಭೀತಿಯಲ್ಲಿ ಆತ ಹೊರಗೆ ಅಲ್ಲಿ ಇಲ್ಲಿ ಓಡಾಡುತ್ತಿದ್ದ. ಅದೊಂದು ದಿನ ಶಿಡ್ಲಘಟ್ಟ ಪೊಲೀಸ್ ಇನ್ಸ್‌ಪೆಕ್ಟರ್ ಕಣ್ಣಿಗೆ ಬಿದ್ದಿದ್ದ. ಆ ಇನ್ಸ್‌ಪೆಕ್ಟರ್ ಆತನನ್ನು ನಿಲ್ಲಿಸಿ ವಿಚಾರಿಸಿದಾಗ ಹೆದರಿ ಎಲ್ಲಾ ವಿಚಾರ ಬಾಯಿ ಬಿಟ್ಟಿದ್ದಾನೆ. ಆಗ ಇನ್ಸ್‌ಪೆಕ್ಟರ್ ಅವರು ಆಕ್ಸಿಡೆಂಟ್ ಕೇಸ್ ದಾಖಲಾಗಿದ್ದ ಗಂಡಸಿ ಪೊಲೀಸ್ ಠಾಣೆಗೆ ಈ ವಿಚಾರ ಮುಟ್ಟಿಸಿದ್ದಾರೆ. ಆಗ, ಗಂಡಸಿ ಪೊಲೀಸರು ಶಿಡ್ಲಘಟ್ಟ ಪೊಲೀಸ್ ಠಾಣೆಗೆ ಆಗಮಿಸಿ ಅಸಲಿ ಮುನಿಸ್ವಾಮಿಯನ್ನು ವಶಕ್ಕೆ ಪಡೆದಾಗ ಇಡೀ ಪ್ರಕರಣದ ದಿಕ್ಕು ಬದಲಾಗಿದೆ. ಆರೋಪಿಗಳನ್ನು ಬಂಧಿಸಲಾಗಿದೆ.

ಭಾರತದ ಮೊದಲ ಹೈಬ್ರಿಡ್ ಮರು ಬಳಸಬಹುದಾದ ರಾಕೆಟ್ 'RHUMI-1' ಯಶಸ್ವಿ ಉಡಾವಣೆ

ಚೆನ್ನೈ: ಭಾರತದ ಮೊಟ್ಟ ಮೊದಲ ಹೈಬ್ರಿಡ್ ರೀ ಯೂಸಬಲ್ ರಾಕೆಟ್ 'RHUMI-1' ಯಶಸ್ವಿಯಾಗಿ ಶನಿವಾರ ಉಡಾವಣೆ ಮಾಡಲಾಗಿದೆ.



ಚೆನ್ನೈನ ಈಸ್ಟ್ ಕೋಸ್ಟ್‌ಲೈನ್‌ನಿಂದ 'RHUMI–1' ರಾಕೆಟ್ ಅನ್ನು ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು.

ತಮಿಳುನಾಡಿನ ಚೆನ್ನೈನ ಈಸ್ಟ್ ಕೋಸ್ಟ್‌ಲೈನ್‌ನಿಂದ 'RHUMI–1' ರಾಕೆಟ್ ಅನ್ನು ಇಂದು ಯಶಸ್ವಿಯಾಗಿ ಉಡಾವಣೆ ಮಾಡಲಾಗಿದ್ದು, ಖಾಸಗಿ ಸಂಸ್ಥೆಯಾದ ಸ್ಪೇಸ್‌ಝೋನ್ ಈ ಮರುಬಳಕೆ ರಾಕೆಟ್ ಅನ್ನು ಅಭಿವೃದ್ಧಿಪಡಿಸಿದೆ.

ರುಮಿ–1 ರಾಕೆಟ್ ಶನಿವಾರ ಮೂರು ಕ್ಯೂಬ್ ಸೆಟಿಲೈಟ್ ಮತ್ತು 50 ಪಿಕೋ ಸೆಟಿಲೈಟ್‌ಗಳನ್ನು ಹೊತ್ತು ಭೂಮಿಯಿಂದ 35 ಕಿಮೀ ಎತ್ತರದ ಕಕ್ಷೆವರೆಗೂ ಹೋಗಿ ಅಲ್ಲಿ ಆ ಎಲ್ಲಾ ಪೇಲೋಡ್‌ಗಳನ್ನು ಅವುಗಳ ನಿಗದಿತ ಜಾಗಕ್ಕೆ ಬಿಟ್ಟು ವಾಪಸ್ ಬರಲಿದೆ. ದೇಶೀಯವಾಗಿ ನಿರ್ಮಿಸಲಾಗಿರುವ ಈ ರಾಕೆಟ್‌ಗೆ ಪ್ಯಾರಾಚೂಟ್ ಅಳವಡಿಸಲಾಗಿದೆ.

ಪೇಲೋಡ್‌ಗಳನ್ನು ಭೂಕಕ್ಷೆಗೆ ಬಿಟ್ಟು ಇದು ನಿಗದಿತ ಸಮುದ್ರ ಸ್ಥಳಕ್ಕೆ ಪ್ಯಾರಚೂಟ್ ಸಹಾಯದಿಂದ ನಿಧಾನವಾಗಿ ಬೀಳುತ್ತದೆ. ಬಳಿಕ ನೀರಿನಿಂದ ಈ ರಾಕೆಟ್‌ನ ಭಾಗಗಳನ್ನು ಸಂಗ್ರಹಿಸಿ ಮತ್ತೆ ಹೊಸ ರಾಕೆಟ್ ತಯಾರಿಕೆಗೆ ಅದನ್ನು ಬಳಸಿಕೊಳ್ಳಲಾಗುತ್ತದೆ. ಈ ರಾಕೆಟ್‌ನಲ್ಲಿ ಹೈಬ್ರಿಡ್ ಪ್ರೊಪಲ್ಷನ್ ಸಿಸ್ಟಂ ಇದ್ದು, ಲಿಕ್ವಿಡ್ ಆಕ್ಸಿಡೈಸರ್ ಮತ್ತು ಸಾಲಿಡ್ ಫ್ಯುಯೆಲ್ ಹೀಗೆ ಎರಡು ರೀತಿಯ ಇಂಧನದ ವ್ಯವಸ್ಥೆ ಮಾಡಲಾಗಿರುತ್ತದೆ. ಇದರ ಏರ್‌ಫ್ರೇಮ್ ಅನ್ನು ಕಾರ್ಬನ್ ಫೈಬರ್, ಗ್ಲಾಸ್ ಫೈಬರ್ ಇತ್ಯಾದಿ ಸುಧಾರಿತ ವಸ್ತುಗಳಿಂದ ನಿರ್ಮಿಸಲಾಗಿದೆ. ಇದರ ನಿರ್ಮಾಣ ವೆಚ್ಚವೂ ಸಾಂಪ್ರದಾಯಿಕ ರಾಕೆಟ್‌ಗಿಂತ ಬಹಳ ಕಡಿಮೆ ಎಂದು ಸ್ಪೇಸ್‌ಝೋನ್ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ

ರುಮಿ–1 ರಾಕೆಟ್ ಅಭಿವೃದ್ಧಿಗೆ ಬಳಸಲಾಗಿರುವ ತಂತ್ರಜ್ಞಾನವನ್ನು ಕ್ಷಿಪಣಿ ಕ್ಷೇತ್ರಕ್ಕೂ ಅಳವಡಿಸಬಹುದು. ಇದರಿಂದ ಉತ್ಕೃಷ್ಟವಾದ ಕ್ಷಿಪಣಿಗಳನ್ನು ದೇಶೀಯವಾಗಿ ನಿರ್ಮಿಸಬಹುದು ಎಂದು ರುಮಿ–1 ರಾಕೆಟ್ ಯೋಜನೆಯ ಉತ್ತೇಜಕರಾಗಿರುವ ಮಾರ್ಟಿನ್ ಗ್ರೂಪ್ ಸಂಸ್ಥೆಗಳ ನಿರ್ದೇಶಕ ಜೋಸ್ ಚಾರ್ಲ್ಸ್ ಮಾರ್ಟಿನ್ ಹೇಳಿದ್ದಾರೆ.

ರುಮಿ ಹೆಸರೇಕೆ?

ರುಮಿ–1 ರಾಕೆಟ್ ಅನ್ನು ತಯಾರಿಸಿದ್ದು ಸ್ಪೇಸ್ ಝೋನ್ ಇಂಡಿಯಾ ಸಂಸ್ಥೆ. ಇದರ ಸಿಇಒ ಆನಂದ್ ಮೇಗಲಿಂಗಂ. ಈ ರಾಕೆಟ್‌ಗೆ ಇಡಲಾಗಿರುವ ರುಮಿ ಹೆಸರು ಆನಂದ್ ಮೇಗಲಿಂಗಂ ಅವರ ಮಗನದ್ದು. ಅವರ ಮಗನ ಹೆಸರು ರುಮೇಂದ್ರನ್. ಈ ರಾಕೆಟ್ ತಯಾರಿಕೆಗೆ ಅಪ್ಪ ಸಾಕಷ್ಟು ಸಮಯ ಮತ್ತು ಶ್ರಮ ವ್ಯಯಿಸಿದ್ದಾರೆ. ಆ ಸಮಯವನ್ನು ಮಗ ತನಗಾಗಿ ತ್ಯಾಗ ಮಾಡಿದ ಕೃತಾರ್ಥತೆ ಅಪ್ಪ ಆನಂದ್ ಮೇಗಲಿಂಗಂ ಅವರದ್ದು. ಇದೇ ಕಾರಣಕ್ಕೆ ಈ ರಾಕೆಟ್‌ಗೆ ರುಮಿ ಎಂದು ಹೆಸರಿಡಲಾಗಿದೆ.

ತೆಲುಗು ನಟ ನಾಗಾರ್ಜುನಾಗೆ ಹೈಡ್ರಾ ಶಾಕ್

ಹೈದರಾಬಾದ್‌ನ ಐಷಾರಾಮಿ ಕನ್ವೆನ್ಷನ್ ಸೆಂಟರ್ ನೆಲಸಮ!



ಹೈದ್ರಾಬಾದ್: ಹೈದರಾಬಾದ್‌ನಲ್ಲಿನ ಅಕ್ರಮ ಕಟ್ಟಡಗಳ ಮೇಲೆ ಸಮರ ಆರಂಭಿಸಿರುವ ಹೈಡ್ರಾ (ಹೈದರಾಬಾದ್ ಡಿಸಾಸ್ಟರ್ ರೆಸ್ಪಾನ್ಸ್ ಅಂಡ್ ಅಸೆಟ್ಸ್ ಮಾನಿಟರಿಂಗ್ ಅಂಡ್ ಪ್ರೊಟೆಕ್ಷನ್) ಇದೀಗ ಟಾಲಿವುಡ್ ನಟ ಅಕ್ಕಿನೇನಿ ನಾಗಾರ್ಜುನಗೆ ಸೇರಿದ ದುಬಾರಿ ಐಷಾರಾಮಿ ಕನ್ವೆನ್ಷನ್ ಸೆಂಟರ್ ನೆಲಸಮಗೊಳಿಸಿದೆ.

ಹೈದರಾಬಾದ್‌ನ ಮಾದಾಪುರದಲ್ಲಿ ನಿರ್ಮಾಣವಾಗಿದ್ದ ಓ ಕನ್ವೆನ್ಷನ್ ಸೆಂಟರ್ ಅನ್ನು ಹೈಡ್ರಾ ಅಧಿಕಾರಿಗಳು ಜೆಸಿಬಿಗಳ ಮೂಲಕ ಧ್ವಂಸ ಮಾಡಿದ್ದಾರೆ. ಪಕ್ಕದ ತಮ್ಮಿಡಿ ಕೆರೆಯನ್ನು ಒತ್ತುವರಿ ಮಾಡಿಕೊಂಡು ಈ N-Convention Centre ನಿರ್ಮಾಣ ಮಾಡಲಾಗಿತ್ತು ಎಂಬ ಆರೋಪವಿತ್ತು. ಇದೀಗ ನೇರವಾಗಿ ಹೈಡ್ರಾ ಅಧಿಕಾರಿಗಳು ಸುಮಾರು ಮೂರೂವರೆ ಎಕರೆ ಜಾಗದಲ್ಲಿ ನಿರ್ಮಾಣವಾಗಿದ್ದ ಕನ್ವೆನ್ಷನ್ ಸೆಂಟರ್ ಅನ್ನು ತೆರವುಗೊಳಿಸಿದ್ದಾರೆ. ಹೈಡ್ರಾ ಅಧಿಕಾರಿಗಳು ಇತ್ತೀಚೆಗೆ ನಾಗಾರ್ಜುನ ಅವರ



ಎನ್ ಕನ್ವೆನ್ಷನ್ ಸೆಂಟರ್ ವಿರುದ್ಧ ದೂರು ಸ್ವೀಕರಿಸಿದ್ದರು. ಅದರಂತೆ ಭಾರಿ ಭದ್ರತೆ ನಡುವೆ ಇಂದು ನಾಗಾರ್ಜುನ ಅವರ ಈ ಕನ್ವೆನ್ಷನ್ ಸೆಂಟರ್ ಅನ್ನು ಅಧಿಕಾರಿಗಳು ಧ್ವಂಸಗೊಳಿಸಿದ್ದಾರೆ.

ಈ ಒತ್ತುವರಿ ಕಾರ್ಯಾಚರಣೆಯನ್ನು ಚಿತ್ರೀಕರಿಸಲು ಮಾಧ್ಯಮಗಳಿಗೆ ಅನುಮತಿ ನೀಡದ ಕಾರಣ ಮಾಧ್ಯಮದ ಮೇಲೂ ನಿರ್ಬಂಧ ಹೇರಲಾಗಿತ್ತು. ಎನ್ ಕನ್ವೆನ್ಷನ್ ಒಳಗೆ ಹೋಗುವ ಎಲ್ಲಾ ರಸ್ತೆಗಳನ್ನು ಅಧಿಕಾರಿಗಳು ಮುಚ್ಚಿ, ಮಾಧ್ಯಮಗಳಿಗೆ ಪ್ರವೇಶ ನಿರಾಕರಿಸಿ, ಎಲ್ಲಾ ರಸ್ತೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಿ ನೆಲಸಮ ಮಾಡಿದ್ದಾರೆ.

ಕೆರೆ ಒತ್ತುವರಿ ಮಾಡಿ ನಿರ್ಮಾಣ ಆರೋಪ: ಇನ್ನು ನಟ ಅಕ್ಕಿನೇನಿ ನಾಗಾರ್ಜುನ ಅವರು ತುಮ್ಮಕುಂಟಾದಲ್ಲಿ ಕೆರೆ ಒತ್ತುವರಿ ಮಾಡಿಕೊಂಡು 3 ಎಕರೆಯಲ್ಲಿ ಎನ್ ಕನ್ವೆನ್ಷನ್ ಸೆಂಟರ್ ನಿರ್ಮಿಸಿದ್ದಾರೆ ಎಂದು ಆರೋಪಿಸಲಾಗಿತ್ತು.



ವಿಜೇತರಿಗೆ ಬಹುಮಾನ ವಿತರಣೆ...

ಬೆಂಗಳೂರಲ್ಲಿ ನಡೆದ ರಾಜ್ಯ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟದ ಬಾಲ್ ಬ್ಯಾಡ್ಮಿಂಟನ್ ವಿಭಾಗದಲ್ಲಿ ಮೈಸೂರು ಜಿಲ್ಲೆಯ ಪುರುಷರ ತಂಡ ಸತತ 7ನೇ ಬಾರಿಗೆ ಪ್ರಥಮ ಬಹುಮಾನ ಪಡೆದುಕೊಂಡಿದೆ. (ಬಲದಿಂದ ಎಡಕ್ಕೆ) ರವಿಕುಮಾರ್ (ಶಿಕ್ಷಣ), ಸಂದೀಪ್ (ಕಾವೇರಿ ನೀರಾವರಿ ನಿಗಮ), ಬಿ.ಕುಮಾರ್ (ಆರೋಗ್ಯ), ಮಸ್ತಾಕ್ ಕ್ಯಾಪ್ಟನ್ (ಡಿಸಿ ಕಚೇರಿ), ಜಯರಾಮ (ಶಿಕ್ಷಣ), ಕುಳಿತಿರುವವರು ನವೀನ್ (ಶಿಕ್ಷಣ), ಎಂ.ಎನ್.ಧನು (ಶಿಕ್ಷಣ), ವಿಶ್ವನಾಥ್ (ಶಿಕ್ಷಣ), ರವಿ (ಶಿಕ್ಷಣ) ಇತರರಿದ್ದಾರೆ.

ಅನಧಿಕೃತ ಜಾಹೀರಾತು ಫಲಕ ತೆರವುಗೊಳಿಸಲು ಸೂಚನೆ

ಮೈಸೂರು,ಆ.24– ಕಡಕೊಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಖಾಸಗಿ ಕಟ್ಟಡ, ನಿವೇಶನ, ಸರ್ಕಾರಿ ಖಾಲಿ ನಿವೇಶನ, ಕಟ್ಟಡಗಳ ಮೇಲ್ಭಾಗದಲ್ಲಿ ಅನಧಿಕೃತವಾಗಿ, ಅನುಮತಿ ಪಡೆಯದೆ, ನವೀಕರಿಸಕೊಳ್ಳದೆ ಜಾಹೀರಾತು ಫಲಕಗಳನ್ನು ಅಳವಡಿಸಿಕೊಂಡಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಕಟ್ಟಡದ ಮಾಲೀಕರು ಹಾಗೂ ಕೆಲವು ಏಜೆನ್ಸಿ ಮಾಲೀಕರಿಗೆ ಮೌಖಿಕವಾಗಿ ತಿಳಿಸಿದರೂ ಅನುಮತಿ ಪಡೆಯದೇ ಇರುವುದು ಕಂಡುಬಂದಿದ್ದು, ಸಂಬಂಧಪಟ್ಟ ಏಜೆನ್ಸಿರವರು ಹಾಗೂ ಜಾಹೀರಾತು ಫಲಕದ ಮಾಲೀಕರು ಪ್ರಕಟಣೆಗೊಂಡ ಒಂದು ವಾರದೊಳಗೆ ಅನುಮತಿ, ನವೀಕರಿಸಿಕೊಳ್ಳದೆ ಇರುವ ಜಾಹೀರಾತು ಫಲಕಗಳಿಗೆ ಪಟ್ಟಣ ಪಂಚಾಯಿತಿಯಿಂದ ಅನುಮತಿ, ನವೀಕರಿಸಿಕೊಳ್ಳಲು ತಿಳಿಸಿದೆ. ತಪ್ಪಿದಲ್ಲಿ ಕರ್ನಾಟಕ ಪೌರಸಭೆಗಳ ಅಧಿನಿಯಮ–1964ರ ಉಪಬಂಧ–136ರನ್ವಯ ಜಾಹೀರಾತು ಫಲಕಗಳನ್ನು ತೆರವುಗೊಳಿಸಲಾಗುವುದು ಎಂದು ಕಡಕೊಳ ಪಪಂ ಮುಖ್ಯಾಧಿಕಾರಿ ತಿಳಿಸಿದ್ದಾರೆ.

ಸುತ್ತೂರು ಜೆಎಸ್‌ಎಸ್ ಉಚಿತ ವಸತಿ ಶಾಲೆಯಲ್ಲಿ ಗುರುವಂದನಾ ಕಾರ್ಯಕ್ರಮ



ಸುತ್ತೂರು ಮಠದ ಜೆಎಸ್‌ಎಸ್ ಉಚಿತ ವಸತಿ ಶಾಲೆಯಲ್ಲಿ 2013–14ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪೂರೈಸಿದ ಹಿರಿಯ ವಿದ್ಯಾರ್ಥಿಗಳು ಶನಿವಾರ ನೂರಕ್ಕೂ ಹೆಚ್ಚು ಶಿಕ್ಷಕರಿಗೆ ಗುರುವಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಚಿತ್ರದಲ್ಲಿ ಗೌರವ ಸ್ವೀಕರಿಸಿದ ಶಿಕ್ಷಕರು ಹಾಗೂ ಹಿರಿಯ ವಿದ್ಯಾರ್ಥಿಗಳನ್ನು ಕಾಣಬಹುದು.

ಇಂದು ವಾರ್ಷಿಕ ಮಹಾಸಭೆ

ಮೈಸೂರು, ಆ.24 (ಎಸ್‌ಪಿಎನ್)– ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಆ.25ರಂದು ಬೆಳಗ್ಗೆ 10 ಗಂಟೆಗೆ ಜಯಲಕ್ಷ್ಮೀಪುರಂನಲ್ಲಿರುವ ಕೊಡಗು ಸಹಕಾರ ಸಂಘದಲ್ಲಿ ನಡೆಯಲಿದೆ. ಪಿ.ಕೆ.ಸೋಮಣ್ಣ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಯು.ನಂಜಪ್ಪ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶ - ವಿದೇಶ

ಭಾರತ ಗಡಿಯಲ್ಲಿ ಬಾಂಗ್ಲಾ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಶಕ್ಕೆ

ಢಾಕಾ: ಬಾಂಗ್ಲಾದೇಶದ ನಿವೃತ್ತ ನ್ಯಾಯಮೂರ್ತಿಯೊಬ್ಬರು ಪಲಾಯನಕ್ಕೆ ಯತ್ನಿಸುತ್ತಿದ್ದ ವೇಳೆ ಈಶಾನ್ಯ ಗಡಿಭಾಗದ ಸಿಲೆಟ್ ಎಂಬಲ್ಲಿ ವಶಪಡಿಸಿಕೊಳ್ಳಲಾಗಿದೆ ಎಂದು 'ಬಾರ್ಡರ್ ಗಾರ್ಡ್ ಬಾಂಗ್ಲಾದೇಶ್' (ಬಿಜಿಬಿ) ಹೇಳಿದೆ. ಸಿಲೆಟ್‌ನ ಕನಾಯ್‌ಘಾಟ್ ಗಡಿಯಲ್ಲಿ ಭಾರತಕ್ಕೆ ಪಲಾಯನ ಮಾಡಲೆತ್ನಿಸುತ್ತಿದ್ದ ಸುಪ್ರೀಂ ಕೋರ್ಟ್‌ನ ಮೇಲ್ಮನವಿ ವಿಭಾಗದ ನಿವೃತ್ತ ನ್ಯಾಯಮೂರ್ತಿ ಸಂಶುದ್ದೀನ್ ಚೌದರಿ ಮಾಣಿಕ್‌ರನ್ನು ವಶಕ್ಕೆ ಪಡೆಯಲಾಗಿದೆ. ಮೀಸಲಾತಿ ಸಂಬಂಧ ಬಾಂಗ್ಲಾದೇಶದಲ್ಲಿ ನಡೆದ ಪ್ರತಿಭಟನೆ ತೀವ್ರ ಸ್ವರೂಪ ಪಡೆದುಕೊಂಡಿತ್ತು. ಪರಿಣಾಮ ಆಗಸ್ಟ್ 5ರಂದು ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿ ಶೇಖ್ ಹಸೀನಾ ಭಾರತಕ್ಕೆ ಪಲಾಯನ ಮಾಡಿದ್ದರು.



ಬಳಿಕ, ಹಿರಿಯ ಮಂತ್ರಿಗಳು ಸೇರಿದಂತೆ ಪದಚ್ಯುತ ಆಡಳಿತದ ಹಲವಾರು ನಾಯಕರನ್ನು ಬಂಧಿಸಲಾಗಿದೆ. ಅವರಲ್ಲಿ ಬಹುತೇಕರ ಮೇಲೆ ಕೊಲೆ ಆರೋಪ ಇದೆ. ಹಸೀನಾ ಅವರ ಅವಾಮಿ ಲೀಗ್ ಪಕ್ಷದ ನಾಯಕರು ದಂಡು ಪ್ರದೇಶದಲ್ಲಿ ಆಶ್ರಯ ಪಡೆದುಕೊಂಡಿದ್ದಾರೆ ಎಂದು ಸೇನೆ ಈ ಹಿಂದೆ ಹೇಳಿತ್ತು.

ಗಗನಯಾತ್ರಿ ಸುನಿತಾ ವಿಲಿಯಮ್ಸ್ ಶೀಘ್ರವೇ ಭೂಮಿಗೆ ವಾಪಸ್

ನವದೆಹಲಿ: ಗಗನಯಾತ್ರಿ ಸುನಿತಾ ವಿಲಿಯಮ್ಸ್ ಹಾಗೂ ಬುಚ್ವಿಲ್ಮೋರ್ ಬಾಹ್ಯಾಕಾಶದಲ್ಲಿ ಜೂ.6 ರಿಂದಲೂ ಸಿಲುಕಿದ್ದು, ಶೀಘ್ರವೇ ಭೂಮಿಗೆ ವಾಪಸ್ಸಾಗುವ ನಿರೀಕ್ಷೆ ಇದೆ.



ಈ ಇಬ್ಬರೂ ಗಗನಯಾತ್ರಿಗಳು ಯಾವಾಗ ಭಾರತಕ್ಕೆ ಆಗಮಿಸುತ್ತಾರೆ ಎಂಬ ಬಗ್ಗೆ ನಾಸಾ ಅಪ್ಡೇಟ್ ನೀಡಿದ್ದು, ಇನ್ನೂ ಕೆಲವು ದಿನಗಳ ಕಾಲ ಅನಿಶ್ಚಿತತೆಯಲ್ಲಿಯೇ ಈ ಗಗನ ಯಾತ್ರಿಗಳು ಕಾಲ ಕಳೆಯಬೇಕಾಗುತ್ತದೆ ಎಂದು ಹೇಳಿದೆ.

ಬೋಯಿಂಗ್‌ನ ಸ್ಟಾರ್‌ಲೈನರ್ ಬಾಹ್ಯಾಕಾಶ ನೌಕೆ ಅಥವಾ ಸ್ಪೇಸ್‌ಎಕ್ಸ್‌ನ ಡ್ರ್ಯಾಗನ್ ಕ್ಯಾಪ್ಸುಲ್‌ನಲ್ಲಿ ಸುನಿತಾ ವಿಲಿಯಮ್ಸ್ ಅವರನ್ನು ಭೂಮಿಗೆ ಕರೆತರಲು ನಾಸಾ ಅಂತಿಮ ನಿರ್ಧಾರ ತೆಗೆದುಕೊಳ್ಳುವ ನಿರೀಕ್ಷೆಯಿದೆ. ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ (ISS) ಎಂಟು ದಿನಗಳ ವಾಸ್ತವ್ಯದಿಂದ ಪ್ರಾರಂಭವಾದದ್ದು ವಿಲಿಯಮ್ಸ್ ಮತ್ತು ವಿಲ್ಮೋರ್‌ಗಾಗಿ 2 ತಿಂಗಳಿಗಿಂತ ಹೆಚ್ಚು ಕಾಲ ವಿಸ್ತರಿಸಿದೆ. ಹೆಚ್ಚು ವಿಳಂಬವಾದ ಸ್ಟಾರ್‌ಲೈನರ್ ಅನ್ನು ಸವಾರಿ ಮಾಡಿದ ಜೋಡಿ ಎಂಬ ಹೆಗ್ಗಳಿಕೆಗೆ ಇವರು ಪಾತ್ರರಾಗಿದ್ದಾರೆ.

ಅಸ್ಸಾಂ ಸಾಮೂಹಿಕ ಅತ್ಯಾಚಾರ: ಆರೋಪಿ ಕೆರೆಗೆ ಬಿದ್ದು ಸಾವು


ಗುವಾಹಟಿ: ಅಪ್ರಾಪ್ತ ಬಾಲಕಿ ಮೇಲಿನ ಅತ್ಯಾಚಾರ ಪ್ರಕರಣದ ಪ್ರಮುಖ ಆರೋಪಿಯೊಬ್ಬ ಶನಿವಾರ ಬೆಳಗ್ಗೆ ಪೊಲೀಸ್ ಕಸ್ಟಡಿಯಿಂದ ತಪ್ಪಿಸಿಕೊಳ್ಳಲು ಯತ್ನಿಸಿ ಕೆರೆಗೆ ಜಿಗಿದು ಸಾವನ್ನಪ್ಪಿದ ಘಟನೆ ಅಸ್ಸಾಂನಲ್ಲಿ ನಡೆದಿದೆ.



ತಫುಜಲ್ ಇಸ್ಲಾಂ ಎಂದು ಗುರುತಿಸಲಾಗಿರುವ ಆರೋಪಿಯನ್ನು ಅಸ್ಸಾಂನ ನಾಗಾಂವ್ ಜಿಲ್ಲೆಯ ಧಿಂಗ್ ಎಂಬಲ್ಲಿ ಅಪರಾಧ ನಡೆದ ಸ್ಥಳಕ್ಕೆ ಘಟನೆಯ ಮರುಸೃಷ್ಟಿಗಾಗಿ ಮುಂಜಾನೆ 4 ಗಂಟೆ ಸುಮಾರಿಗೆ ಕರೆದೊಯ್ಯಲಾಗಿತ್ತು. ಈ ವೇಳೆ ಆತ ಪೊಲೀಸರ ವಶದಿಂದ ತಪ್ಪಿಸಿಕೊಂಡು ಕೊಳಕ್ಕೆ ಹಾರಿದ್ದ. ಕೂಡಲೇ ಆತನ ಪತ್ತೆಗಾಗಿ ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿತ್ತು. ಸುಮಾರು 2 ಗಂಟೆಗಳ ಶೋಧದ ನಂತರ ರಾಜ್ಯ ವಿಪತ್ತು ನಿರ್ವಹಣಾ ಪಡೆ ಸಹಾಯದಿಂದ ಆತನ ದೇಹವನ್ನು ಹೊರತೆಗೆಯಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ. ವಿಚಾರಣೆ ನಂತರ, ಅವನನ್ನು ಅಪರಾಧದ ಸನ್ನಿವೇಶದ ಮರುಸೃಷ್ಟಿಗಾಗಿ ಕರೆದೊಯ್ದಾಗ ಆತ ಇದ್ದಕ್ಕಿದ್ದಂತೆ ಕಾನ್ಸ್‌ಟೇಬಲ್‌ನ ಹಿಡಿತದಿಂದ ಕೈಕೋಳವನ್ನು ಎಳೆದು ಪರಾರಿಯಾಗಲು ಪ್ರಯತ್ನಿಸಿದ. ತಪ್ಪಿಸಿಕೊಳ್ಳುವ ಭರದಲ್ಲಿ ಆತ ಸಮೀಪದ ಕೊಳದಲ್ಲಿ ಬಿದ್ದಿದ್ದ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಫ್ಘಾನಿಸ್ತಾನದಲ್ಲಿ ಗಂಡಸರು ಗಡ್ಡ ಬಿಡದಿದ್ದರೆ ಆಸ್ತಿ ಮುಟ್ಟುಗೋಲು

ಅಫ್ಘಾನಿಸ್ತಾನ: ಅಫ್ಘಾನಿಸ್ತಾನದಲ್ಲಿ ಹೊಸ ಕಾನೂನಿನ ಪ್ರಕಾರ ಪುರುಷರು ಗಡ್ಡ ಬೆಳೆಸುವುದನ್ನು ಕಡ್ಡಾಯಗೊಳಿಸಲಾಗಿದೆ.



ತಾಲಿಬಾನ್‌ನ ಸರ್ವೋಚ್ಚ ನಾಯಕನ 2022ರ ಆದೇಶದ ಆಧಾರದ ಮೇಲೆ ಈ ನಿಯಮಗಳನ್ನು ಈಗ ಕಾನೂನಾಗಿ ಪ್ರಕಟಿಸಲಾಗಿದೆ. ಹೊಸ ನಿಯಮಗಳು ಡ್ರೆಸ್ ಕೋಡ್ ಮಾತ್ರವಲ್ಲ ಇನ್ನೂ ಹಲವು ನಿರ್ಬಂಧಗಳನ್ನು ಒಳಗೊಂಡಿದೆ. ಕಾರುಗಳಲ್ಲಿ ಮ್ಯೂಸಿಕ್ ಹಾಕುವಂತಿಲ್ಲ. ಜೊತೆಯಲ್ಲಿ ಪುರುಷ ಅಥವಾ ಪೋಷಕರಿಲ್ಲದೆ ಮಹಿಳೆಯರು ಪ್ರಯಾಣಿಸುವಂತಿಲ್ಲ. ಮಾಧ್ಯಮಗಳು ಷರಿಯಾ ಕಾನೂನಿಗೆ ಬದ್ಧವಾಗಿರಬೇಕು. ಈ ಕಾನೂನುಗಳ ಉಲ್ಲಂಘನೆಯು ಎಚ್ಚರಿಕೆಗಳಿಂದ ಹಿಡಿದು ಬಂಧನಗಳು ಮತ್ತು ಆಸ್ತಿ ಮುಟ್ಟುಗೋಲುಗಳವರೆಗೆ ದಂಡಗಳಿಗೆ ಕಾರಣವಾಗಬಹುದು. ತಾಲಿಬಾನ್‌ನ ನೈತಿಕತೆ ಸಚಿವಾಲಯವು ಕಳೆದ ವರ್ಷದಲ್ಲಿ ವಿವಿಧ ಅಪರಾಧಗಳಿಗಾಗಿ ಈಗಾಗಲೇ 13,000 ಜನರನ್ನು ಬಂಧಿಸಿದೆ. ಆದರೆ ಈ ಅಪರಾಧಗಳ ನಿಖರವಾದ ಸ್ವರೂಪವು ಅಸ್ಪಷ್ಟವಾಗಿದೆ.

ತಿಮ್ಮಪ್ಪನ ದರ್ಶನಕ್ಕೆ ಮಣಗಟ್ಟಲೇ ಬಂಗಾರ ಧರಿಸಿ ಬಂದ ಭಕ್ತ ಕುಟುಂಬ!

ತಿರುಮಲ: ತಿರುಮಲ ತಿರುಪತಿ ಕ್ಷೇತ್ರದ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿರುವ ಶ್ರೀ ವೆಂಕಟೇಶ ಸ್ವಾಮಿ ದರ್ಶನ ಮಾಡಲೆಂದು ಪುಣೆಯಿಂದ ಬಂದಿದ್ದ ಮೂವರು ಭಕ್ತರು ಮೈ ಮೇಲೆ ಮಣಗಟ್ಟಲೆ ಬಂಗಾರ ಹೇರಿಕೊಂಡು ದೇವಸ್ಥಾನಕ್ಕೆ ಎಂಟ್ರಿ ಕೊಡುವ ಮೂಲಕ ನೆರೆದಿದ್ದ ಇತರ ಭಕ್ತರ ಗಮನ ಸೆಳೆದಿದ್ದಾರೆ. ಕೆಲವರು ಅವರ ವಿಡಿಯೋ ಮಾಡಿಕೊಂಡು ಸೋಷಿಯಲ್ ಮೀಡಿಯಾಗಳಿಗೆ ಅಪ್ಲೋಡ್ ಮಾಡಿದ್ದಾರೆ. ಅವರೂ ತಮ್ಮನ್ನು ಮೊಬೈಲ್‌ಗಳಲ್ಲಿ ಚಿತ್ರೀಕರಣ ಮಾಡಲು ಬಂದವರಿಗೆ ಪೋಸ್ ಕೊಡುತ್ತಾ ಖುಷಿಯಾಗಿ ದೇವಸ್ಥಾನದೊಳಕ್ಕೆ ಪ್ರವೇಶಿಸಿದ್ದಾರೆ. ಸದ್ಯಕ್ಕೆ ಪುಣೆಯಿಂದ ಬಂದವರು ಎಂದು ಮಾತ್ರ ಗೊತ್ತಾಗಿದೆ. ಅಷ್ಟೇ ಅಲ್ಲದೆ, ಅವರು ಉದ್ಯಮಿಗಳಾಗಿದ್ದು ಮನಸೋ ಇಚ್ಛೆ ಚಿನ್ನ ಧರಿಸುವುದು ಅವರ ಅಚ್ಚುಮೆಚ್ಚಿನ ಹವ್ಯಾಸವಂತೆ. ಮೂವರು ಇದ್ದ ಭಕ್ತರಲ್ಲಿ ಒಬ್ಬರು ಮಹಿಳೆಯಾಗಿದ್ದು ಆಕೆಯು ಉಟ್ಟಿದ್ದ ಸೀರೆ ಕೂಡ ಬಂಗಾರ ವರ್ಣದ್ದಾಗಿದ್ದು, ಅನೇಕ ಜನರು ಅದು ಸಹ ಬಂಗಾರದ ಎಳೆಗಳಿಂದ ಮಾಡಿದ್ದಿರಬಹುದಾದ ಸೀರೆ ಇರಬಹುದು ಎಂದು ತಿಳಿದಿದ್ದರು. ಆ ಮಹಿಳೆಯೊಂದಿಗೆ ಇದ್ದ ಇಬ್ಬರು ಪುರುಷರ ಕೊರಳಿನಲ್ಲಿ ದಪ್ಪದಪ್ಪನೆಯ ಬಂಗಾರದ ಸರಗಳಿದ್ದವು. 2–3 ಇಂಚಿನ ಬಂಗಾರದ ಅನೇಕ ಸರಗಳನ್ನು ಅವರು ಕೊರಳಲ್ಲಿ ಹಾವಿನಂತೆ ಸುತ್ತಿಕೊಂಡಿದ್ದರು.



ಅತ್ಯಾಡಿ ಗ್ರಾಮದಲ್ಲಿ ಇಂದು 'ತೂಗು ಸೇತುವೆ' ಉದ್ಘಾಟನೆ

'ಮರದ ಸೇತುವೆ ನಡೆದು ದಾಟಿದರೆ ಊರು ಪಾಲು, ಎಡವಿದರೆ ನೀರು ಪಾಲು' ಎಂಬ ಸ್ಥಿತಿಯಿಂದ ಪಾರು

ಮಡಿಕೇರಿ,ಆ.24– ಮಡಿಕೇರಿ ತಾಲೂಕಿನ ಚೆಂಬು ಗ್ರಾಮದ ಅತ್ಯಾಡಿ ಎಂಬ ಕುಗ್ರಾಮದ ನಿವಾಸಿಗಳ 'ತೂಗು ಸೇತುವೆ' ಬೇಡಿಕೆ ದಶಕಗಳ ಬಳಿಕ ಕೊನೆಗೂ ಈಡೇರಿದೆ. 'ಮರದ ಸೇತುವೆಯನ್ನು ನಡೆದು ದಾಟಿದರೆ ಊರು ಪಾಲು ಎಡವಿದರೆ ನೀರು ಪಾಲು' ಎಂಬಂತಹ ಭಯಾನಕ ಸ್ಥಿತಿಯಿಂದ ಇದೀಗ ಇಲ್ಲಿನ ಗ್ರಾಮಸ್ಥರು ಪಾರಾಗಿದ್ದಾರೆ. ಭಾನುವಾರ ಈ ಸೇತುವೆ ಉದ್ಘಾಟನೆಗೊಳ್ಳಲಿದೆ.



ಅತ್ಯಾಡಿ ಗ್ರಾಮದಲ್ಲಿ ನಿರ್ಮಾಣಗೊಂಡಿರುವ ತೂಗು ಸೇತುವೆ.

ಅತ್ಯಾಡಿ ಗ್ರಾಮದಲ್ಲಿ ಸುಮಾರು 60 ಕುಟುಂಬಗಳು ವಾಸಿಸುತ್ತಿದ್ದು, ಬಹುತೇಕರು ಕೂಲಿ ಕೆಲಸ ಮತ್ತು ಕೃಷಿ ಕಾರ್ಯದಲ್ಲೇ ಬದುಕು ಕಟ್ಟಿ ಕೊಂಡಿದ್ದಾರೆ. ಖಾಸಗಿ ಸಂಸ್ಥೆಯೊಂದು ತೂಗು ಸೇತುವೆ ತಜ್ಞ 'ಪದ್ಮಶ್ರೀ' ಗಿರೀಶ್ ಭಾರದ್ವಾಜ್ ಅವರ ಮೂಲಕ ಅತ್ಯಾಡಿ ಗ್ರಾಮದಲ್ಲಿ ತೂಗು ಸೇತುವೆ ನಿರ್ಮಿಸುವ ಮೂಲಕ ಸರಕಾರ ಮತ್ತು ನಾಗರಿಕ ಸಮಾಜಕ್ಕೆ ಮಾದರಿಯಾಗಿದೆ.

ಮರದ ಕಾಲು ಸೇತುವೆ: ಚೆಂಬು ಅತ್ಯಾಡಿಯಲ್ಲಿ ಮಳೆಗಾಲ ಉಂಬಾಲ ನದಿ ಭೋರ್ಗರೆಯುತ್ತಾ ಉಕ್ಕಿ ಹರಿಯುತ್ತದೆ. ಅಪಾಯ ಮಟ್ಟವನ್ನೂ ಮೀರಿ ಹರಿಯುವ ನದಿ, ವಿದ್ಯುತ್ ಕಣ್ಣಾಮುಚ್ಚಾಲೆ, ಮೊಬೈಲ್ ನೆಟ್‌ವರ್ಕ್ ಸಮಸ್ಯೆಗಳಿಂದ ಈ ಗ್ರಾಮ ಮಳೆಗಾಲ ಹೊರ ಜಗತ್ತಿನಿಂದ ಸಂಪರ್ಕ ಕಳೆದುಕೊಂಡು ಅಕ್ಷರಶಃ ದ್ವೀಪದಂತಾಗುತ್ತದೆ. ನೀರಿನ ಪ್ರಮಾಣ ಕಡಿಮೆ ಇದ್ದಲ್ಲಿ ಕಾಲ್ನಡಿಗೆ ಮೂಲಕ ಅಥವಾ ಜೀಪುಗಳಲ್ಲಿ ನದಿ ದಾಟಲು ಅಡ್ಡಿ ಇಲ್ಲ. ಆದರೆ ನೀರು ಉಕ್ಕೇರಿದರೆ ಪಟ್ಟಣಕ್ಕೆ ಬರಲು ಕಿ.ಮೀ ಪರ್ಯಾಯ ಮಾರ್ಗ ಅನುಸರಿಸುವುದು ಗ್ರಾಮಸ್ಥರಿಗೆ ಅನಿವಾರ್ಯವಾಗುತ್ತದೆ. ಇದಕ್ಕಾಗಿ ಮಳೆಗಾಲ ಪ್ರಾರಂಭವಾಗುವ ಸಂದರ್ಭ ಈ ಗ್ರಾಮಸ್ಥರು ನದಿಯ ಕಲ್ಲು ಬಂಡೆಗಳ ಮೇಲೆ ಮರದ ಸೇತುವೆ ನಿರ್ಮಿಸಿಕೊಳ್ಳುತ್ತಾರೆ. ಆದರೆ ಅತಿಯಾಗಿ ಮಳೆ ಸುರಿದು ನದಿಯಲ್ಲಿ ಪ್ರವಾಹ ಏರ್ಪಟ್ಟರೆ ಆಡಕೆ ಮರದ ಕಾಲು ಸೇತುವೆ ಕೂಡ ನೀರು ಪಾಲಾಗುವ ಆತಂಕ ಇಲ್ಲಿತ್ತು.

12 ದಿನಗಳಲ್ಲಿ ಸೇತುವೆ ಸಜ್ಜು: ಅತ್ಯಾಡಿ ಗ್ರಾಮದ ಜನರ ಅನುಕೂಲಕ್ಕಾಗಿ ಸೇತುವೆ ನಿರ್ಮಾಣ ಮಾಡಬೇಕೆನ್ನುವ ಚಿಂತನೆಯಡಿ ಪ್ರಣವ್ ಫೌಂಡೇಶ್‌ನ ಎಂಬ ಖಾಸಗಿ ಸಂಸ್ಥೆ ಮುಂದಾಗುತ್ತದೆ. ಅದರ ಟ್ರಸ್ಟಿಗಳು ತೂಗು ಸೇತುವೆ ತಜ್ಞ ಪದ್ಮಶ್ರೀ ಗಿರೀಶ್ ಭಾರದ್ವಾಜ್‌ರನ್ನು ಸಂಪರ್ಕಿಸಿ, ಕಾಲು ಸೇತುವೆಯ ಕುರಿತು ಚರ್ಚಿಸುತ್ತಾರೆ. ಇವರ ಮನವಿಗೆ ಸ್ಪಂದಿಸಿದ ಗಿರೀಶ್ ಭಾರದ್ವಾಜ್ ಮತ್ತು ತಂಡ ಕಳೆದ ಜೂ.17ರಂದು ಸ್ಥಳ ಪರಿಶೀಲನೆ ನಡೆಸಿ, ಯೋಜನೆಯನ್ನು ರೂಪಿಸಿತು. ಈ ನಡುವೆ ಪ್ರಣವ್ ಫೌಂಡೇಶನ್ ಕೊಡಗು ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ, ಸೇತುವೆ ನಿರ್ಮಾಣಕ್ಕೆ ಜಿಲ್ಲಾಡಳಿತದ ಹಸಿರು ನಿಶಾನೆಯನ್ನು ಪಡೆದುಕೊಳ್ಳುವ ಕಾರ್ಯವನ್ನೂ ನಡೆಸಿತು. ಇದೇ ಆ.10ರಂದು ಕಾಲು ಸೇತುವೆಯ ಕಾಮಗಾರಿ ಕ್ಷಿಪ್ರಗತಿಯಲ್ಲಿ ಆರಂಭವಾಗಿ ಆ.22ರಂದು ಮುಕ್ತಾಯ ಕಂಡಿದೆ. ಗ್ರಾಮಸ್ಥರ ನೆರವಿಗಾಗಿ ನಿರ್ಮಿಸಿದ ಈ ತೂಗು ಸೇತುವೆ ಗ್ರಾಮಸ್ಥರ ಸಂಪರ್ಕ ಸಂಕಷ್ಟಗಳಿಗೆ ತಾತ್ಕಾಲಿಕವಾದ ಪರಿಹಾರವನ್ನು ಒದಗಿಸಿದೆ. ಪ್ರಣವ್ ಫೌಂಡೇಶನ್ ಎಂಬ ಸಮಾಜ ಸೇವಾ ಖಾಸಗಿ ಸಂಸ್ಥೆಯೊಂದರ ಟ್ರಸ್ಟಿಗಳಾದ ಮಂಜುನಾಥ್ ಭಟ್, ಕಾರ್ತಿಕ್ ಭಟ್, ಮಹೇಶ್, ದೇವಿ ಪ್ರಸಾದ್, ಎನ್.ನೇತ್ರ ಸೇರಿದಂತೆ 10 ಮಂದಿ ಸಹಿತ ಇವರ ಮಾನವೀಯ ನೆಲೆಯ ಚಿಂತನೆಗಳಿಗೆ ಕೊಡಗು ಯಂಗ್ ಇಂಡಿಯನ್ ಫಾರ್ಮರ್ಸ್ ಅಸೋಸಿಯೇಶನ್, ಟೀಮ್ 12 ಆಫ್ ರೋಡರ್ಸ್, ಬೆಂಗಳೂರಿನ ಮಲ್ನಾಡ್ ಯೂತ್ ಅಸೋಸಿಯೇಶನ್ ಸಂಸ್ಥೆಗಳು ಕೂಡ ಕೈಜೋಡಿಸಿವೆ.

5 ವರ್ಷ ಗ್ಯಾರಂಟಿ: ಈ ಗ್ರಾಮದಲ್ಲಿ ನಿರ್ಮಿಸಿದ ಈ ಕಾಲು ಸೇತುವೆಗೆ ಸಂಸ್ಥೆ 'ಪ್ರಣವ ಸೇತು' ಎಂದು ಹೆಸರಿಟ್ಟಿದೆ. ಸುಮಾರು 2.50 ಲಕ್ಷ ರೂ. ಉಕ್ಕಿನಿಂದ ಮಾಡಿರುವ ತೂಗು ಸೇತುವೆ 24 ಮೀಟರ್ ಉದ್ದವಿದ್ದು, 0.75 ಮೀಟರ್ ಅಗಲವಿದೆ. ಒಂದು ಬಾರಿಗೆ 10 ಮಂದಿ ನಿಲ್ಲಬಹುದಾಗಿದ್ದು 5 ವರ್ಷ ಬಾಳಿಕೆ ಬರಲಿದೆ. ಸರ್ಕಾರದಿಂದ ಇಲ್ಲಿ ಶಾಶ್ವತವಾಗಿ ಸೇತುವೆ ನಿರ್ಮಾಣದ ಯೋಜನೆ ಪ್ರಗತಿಯಲ್ಲಿದ್ದು, ಅದು ಕಾರ್ಯಗತವಾಗುವವರೆಗೆ ತೂಗು ಸೇತುವೆ ಗ್ರಾಮಸ್ಥರ ಸಂಚಾರಕ್ಕೆ ಅನುಕೂಲಕರವಾಗಲಿದೆ. ಈ ಅವಧಿಯಲ್ಲಿ ಸೇತುವೆಯ ಮೇಲ್ವಿಚಾರಣೆಯನ್ನೂ ಕೂಡ ಸಂಸ್ಥೆಯೇ ನೋಡಿಕೊಳ್ಳಲಿದೆ ಎಂದು ಟ್ರಸ್ಟಿಗಳು ಮಾಹಿತಿ ನೀಡಿದ್ದಾರೆ.

'ಪ್ರಣವ ಸೇತು' ಹಸ್ತಾಂತರ

ತೂಗು ಸೇತುವೆ 'ಪ್ರಣವ ಸೇತು'ವನ್ನು ನಾಳೆ (ಭಾನುವಾರ) ಗ್ರಾಮಸ್ಥರಿಗೆ ಹಸ್ತಾಂತರ ಮಾಡಲಾಗುತ್ತದೆಂದು ಸಂಸ್ಥೆಯ ಪ್ರಮುಖರು ತಿಳಿಸಿದ್ದಾರೆ. ಬೆಳಿಗ್ಗೆ 11.30 ಗಂಟೆಗೆ ಹಸ್ತಾಂತರ ಕಾರ್ಯಕ್ರಮ ನಡೆಯಲಿದೆ. ತೂಗು ಸೇತುವೆಯನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಲಿದ್ದಾರೆ. ವಿರಾಜಪೇಟೆ ಕ್ಷೇತ್ರ ಶಾಸಕ ಎ.ಎಸ್.ಪೊನ್ನಣ್ಣ, ಪಬ್ಲಿಕ್ ಟಿವಿಯ ಮುಖ್ಯಸ್ಥ ಎಚ್.ಆರ್. ರಂಗನಾಥ್ ಮತ್ತು ಅತ್ಯಾಡಿ ಗ್ರಾಮದ ಮುಖ್ಯಸ್ಥರು ಮುಖ್ಯಅತಿಥಿಗಳಾಗಿ ಭಾಗವಹಿಸುವರು.

ದೇವಟ್ ಪರಂಬು ಸ್ಮಾರಕದಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ಶ್ರದ್ಧಾಂಜಲಿ



ದೇವಟ್ ಪರಂಬು ಸ್ಮಾರಕದಲ್ಲಿ ಶ್ರದ್ಧಾಂಜಲಿ ಸಲ್ಲಿಸುತ್ತಿರುವ ಸಿಎನ್‌ಸಿ ಪದಾಧಿಕಾರಿಗಳು.

ಮಡಿಕೇರಿ,ಆ.24– ಕೊಡವರ ಹತ್ಯೆಯಾದ ದೇವಟ್ ಪರಂಬು ಸ್ಮಾರಕ ಪ್ರದೇಶದಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಮಾಸಿಕ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಸಿತು. ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ಹಾಗೂ ಪ್ರಮುಖರು ಹಿರಿಯರಿಗೆ ಪುಷ್ಪನಮನ ಸಲ್ಲಿಸಿ ಕೊಡವಲ್ಯಾಂಡ್ ಪರ ಹಕ್ಕೊತ್ತಾಯ ಮಂಡಿಸಿದರು.

ಹಾಲೇರಿ ರಾಜ ಪರಿವಾರದ ಅಧೀನದಲ್ಲಿದ್ದ ಕೊಡಗು ರಾಜ್ಯವನ್ನು ಪರಾಕ್ರಮಿ ಕೊಡವರು ಹೈದರ್ ಮತ್ತು ಟಿಪ್ಪುವಿನ ಆಕ್ರಮಣದಿಂದ 32ಕ್ಕೂ ಹೆಚ್ಚು ಬಾರಿ ಕಾಪಾಡಿದ್ದರು. ಈ ಸೋಲಿನ ಸೇಡು ತೀರಿಸಿಕೊಳ್ಳಲು, ಟಿಪ್ಪು ಕೊಡವ ಬುಡಕಟ್ಟು ಜನಾಂಗವನ್ನು ವಂಚನೆಯ ಮೂಲಕ ಸಂಪೂರ್ಣವಾಗಿ ನಾಶಮಾಡಲು ಸಂಚು ಹೂಡಿದ್ದನು. ಟಿಪ್ಪು ಸಂಚಿನಿಂದ ದೇವಟ್ ಪರಂಬುವಿನಲ್ಲಿ ನಡೆದ ನರಮೇಧದ ಸ್ಮರಣಾರ್ಥ ಅಂತರರಾಷ್ಟ್ರೀಯ ಸ್ಮಾರಕ ನಿರ್ಮಾಣ ಮಾಡಬೇಕು ಮತ್ತು ಕೊಡವರ ನರಮೇಧವನ್ನು ವಿಶ್ವಸಂಸ್ಥೆಯು ಎನ್‌ಓ ಅಂತರರಾಷ್ಟ್ರೀಯ ಹತ್ಯಾಕಾಂಡದ ನೆನಪಿನ ಪಟ್ಟಿಯಲ್ಲಿ ಸೇರಿಸಬೇಕು ಎಂದು ನಾಚಪ್ಪ ಇದೇ ಸಂದರ್ಭ ಒತ್ತಾಯಿಸಿದರು. ಸಿಎನ್‌ಸಿ ಸಂಘಟನೆಯ ಬೇಡಿಕೆಗಳು ಶೀಘ್ರ ಈಡೇರಲಿ ಎಂದು ಹಿರಿಯರಲ್ಲಿ ಪ್ರಾರ್ಥಿಸಿರುವುದಾಗಿ ಅವರು ತಿಳಿಸಿದರು. ಪಟ್ಟಮಾಡ ಕುಶ ಹಾಗೂ ಮಂದಪಂಡ ಮನೋಜ್ ಉಪಸ್ಥಿತರಿದ್ದು ಪುಷ್ಪ ನಮನ ಸಲ್ಲಿಸಿದರು.


ಯಂತ್ರೋಪಕರಣ, ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದವರ ಸೆರೆ



ಆಸೀಫ್



ಕಿರ್ತನ್ ವಿ.ಬಿ



ವಿಶ್ವತ್



ಜಯಪ್ರಕಾಶ್.ಹೆಚ್

ಮಡಿಕೇರಿ,ಆ.24–ಕುಶಾಲನಗರ ಪಟ್ಟಣ ಪೊಲೀಸ್ ಠಾಣಾ ವ್ಯಾಪ್ತಿಯ ಮಾದಪಟ್ಟಣ ಗ್ರಾಮದ ಆರ್.ಕೆ ಲೇಔಟ್‌ನಲ್ಲಿ ಈಶ್ವರ್ ಎಂಬುವರ ಮನೆ ಕಟ್ಟಡ ಕಾಮಗಾರಿಗಾಗಿ ನಿರ್ಮಿಸಿದ್ದ ಶೆಡ್‌ನಿಂದ ವಿವಿಧ ಮಾದರಿಯ ಯಂತ್ರೋಪಕರಣಗಳು ಮತ್ತು ದ್ವಿಚಕ್ರ ವಾಹನಗಳನ್ನು ಕಳವು ಮಾಡಿದ್ದ ನಾಲ್ವರನ್ನು ಕುಶಾಲನಗರ ಪೊಲೀಸರು ಬಂಧಿಸಿದ್ದಾರೆ.

ಕುಶಾಲನಗರ ಗೋಪಾಲ್ ಸರ್ಕಲ್ ಮಹಮದ್ ಆಸೀಫ್(19), ಹೆಚ್‌ಆರ್‌ಪಿ ಕಾಲೋನಿ ಕಿರ್ತನ್ ವಿ.ಬಿ(26), ಚೌಡೇಶ್ವರಿ ಬಡಾವಣೆ ವಿಶ್ವತ್(18) ಮತ್ತು ಟೌನ್ ಕಾಲೋನಿಯ ಜಯಪ್ರಕಾಶ್ ಹೆಚ್(22) ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ. ಕಟ್ಟಿಂಗ್ ಮಿಷನ್, ಡೀಲಿಂಗ್ ಮಿಷನ್, ಏರ್‌ಬ್ಲೋವರ್, ವ್ಯಾಕ್ಯೂಮ್ ಕ್ಲೀನರ್, ಗ್ರೈಂಡಿಂಗ್ ಮಿಷನ್ ಸೇರಿದಂತೆ ಒಟ್ಟು 11 ಮಿಷನ್‌ಗಳು ಹಾಗೂ ವಿವಿಧ ಠಾಣಾ ವ್ಯಾಪ್ತಿಯಲ್ಲಿ ಕಳವು ಮಾಡಿದ್ದ ಒಟ್ಟು 8 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ.

ಮಾದಪಟ್ಟಣ ಗ್ರಾಮದ ಆರ್.ಕೆ.ಲೇಔಟ್‌ನಲ್ಲಿರುವ ಈಶ್ವರ್ ಎಂಬವರ ಮನೆ ಕಟ್ಟಡ ಕಾಮಗಾರಿಗಾಗಿ ನಿರ್ಮಿಸಿದ್ದ ಶೆಡ್‌ನಿಂದ ವಿವಿಧ ಮಾದರಿಯ ಯಂತ್ರೋಪಕರಣಗಳನ್ನು ಕಳವು ಮಾಡಿರುವ ಕುರಿತು ಈಶ್ವರ್ ಅವರು ಆ.20ರಂದು ಕುಶಾಲನಗರ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ತನಿಖೆ ನಡೆಸಿದ ಪೊಲೀಸರ ವಿಶೇಷ ತಂಡ ತಾಂತ್ರಿಕ ಸಾಕ್ಷ್ಯಗಳು ಮತ್ತು ಮಾಹಿತಿಗಳನ್ನು ಕಲೆ ಹಾಕಿ 4 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ.

ಜಾಮೀನಿನಲ್ಲಿ ಬಂದು ಕೃತ್ಯ: ಆರೋಪಿಗಳನ್ನು ತೀವ್ರ ವಿಚಾರಣೆ ನಡೆಸಿದ ಸಂದರ್ಭ 2022 ಮತ್ತು 2023ನೇ ಸಾಲಿನಲ್ಲಿ ಅರಕಲಗೂಡು, ಬೆಟ್ಟದಪುರ, ಪಿರಿಯಾಪಟ್ಟಣ, ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನ ಕಳವು ಮಾಡಿರುವುದು ಪತ್ತೆಯಾಗಿದೆ. ಆರೋಪಿಗಳಾದ ಮಹಮ್ಮದ್ ಆಸೀಫ್, ಕಿರ್ತನ್, ವಿಶ್ವತ್ ಈ ಹಿಂದೆ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಿಷೇಧಿತ ಮಾದಕ ವಸ್ತುಗಳ ಸರಬರಾಜು ಹಾಗೂ ಕಳವು ಪ್ರಕರಣ ದಾಖಲಾಗಿದ್ದು, ಜಾಮೀನಿನ ಮೇಲೆ ಬಿಡುಗಡೆಯಾಗಿರುವುದು ತನಿಖೆಯಲ್ಲಿ ತಿಳಿದು ಬಂದಿದೆ. ಆರೋಪಿಗಳಾದ ಕಿರ್ತನ್ ಮತ್ತು ಜಯಪ್ರಕಾಶ್ ವಿರುದ್ಧ ಈ ಹಿಂದೆ ಸೋಮವಾರಪೇಟೆ, ಕುಶಾಲನಗರ ಪಟ್ಟಣ ಹಾಗೂ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಗ್ಯಾಂಗ್ ರೇಪ್, ಕಳವು, ದರೋಡೆ, ಕೊಲೆ ಪ್ರಯತ್ನ ಪ್ರಕರಣ ದಾಖಲಾಗಿದ್ದು, ಜಾಮೀನಿನ ಮೇಲೆ ಬಿಡುಗಡೆಯಾಗಿರುವುದು ತನಿಖೆಯಲ್ಲಿ ತಿಳಿದು ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ. ಗಂಗಾಧರಪ್ಪ, ಕುಶಾಲನಗರ ಪಟ್ಟಣ ಠಾಣಾಧಿಕಾರಿ ಪ್ರಕಾಶ್.ಬಿ.ಜೆ, ಗೀತಾ.ಹೆಚ್.ಟಿ. ಹಾಗೂ ಉಪ ವಿಭಾಗ ಮಟ್ಟದ ಅಪರಾಧ ಪತ್ತೆ ಸಿಬ್ಬಂದಿಗಳು ಮತ್ತು ತಾಂತ್ರಿಕ ಸಿಬ್ಬಂದಿಗಳು ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಪ್ರಜಾಪಿತ ಬ್ರಹ್ಮಾಕುಮಾರಿ ವಿವಿ ಸಭಾಂಗಣದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ, ರಕ್ಷಾ ಬಂಧನ ಆಚರಣೆ



ಶ್ರೀ ಕೃಷ್ಣ ಜನ್ಮಾಷ್ಟಮಿ ಹಾಗೂ ರಕ್ಷಾ ಬಂಧನ ಕಾರ್ಯಕ್ರಮ ಉದ್ಘಾಟಿಸಿದ ಗಣ್ಯರು.

ವಿರಾಜಪೇಟೆ, ಆ.24– ರಕ್ಷಾ ಬಂಧನ್ ಹಬ್ಬ ಎಲ್ಲಾ ಹಬ್ಬಗಳಿಗಿಂತ ವಿಶಿಷ್ಟವಾದ ಹಬ್ಬವಾಗಿದೆ. ಇದು ಭಾರತದ ಸಾಂಸ್ಕೃತಿಕ ಮತ್ತು ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಆಧ್ಯಾತ್ಮಿಕ ರಹಸ್ಯಗಳನ್ನು ಹೊಂದಿರುವ ಪರಮಾತ್ಮನ ಪ್ರೀತಿಯ ಕೊಡುಗೆಯಾಗಿದೆ ಎಂದು ಮಡಿಕೇರಿಯ ಬ್ರಹ್ಮಾಕುಮಾರಿ ಈಶ್ವರೀಯ ವಿದ್ಯಾಲಯದ ರಾಜಯೋಗಿನಿ ಗಾಯತ್ರಿ ಅಭಿಪ್ರಾಯಪಟ್ಟರು.

ಪಟ್ಟಣದ ಅಪ್ಪಯ್ಯ ಸ್ವಾಮಿ ರಸ್ತೆಯಲ್ಲಿರುವ ಪ್ರಜಾಪಿತ ಬ್ರಹ್ಮಾಕುಮಾರಿ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಶ್ರೀ ಕೃಷ್ಣ ಜನ್ಮಾಷ್ಟಮಿ ಹಾಗೂ ರಕ್ಷಾ ಬಂಧನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ರಕ್ಷಾ ಬಂಧನವು ಸಹೋದರ ಸಹೋದರಿಯರ ಸಂಬಂಧವನ್ನು ಗಟ್ಟಿಗೊಳಿಸುತ್ತದೆ. ಬಲಗೈಗೆ ರಾಖಿಯನ್ನು ಕಟ್ಟುವುದರಿಂದ ಉತ್ತಮ ಕಾರ್ಯಗಳನ್ನು ಮಾಡಲು ಪ್ರೇರೇಪಿಸುತ್ತದೆ. ಮಾನವ ಜನಾಂಗದ ರಕ್ಷಣೆಗಾಗಿ ಪ್ರೇರಣೆ ನೀಡುತ್ತದೆ ಮತ್ತು ಮನುಷ್ಯನ ಮನಸ್ಸು ಶುದ್ಧೀಕರಣ ಮಾಡುತ್ತದೆ ಎಂದು ನುಡಿದರು.

ಬ್ರಹ್ಮಕುಮಾರೀಸ್ ಮಡಿಕೇರಿ ಕೇಂದ್ರದ ಧನಲಕ್ಷ್ಮಿ ಅಕ್ಕ ಮಾತನಾಡಿ ಶ್ರೀ ಕೃಷ್ಣ ಜನ್ಮಾಷ್ಟಮಿ ಹಾಗೂ ರಕ್ಷ ಬಂಧನ ಕಾರ್ಯವನ್ನು ಸುಮಾರು 50 ವರ್ಷಗಳಿಂಲೂ ನಡೆಸಿಕೊಂಡು ಬರುತ್ತಿದ್ದೇವೆ. ಮನಸ್ಸಿನಲ್ಲಿರುವ ದುಃಖಗಳನ್ನು ಹೋಗಲಾಡಿಸಿ ಸುಖ ಶಾಂತಿ ನೆಮ್ಮದಿಯನ್ನು ಭಗವಂತನು ಕರುಣಿಸಲಿ ಎಂದರು.

ಅತಿಥಿಗಳಾಗಿ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಜೋತಿ ಮತ್ತು ರೋಟರಿ ಶಾಲೆಯ ಮುಖ್ಯೋಪಾಧ್ಯಾಯರಾದ ಎಚ್.ಜೆ.ವಿಶಲಾಕ್ಷಿ ಅವರು ಸಭೆಯನ್ನುದ್ದೇಶಿಸಿ ರಕ್ಷಾ ಬಂಧನದ ಮಹತ್ವದ ಬಗ್ಗೆ ಮಾತನಾಡಿದರು, ಕೇಂದ್ರದ ಮುಖ್ಯ ಸಂಚಾಲಕಿ ಬಿ.ಕೆ.ಕೋಮಲಕ್ಕ ಸ್ವಾಗತಿಸಿ, ಶ್ರೀ ಕೃಷ್ಣ ನಡೆದು ಬಂದ ಹಾದಿ ಬಗ್ಗೆ ತಿಳಿಸಿದರು. ಬ್ರಹ್ಮ ಕುಮಾರಿ ವಿದ್ಯಾಲಯದ ನಿವೃತ್ತ ಕರ್ನಲ್ ಕರುಂಬಯ್ಯ ಅವರು ಧನ್ಯವಾದ ಹೇಳಿದರು.

ಸಿಎಂ ರಾಜೀನಾಮೆ ನೀಡಿ ತನಿಖೆ ಎದುರಿಸಲು ಬಿಎಸ್ಪಿ ಆಗ್ರಹ

ಎಚ್‌ಡಿಕೆ ಸೇರಿದಂತೆ ಎಲ್ಲ ರಾಜಕಾರಣಿಗಳ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲಿ



ಪತ್ರಿಕಾಗೋಷ್ಠಿಯಲ್ಲಿ ಬಿಎಸ್ಪಿ ರಾಜ್ಯ ಸಂಯೋಜಕ ಎಂ.ಕೃಷ್ಣಮೂರ್ತಿ ಮಾತನಾಡಿದರು.

ಚಾಮರಾಜನಗರ, ಆ.24– ಮುಡಾ ಹಗರಣ ಆರೋಪ ಮುಕ್ತರಾಗುವವರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು ಎಂದು ಬಹುಜನ ಸಮಾಜ ಪಕ್ಷದ ರಾಜ್ಯ ಸಂಯೋಜಕ ಎಂ.ಕೃಷ್ಣಮೂರ್ತಿ ಆಗ್ರಹಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಮುಖ್ಯಮಂತ್ರಿಗಳ ವಿರುದ್ಧ ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದರಿಂದ ಕೂಡಲೇ ಮುಖ್ಯಮಂತ್ರಿ ರಾಜೀನಾಮೆ ನೀಡಿ ತನಿಖೆ ಎದುರಿಸಲಿ. ಅದನ್ನು ಬಿಟ್ಟು ನಾನು ಭ್ರಷ್ಟಾಚಾರ ಮಾಡಿಲ್ಲ. ನಾನೊಬ್ಬ ಸಮಾಜವಾದಿ. ನಾನೊಬ್ಬ ನಿಷ್ಕಳಂಕ ರಾಜಕಾರಣಿ ಎಂದು ಸಮರ್ಥನೆ ಮಾಡಿಕೊಳ್ಳುವುದು ಸರಿಯಲ್ಲ ಎಂದರು.

ದೇಶಕ್ಕೆ ಸ್ವಾತಂತ್ರ್ಯ ಬಂದು 78 ವರ್ಷಗಳು ತುಂಬಿದ್ದರೂ, ರಾಜ್ಯದಲ್ಲಿ ಒಬ್ಬ ಎಸ್ಸಿ, ಎಸ್ಟಿ ಮುಖ್ಯಮಂತ್ರಿ ಆಗಿಲ್ಲ. ನಾನು ಸಮಾಜವಾದಿ, ಸಾಮಾಜಿಕ ನ್ಯಾಯಕ್ಕೆ ಬದ್ಧನಾಗಿರುವ ವ್ಯಕ್ತಿ ಎಂದು ಹೇಳುವ ಸಿದ್ದರಾಮಯ್ಯ ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿರುವುದೇ ಆದರೆ ಸಿಎಂ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಒಬ್ಬ ಎಸ್ಸಿ, ಎಸ್ಟಿ ಸಮುದಾಯಕ್ಕೆ ಸೇರಿದ ವ್ಯಕ್ತಿಯನ್ನು ಮುಖ್ಯಮಂತ್ರಿ ಮಾಡಬೇಕು ಎಂದು ಆಗ್ರಹಿಸಿದರು.

ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಆರೋಪ ಎದುರಿಸುತ್ತಿರುವ ಎಲ್ಲಾ ರಾಜಕಾರಣಿಗಳ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಬೇಕು ಎಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಎಸ್ಪಿ ಜಿಲ್ಲಾಧ್ಯಕ್ಷ ಎನ್.ನಾಗಯ್ಯ, ಸಂಯೋಜಕ ರಾಜಶೇಖರ, ಉಪಾಧ್ಯಕ್ಷ ಬ್ಯಾಡಮೂಡ್ಲು ಬಸವಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಮ.ಕೃಷ್ಣಮೂರ್ತಿ, ತಾಲೂಕು ಅಧ್ಯಕ್ಷ ಚಂದ್ರಕಾಂತ್, ಭೈರಲಿಂಗಸ್ವಾಮಿ ಹಾಜರಿದ್ದರು.

ಎಂಸಿಡಿಸಿಸಿ ಬ್ಯಾಂಕ್‌ನಿಂದ ಬಾಕಿ 32 ಲಕ್ಷ ಜಮೆಗೆ ಆ.26ರ ಗಡುವು

ಕೆರೆಹಳ್ಳಿ ಪಿಎಸಿಸಿ ಬ್ಯಾಂಕ್ ಸರ್ವ ಸದಸ್ಯರ ಸಭೆ ನಿರ್ಣಯ

ಚಾಮರಾಜನಗರ, ಆ.24–ಮೈಸೂರು– ಚಾಮರಾಜನಗರ ಜಿಲ್ಲಾ ಸಹಕಾರ (ಎಂಸಿಡಿಸಿಸಿ) ಬ್ಯಾಂಕ್‌ನಿಂದ ಕೆರೆಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ರೈತರಿಗೆ ನೀಡಬೇಕಾಗಿರುವ 32 ಲಕ್ಷ ರೂ.ಗಳ ಬಾಕಿ ಆ.26ರ ಗಡುವಿನೊಳಗೆ ಜಮಾ ಮಾಡದಿದ್ದರೆ ಬ್ಯಾಂಕಿನ ಮುಂದೆ ಧರಣಿ ನಡೆಸಲು ಸರ್ವ ಸದಸ್ಯರ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ತಾಲೂಕಿನ ಕೆರೆಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2023–24ನೇ ಸಾಲಿನ ಸರ್ವ ಸದಸ್ಯರ ಸಭೆ ಸಂಘದ ಅಧ್ಯಕ್ಷ ಕೆರೆಹಳ್ಳಿ ನವೀನ್ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆಯಿತು. ಸಭೆಯಲ್ಲಿ ಭಾಗವಹಿಸಿದ್ದ ಬ್ಯಾಂಕಿನ ಮೇಲ್ವಿಚಾರಕ ಮಂಜು ವಿರುದ್ಧ ಸಂಘದ ಸದಸ್ಯರು ಹಾಗೂ ಆಡಳಿತ ಮಂಡಲಿ ಸದಸ್ಯರು ಹರಿಹಾಯ್ದು ನಮ್ಮ ಸಹಕಾರ ಸಂಘದ ರೈತರಿಗೆ ಬರಬೇಕಾಗಿರುವ ಹಣ ದುರುಪಯೋಗವಾಗಲು ಎಂಸಿಡಿಸಿಸಿ ಬ್ಯಾಂಕ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾರಣರಾಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಎಂಸಿಡಿಸಿಸಿ ಬ್ಯಾಂಕಿನ ಎಂಡಿ ವಿನಯ್‌ಕುಮಾರ್ ತನಿಖೆ ನೆಪದಲ್ಲಿ ಕಳೆದ 8 ತಿಂಗಳಿಂದ ಸಂಘದ ಠೇವಣಿ ಹಣ 5 ಲಕ್ಷ ರೂ. ಹಾಗೂ ರೈತರ ಸಾಲ ಖಾತೆಗೆ ಜಮಾವಾಗಬೇಕಾಗಿರುವ 27 ಲಕ್ಷ ರೂ.ಗಳನ್ನು ನೀಡದೆ ತೊಂದರೆ ನೀಡುತ್ತಿದ್ದಾರೆ ಎಂದು ಸಭೆಗೆ ಸಂಘದ ಅಧ್ಯಕ್ಷ ನವೀನ್, ಸಿಇಓ ರಾಜೇಂದ್ರ ಕುಮಾರ್ ಸಭೆಗೆ ಮಾಹಿತಿ ನೀಡಿದರು.

ಬ್ಯಾಂಕಿನ ಮೇಲ್ವಿಚಾರಕ ಮಂಜು ಅವರು ನೇರವಾಗಿ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ವಿನಯ್ ಕುಮಾರ್ ಅವರಿಗೆ ಮೊಬೈಲ್ ಕರೆ ಮಾಡಿ, ಸರ್ವ ಸದಸ್ಯರ ತೀರ್ಮಾನವನ್ನು ತಿಳಿಸಿದರು. ಇದಕ್ಕೆ ಒಪ್ಪಿದ ಅವರು ಆ.26 ರೊಳಗೆ ಕೆರೆಹಳ್ಳಿ ಸಹಕಾರ ಸಂಘದ ಹಣವನ್ನು ಖಾತೆಗೆ ಜಮಾ ಮಾಡಲು ಒಪ್ಪಿದರು. ಬಳಿಕ ಸಭೆ ಮುಂದುವರಿಯಿತು.

ಸಂಘಕ್ಕೆ 2.70 ಲಕ್ಷ ರೂ. ನಿವ್ವಳ ಲಾಭ: ಸಂಘದ ಅಧ್ಯಕ್ಷ ಕೆರೆಹಳ್ಳಿ ನವೀನ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಹಕಾರ ಸಂಘ ಉತ್ತಮವಾಗಿ ವಹಿವಾಟು ನಡೆಸಿ, 2023–24ನೇ ಸಾಲಿನಲ್ಲಿ 2.70 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ. ಸಂಘದಿಂದ 540 ಮಂದಿ ರೈತರಿಗೆ 8.71 ಕೋಟಿ ರೂ.ಗಳ ಸಾಲ ನೀಡಲಾಗಿದೆ. ಶೂನ್ಯ ಬಡ್ಡಿ ದರದಲ್ಲಿ ಸಾಲ ಪಡೆದುಕೊಂಡ ರೈತರು ಸಕಾಲದಲ್ಲಿ ಸಾಲ ಮರು ಪಾವತಿ ಮಾಡಿ, ಸರ್ಕಾರದ ಸವಲತ್ತುಗಳನ್ನು ಪಡೆದುಕೊಳ್ಳಬೇಕು. ಸಂಘವನ್ನು ಮಾದರಿಯಾಗಿ ಪರಿವರ್ತನೆ ಮಾಡಲು ಎಲ್ಲರೂ ಸಹಕಾರ ನೀಡಬೇಕು ಎಂದರು.

ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆರ್. ರಾಜೇಂದ್ರ ಕುಮಾರ್ ಸಂಘದ ಆಡಿಟ್ ವರದಿಯನ್ನು ಮಂಡಿಸಿ, ಅನುಮೋದನೆ ಪಡೆದುಕೊಂಡರು. ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಎಂ.ಪುಟ್ಟಸಿದ್ದಯ್ಯ, ನಿರ್ದೇಶಕರಾದ ಬಿ.ಎಸ್.ರೇವಣ್ಣ, ಎಂ.ವಿ.ನಾಗರಾಜು, ರಾಜಕುಮಾರ್, ಕೆಂಪರಾಜು, ಮಹದೇವಸ್ವಾಮಿ, ಬೀರೇಗೌಡ, ಲತಾ, ಗುರುಸಿದ್ದ ನಾಯಕ, ಬ್ಯಾಂಕಿನ ಮೇಲ್ವಿಚಾರಕ ಟಿ.ಮಂಜು ಹಾಗೂ ಸಂಘದ ಸರ್ವ ಸದಸ್ಯರು ಭಾಗವಹಿಸಿದ್ದರು.

ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ ಶಿಕ್ಷಕರ ನೌಕರರ ಜಾಗೃತಿ ಸಮಾವೇಶ

ಶಿಕ್ಷಣದಿಂದ ಮಾತ್ರ ಸಮ ಸಮಾಜ ನಿರ್ಮಾಣ ಸಾಧ್ಯ

ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅಭಿಮತ



ಚಾಮರಾಜನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ ಶಿಕ್ಷಕರ ನೌಕರರ ಜಾಗೃತಿ ಸಮಾವೇಶ ಹಾಗೂ ಶೈಕ್ಷಣಿಕ ಕಾರ್ಯಾಗಾರವನ್ನು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಎಚ್.ಸಿ. ಮಹದೇವಪ್ಪ ಉದ್ಘಾಟಿಸಿದರು.

ಚಾಮರಾಜನಗರ, ಆ.24–ಶಿಕ್ಷಣದಿಂದ ಮಾತ್ರ ಸಮ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂಬ ಅರಿವು ಅಂಬೇಡ್ಕರ್ ಅವರಿಗೆ ಇತ್ತು. ಹಾಗಾಗಿ ಅವರು ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಸಂವಿಧಾನದಲ್ಲಿ ಅಳವಡಿಸಿದರು ಎಂದು ಸಮಾಜ ಕಲ್ಯಾಣ ಇಲಾಖೆಯ ಸಚಿವ ಡಾ.ಎಚ್.ಸಿ. ಮಹದೇವಪ್ಪ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಪರಿಶಿಷ್ಟ ಜಾತಿ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ ಶಿಕ್ಷಕರ ನೌಕರರ ಜಾಗೃತಿ ಸಮಾವೇಶ ಹಾಗೂ ಶೈಕ್ಷಣಿಕ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನದತ್ತವಾಗಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ ಪರಿಣಾಮ ಎಲ್ಲರೂ ಸುಶಿಕ್ಷಿತರಾಗಿ ಉತ್ತಮ ಸಮಾಜವನ್ನು ಕಾಣಲು ಸಾಧ್ಯವಾಗಿದೆ. ಈ ಹಿಂದೆ ಶಿಕ್ಷಣ ಒಂದು ವರ್ಗದ ಸ್ವತ್ತು ಆಗಿತ್ತು. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚನೆ ಮಾಡಿ, ಎಲ್ಲರಿಗೂ ಶಿಕ್ಷಣ, ಉದ್ಯೋಗ ಹಾಗೂ ಸಮಾನತೆಯನ್ನು ಕಲ್ಪಿಸಿಕೊಟ್ಟರು. ಧರ್ಮಾಧಾರಿತ ಶಿಕ್ಷಣ ಬೇಡ ಎಂದು ಹೇಳಿದರು. ಇದರ ಪರಿಣಾಮ ಚಾಮರಾಜನಗರದಂತಹ ಹಿಂದುಳಿದ ಜಿಲ್ಲೆಯಲ್ಲಿ ಶೈಕ್ಷಣಿಕ ಕ್ರಾಂತಿಯಾಗಿದೆ. ನೀವೆಲ್ಲರೂ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಮಕ್ಕಳನ್ನು ಪ್ರಬುದ್ಧ ಭಾರತ ಪ್ರಜೆಗಳನ್ನಾಗಿ ರೂಪಿಸಬೇಕು. ಇದರಿಂದ ದೇಶ ಮತ್ತು ರಾಷ್ಟ್ರ ಅಭಿವೃದ್ಧಿಯತ್ತ ಸಾಗುತ್ತದೆ ಎಂದರು.

ಅಂಬೇಡ್ಕರ್ ಒಬ್ಬ ಶಿಕ್ಷಕರಾಗಿದ್ದರು. ಕಾನೂನು ಕಾಲೇಜು ಪ್ರಾಧ್ಯಾಪಕರಾಗಿ ಉತ್ತಮ ಸೇವೆ ಸಲ್ಲಿಸಿದ್ದರು. ಅವರು ಪಟ್ಟ ಕಷ್ಟವನ್ನು ನಾವ್ಯಾರೂ ಯಾರು ಅನುಭವಿಸಿಲ್ಲ ಹೀಗಾಗಿ ತಾವೆಲ್ಲರು ಜಾಗೃತರಾಗಬೇಕು. ಅವರ ಆಶಯದಂತೆ ಶಿಕ್ಷಣ, ಸಂಘಟನೆ, ಹೋರಾಟಕ್ಕೆ ಹೆಚ್ಚಿನ ಒತ್ತು ನೀಡಬೇಕು. ನೂತನ ಶಿಕ್ಷಣ ನೀತಿಯು ಮನುವಾದಿ ಶಿಕ್ಷಣಕ್ಕೆ ಮತ್ತೇ ವಾಪಸ್ ಹೋದಂತೆ ಆಗುತ್ತದೆ. ಬಡ ಮಕ್ಕಳು ನಾಲ್ಕು ವರ್ಷ ಪದವಿ ಮಾಡುವುದು ಕಷ್ಟ. ಇದರಿಂದ ಶಿಕ್ಷಣ ಮೌಲ್ಯ ಕುಸಿಯುತ್ತದೆ. ಮೂರು ವರ್ಷಗಳ ಪದವಿ ಪೂರ್ಣ ಮಾಡಿ ಅವರು ನಿರುದ್ಯೋಗಿಗಳಾಗುತ್ತಾರೆ. ಹೀಗಾಗಿ ನಮ್ಮ ಸರ್ಕಾರ ನೂತನ ಶಿಕ್ಷಣ ನೀತಿಯನ್ನು ಜಾರಿಗೊಳಿಸದೇ ಹಿಂದಿನ ಶಿಕ್ಷಣ ನೀತಿಯನ್ನು ಮುಂದುವರಿಸುತ್ತಿದೆ ಎಂದರು.

ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಶಿಕ್ಷಣಕ್ಕೆ ಪರಿಶಿಷ್ಟ ಜಾತಿ ಜನಾಂಗವು ಹೆಚ್ಚಿನ ಒತ್ತು ನೀಡಿದೆ. ಅಂಬೇಡ್ಕರ್ ಅವರ ಆಶಯದಂತೆ ಚಾಮರಾಜನಗರ ಜಿಲ್ಲೆಯಲ್ಲಿ ನಮ್ಮ ತಂದೆ ಬಿ.ರಾಚಯ್ಯ ಅವರು ಶಿಕ್ಷಕರ ತರಬೇತಿ ಸಂಸ್ಥೆಯನ್ನು ಆರಂಭಿಸಿ, ಶಿಕ್ಷಕರನ್ನು ತಯಾರು ಮಾಡಿದರು. ಅದೇ ರೀತಿ ಕೆ.ಸಿ.ರಂಗಯ್ಯ ಅವರು ಬಹಳಷ್ಟು ಬಡ ಮಕ್ಕಳಿಗೆ ಶಿಕ್ಷಣವನ್ನು ಧಾರೆ ಎರೆದಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ನಳಂದ ಬೌದ್ಧ ವಿಶ್ವವಿದ್ಯಾಲಯದ ಪ್ರಧಾನ ಕಾರ್ಯದರ್ಶಿ ಭಂತೇ ಬೋಧಿದತ್ತ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಕಾರ್ಯಕ್ರಮದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ.ಮಂಜುನಾಥ್ ಪ್ರಸನ್ನ, ಬಿಇಓ ಹನುಮಂತಶೆಟ್ಟಿ, ಪೌರಾಯುಕ್ತ ರಾಮದಾಸ್, ಡಾ.ರೇಣುಕಾದೇವಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಬಿಂದ್ಯಾ, ನಗರಸಭಾ ಸದಸ್ಯ ಆರ್.ಎಂ.ರಾಜಪ್ಪ, ಬಿಆರ್‌ಸಿ ಸರೋಜ, ಕೆಆರ್‌ಡಿಎಲ್ ಅಭಿಯಂತರ ಚಿಕ್ಕಲಿಂಗಯ್ಯ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಹೆಚ್.ಕೆ.ಯೋಗನಂದ, ಡಯಟ್ ಪ್ರಾಂಶುಪಾಲ ಕಾಶೀನಾಥ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ಅರಸ್, ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಣ್ಣೇಗೌಡ ಉಪಸ್ಥಿತರಿದ್ದರು.

ತಾಲೂಕು ದೈಹಿಕ ಅಧೀಕ್ಷಕ ಬಸವರಾಜು, ಕರಾಪ್ರಾಶಾ ಶಿಕ್ಷಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ಕೊಳ್ಳೇಗಾಲ ತಾಲ್ಲೂಕು ಅಧ್ಯಕ್ಷ ಶ್ರೀಧರ್, ಕಾರ್ಯದರ್ಶಿ ಚಿಕ್ಕರಾಜು, ಪರಿಶಿಷ್ಟ ಜಾತಿ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ತಾಲೂಕು ಅಧ್ಯಕ್ಷ ಎಂ.ಡಿ.ಮಹದೇವಯ್ಯ, ಕೊಳ್ಳೇಗಾಲ ತಾಲೂಕು ಅಧ್ಯಕ್ಷ ಆನಂದರಾಜು, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ಎಸ್.ಜಯರಾಮು, ಯಳಂದೂರು ತಾಲೂಕು ಅಧ್ಯಕ್ಷ ಶಂಕರ್, ಹನೂರು ತಾಲೂಕು ಅಧ್ಯಕ್ಷ ಮಾದೇಶ್ ಇತರರು ಉಪಸ್ಥಿತರಿದ್ದರು.

ಮಾಜಿ ಸಚಿವ ಎನ್.ಮಹೇಶ್ ಮನೆ ಬೀಗ ಮುರಿದು ಕಳವು

ಕೊಳ್ಳೇಗಾಲ,ಆ.24– ಮಾಜಿ ಸಚಿವ ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷ ಎನ್. ಮಹೇಶ್ ಅವರ ಕೊಳ್ಳೇಗಾಲದ ಆದರ್ಶ ಬಡಾವಣೆಯಲ್ಲಿರುವ ಮನೆ ಬೀಗ ಮುರಿದು ಸುಮಾರು 50 ಸಾವಿರಕ್ಕೂ ಅಧಿಕ ನಗದನ್ನು ಕಳ್ಳರು ದೋಚಿದ್ದಾರೆ.

ನಿನ್ನೆ ಸಂಜೆ ತನಕ ಮನೆಯಲ್ಲಿದ್ದ ಮಹೇಶ್ ನಂತರ ಬೆಂಗಳೂರಿಗೆ ತೆರಳಿದ್ದರು. ಸ್ಥಳಕ್ಕೆ ಕೊಳ್ಳೇಗಾಲ ಪೊಲೀಸರು ಆಗಮಿಸಿ ಸ್ಥಳ ಪರಿಶೀಲನೆ ನಡೆಸಿದ್ದಾರೆ. ಬೆಂಗಳೂರಿನಲ್ಲಿದ್ದ ಮಹೇಶ್ ಅವರು ಶನಿವಾರ ಸಂಜೆ ಕೊಳ್ಳೇಗಾಲಕ್ಕೆ ಆಗಮಿಸಿದಾಗ 50 ಸಾವಿರ ಕಳ್ಳತನವಾಗಿದೆ ಎಂದು ದೂರು ನೀಡಿದ್ದು ಪಟ್ಟಣದಲ್ಲಿ ಪೊಲೀಸ್ ವ್ಯವಸ್ಥೆ ನಿಷ್ಕ್ರಿಯವಾಗಿದೆ ಎಂದು ಆರೋಪಿಸಿದ್ದಾರೆ.

ನನ್ನ ಕೊಳ್ಳೇಗಾಲ ಪಟ್ಟಣದಲ್ಲಿ ಕಾನೂನು ಸುವ್ಯವಸ್ಥೆ ಸುಗಮವಾಗಿಲ್ಲ. ಕಳ್ಳತನ ಪ್ರಕರಣ ಹೆಚ್ಚುತ್ತಿದೆ. ಬೀಟ್ ಪೊಲೀಸರು ಸಮರ್ಪಕ ರೀತಿ ಕರ್ತವ್ಯ ನಿರ್ವಹಿಸಿದರೆ ಕಳ್ಳತನಗಳಿಗೆ ಕಡಿವಾಣ ಹಾಕಬಹುದಿತ್ತು. ಇನ್ನಾದರೂ ಪೊಲೀಸ್ ವ್ಯವಸ್ಥೆ ಚುರುಕಾಗಬೇಕು ಎಂದು ಆಗ್ರಹಿಸಿದರು.

ವಿದ್ಯಾರ್ಥಿಗಳಿಗೆ ಸಂವಿಧಾನದ ಅರಿವು ಮುಖ್ಯ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಅಭಿಮತ



ಸಂವಿಧಾನ ಅರಿವು ಕಾರ್ಯಕ್ರಮವನ್ನು ಜಿಲ್ಲಾ ಎಸ್ಪಿ ಡಾ.ಬಿ.ಟಿ. ಕವಿತಾ ಉದ್ಘಾಟಿಸಿದರು.


ಚಾಮರಾಜನಗರ, ಆ.24– ಸಂವಿಧಾನದ ಆಶಯಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಸಂವಿಧಾನದ ಮಹತ್ವವನ್ನು ಹೆಚ್ಚಾಗಿ ಅರಿತುಕೊಳ್ಳಬೇಕಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಅಭಿಪ್ರಾಯಪಟ್ಟರು.

ನಗರದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಜನಹಿತಾಶಕ್ತಿ ಹೋರಾಟ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಹಾಗೂ ಸರ್ಕಾರಿ ಪದವಿ ಪೂರ್ವ ಮಹಿಳಾ ಕಾಲೇಜು ಸಹಯೋಗದಲ್ಲಿ ನಡೆದ ಸಂವಿಧಾನ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ದೇಶದಲ್ಲಿರುವ ಹಲವು ಧರ್ಮಗಳಿಗೆ ಅದರದ್ದೇ ಆದ ಧರ್ಮ ಗ್ರಂಥಗಳು ಇದೆ. ಆದರೆ ಭಾರತೀಯರು ಎಂದು ಗುರುತಿಸಿಕೊಳ್ಳಲು ಸಂವಿಧಾನವೇ ಪವಿತ್ರ ಗ್ರಂಥವಾಗಿದೆ. ಪ್ರತಿಯೊಬ್ಬ ಭಾರತೀಯರು ಸಂವಿಧಾನವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಿದೆ. ನಮ್ಮ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ವ್ಯವಸ್ಥೆ ಹೇಗೆ ಕರ್ತವ್ಯ ನಿರ್ವಹಿಸುತ್ತದೆ ಎನ್ನುವುದನ್ನು ಅರಿತುಕೊಳ್ಳಲು ಸಂವಿಧಾನದ ಜ್ಞಾನ ಅಗತ್ಯವಾಗಿದೆ ಎಂದರು.

ಸಾಹಿತಿ ಸೋಮಶೇಖರ್ ಬಿಸಲವಾಡಿ ಮಾತನಾಡಿ, ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ ರಚನೆಯ ಸಂವಿಧಾನ ಜಗತ್ತಿನಲ್ಲೇ ಶ್ರೇಷ್ಠ ಸಂವಿಧಾನವಾಗಿದೆ. ಕುರಾನ್, ಬೈಬಲ್, ಭಗವದ್ಗೀತೆ ಹಾಗೂ ಇನ್ನಿತರೆ ಧರ್ಮ ಗ್ರಂಥಗಳಿಗಿಂತಲೂ ಸಂವಿಧಾನ ಪವಿತ್ರ ಗ್ರಂಥವಾಗಿದೆ. ದೇಶದ ಪ್ರತಿಯೊಬ್ಬ ನಾಗರಿಕರು ಸಂವಿಧಾನದ ನೆರಳಿನಲ್ಲೇ ಇದ್ದಾರೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಂಜುನಾಥ್ ಪ್ರಸನ್ನ, ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಎಚ್.ಪಿ. ನಿರ್ಮಲಾ, ರಾಮಸಮುದ್ರ ಸುರೇಶ್, ನಾಗರಾಜ್ ಇತರರು ಹಾಜರಿದ್ದರು.

ದಸರಾ ರೂವಾರಿಗಳು...



ಅಂಬಾರಿ ಆನೆ ಅಭಿಮನ್ಯುವನ್ನು 1970ರಲ್ಲಿ ಕೊಡಗು ಜಿಲ್ಲೆಯ ಹೆಬ್ಬಳ್ಳ ಅರಣ್ಯ ಪ್ರದೇಶದಲ್ಲಿ ಸೆರೆಹಿಡಿಯಲಾಗಿದ್ದು, ಈತನ ವಿಶೇಷ ಗುಣವೆಂದರೆ ಕಾಡಾನೆಗಳನ್ನು ಸೆರೆ ಹಿಡಿಯುವ, ಪಳಗಿಸುವ ಮತ್ತು ಚಿಕಿತ್ಸೆ ನೀಡುವ ಕೆಲಸದಲ್ಲಿ ಭಾರೀ ಸಾಮರ್ಥ್ಯವನ್ನು ಹೊಂದಿದ್ದಾನೆ. ಸುಮಾರು 140ರಿಂದ 150 ಕಾಡಾನೆಗಳನ್ನು ಮತ್ತು 40ರಿಂದ 50 ಹುಲಿಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಯಲ್ಲಿ ಯಶಸ್ವಿಯಾಗಿ ಪಾಲ್ಗೊಂಡಿದ್ದಾನೆ. 2012ರಿಂದ ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದು, 2015ರವರೆಗೂ ನಾಡಹಬ್ಬ ಮೈಸೂರು ದಸರಾದಲ್ಲಿ ವಾದ್ಯಗೋಷ್ಠಿಯವರು ಕುಳಿತುಕೊಳ್ಳುವ ಗಾಡಿಯನ್ನು ಎಳೆಯುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದ. ಕಳೆದ ನಾಲ್ಕು ವರ್ಷಗಳಿಂದ ಚಿನ್ನದ ಅಂಬಾರಿಯನ್ನು ಹೊರುವ ಜವಾಬ್ದಾರಿಯುತ ಕೆಲಸವನ್ನು ನಿರ್ವಹಿಸುತ್ತಿದ್ದಾನೆ.

ವರ್ಷ: 58, ಎತ್ತರ 2.74 ಮೀ., ತೂಕ: 5560 ಕೆಜಿ, ಶಿಬಿರ: ಮತ್ತಿಗೋಡು ಆನೆ ಶಿಬಿರ

ಇವನ ಉಸ್ತುವಾರಿಗಳು






ತಾಯಿ ಆನೆಯಿಂದ ಬೇರ್ಪಟ್ಟ ಲಕ್ಷ್ಮಿಯನ್ನು 2002ರಿಂದ ಇಲಾಖಾ ಆನೆ ಶಿಬಿರದಲ್ಲಿ ಆರೈಕೆ ಮಾಡಲಾಗುತ್ತಿದೆ. ಕಳೆದ ಮೂರು ವರ್ಷಗಳಿಂದ ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದಾಳೆ.

ವರ್ಷ: 23, ಎತ್ತರ: 2.32, ತೂಕ: 2480, ಶಿಬಿರ: ರಾಮಪುರ ಆನೆ ಶಿಬಿರ

ಈಕೆಯ ಉಸ್ತುವಾರಿಗಳು






ವರಲಕ್ಷ್ಮಿಯನ್ನು 1977ರಲ್ಲಿ ಕಾಕನಕೋಟೆ ಅರಣ್ಯ ಪ್ರದೇಶದಲ್ಲಿ ಸೆರೆಹಿಡಿಯಲಾಗಿತ್ತು. 9 ಬಾರಿ ಅಂಬಾರಿ ಆನೆಯ ಜೊತೆ ಕುಮ್ಕಿ ಆನೆಯಾಗಿ ದಸರಾ ಮಹೋತ್ಸವದಲ್ಲಿ ಭಾಗವಹಿಸಿದ್ದು, ಈ ಬಾರಿಯೂ ಸಹ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದೆ.

ವರ್ಷ: 68, ಎತ್ತರ: 2.36 ಮೀ. ತೂಕ: 3495, ಶಿಬಿರ: ಭೀಮನಕಟ್ಟೆ ಆನೆ ಶಿಬಿರ

ಈಕೆಯ ಉಸ್ತುವಾರಿಗಳು






ಧನಂಜಯನನ್ನು 2013ರಲ್ಲಿ ಹಾಸನ ಜಿಲ್ಲೆಯ ಯಸಳೂರು ಅರಣ್ಯವಲಯ ವ್ಯಾಪ್ತಿ ಯಲ್ಲಿ ಸೆರೆಹಿಡಿಯಲಾಗಿತ್ತು. ಯಶಸ್ವಿಯಾಗಿ ಕಾಡಾನೆ ಮತ್ತು ಹುಲಿಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾನೆ. ಕಳೆದ ಆರು ವರ್ಷಗಳಿಂದ ದಸರಾ ಮಹೋತ್ಸವದಲ್ಲಿ ಪಟ್ಟದ ಆನೆಯಾಗಿ ಪಾಲ್ಗೊಳ್ಳುತ್ತಿದ್ದಾನೆ.

ವರ್ಷ: 44, ಎತ್ತರ: 2.80ಮೀ. ತೂಕ: 5155, ಶಿಬಿರ: ದುಬಾರೆ ಆನೆ ಶಿಬಿರ

ಈತನ ಉಸ್ತುವಾರಿಗಳು





ಮಹೇಂದ್ರನನ್ನು 2018ರಲ್ಲಿ ರಾಮನಗರ ಅರಣ್ಯ ಪ್ರದೇಶದಲ್ಲಿ ಸೆರೆಹಿಡಿಯಲಾಗಿತ್ತು. ಕಾಡಾನೆ ಮತ್ತು ಹುಲಿಗಳ ಸೆರೆಹಿಡಿಯುವ ಕಾರ್ಯಾಚರಣೆಯಲ್ಲಿ ಭಾಗವಹಿಸುತ್ತಾ ಬಂದಿದ್ದಾನೆ. ಕಳೆದ 2 ವರ್ಷಗಳಿಂದ ಶ್ರೀರಂಗಪಟ್ಟಣ ಗ್ರಾಮೀಣ ದಸರಾ ಮಹೋತ್ಸವದಲ್ಲಿ ಅಂಬಾರಿ ಆನೆಯಾಗಿ ಭಾಗಿಯಾಗಿದ್ದ. ಈ ಬಾರಿಯೂ ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದಾನೆ.

ವರ್ಷ: 41, ಎತ್ತರ: 2.75 ಮೀ. ತೂಕ:4600, ಶಿಬಿರ: ಮತ್ತಿಗೋಡು ಆನೆ ಶಿಬಿರ

ಇವನ ಉಸ್ತುವಾರಿಗಳು






ಭೀಮನನ್ನು 2000ರಲ್ಲಿ ಭೀಮನಕಟ್ಟೆ ಅರಣ್ಯ ಪ್ರದೇಶದಲ್ಲಿ ಸೆರೆಹಿಡಿದಿದ್ದು, ಕಾಡಾನೆ ಮತ್ತು ಹುಲಿಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಯಲ್ಲಿ ಬಳಸಲಾಗುತ್ತಿದೆ. 2017ನೇ ಸಾಲಿನ ದಸರಾ ಮಹೋತ್ಸವದಲ್ಲಿ ಸಾಲಾನೆಯಾಗಿ ಹಾಗೂ 2022ರಿಂದ ಪಟ್ಟದಾನೆಂಯಾಗಿ ಪಾಲ್ಗೊಂಡಿದ್ದಾನೆ. ಈ ಬಾರಿ ಸಹ ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದಾನೆ.

ವರ್ಷ 24, ಎತ್ತರ: 2.85ಮೀ. ತೂಕ: 4945, ಶಿಬಿರ: ಮತ್ತಿಗೋಡು ಆನೆ ಶಿಬಿರ

ಇವನ ಉಸ್ತುವಾರಿಗಳು






ಗೋಪಿಯನ್ನು 1993ರಲ್ಲಿ ಕಾರೇಕೊಪ್ಪ ಅರಣ್ಯ ಪ್ರದೇಶದಲ್ಲಿ ಸೆರೆಹಿಡಿಯಲಾಗಿತ್ತು. ಈತ ದುಬಾರೆ ಆನೆ ಶಿಬಿರದಲ್ಲಿದ್ದು, 13 ವರ್ಷಗಳಿಂದ ದಸರಾ ಮಹೋತ್ಸವದಲ್ಲಿ ಯಶಸ್ವಿಯಾಗಿ ಭಾಗವಹಿಸಿದ್ದಾನೆ. 2015ರಿಂದ ಪಟ್ಟದ ಆನೆಯಾಗಿ ಅರಮನೆ ಪೂಜಾ ವಿಧಿ-ವಿಧಾನಗಳಲ್ಲಿ ಪಾಲ್ಗೊಳ್ಳುತ್ತಿದ್ದಾನೆ.

ವರ್ಷ 42, ಎತ್ತರ: 2.86ಮೀ. ತೂಕ: 4970, ಶಿಬಿರ: ದುಬಾರೆ ಆನೆ ಶಿಬಿರ

ಇವನ ಉಸ್ತುವಾರಿಗಳು






ಸುಗ್ರೀವನನ್ನು 2016ರಲ್ಲಿ ಕೊಡಗಿನ ಕುಶಾಲನಗರ ಅರಣ್ಯ ಪ್ರದೇಶದಲ್ಲಿ ಸೆರೆಹಿಡಿಯಲಾಗಿತ್ತು. ಪ್ರಸ್ತುತ ಆರೋಗ್ಯವಾಗಿದ್ದಾನೆ. ಕಳೆದ ಎರಡು ಬಾರಿ ದಸರಾ ಮಹೋತ್ಸವದಲ್ಲಿ ಭಾಗವಹಿಸಿದ್ದು, ಈ ಬಾರಿಯೂ ಪಾಲ್ಗೊಳ್ಳುತ್ತಿದ್ದಾನೆ.

ವರ್ಷ: 42, ಎತ್ತರ: 2.77ಮೀ. ತೂಕ: 5000, ಶಿಬಿರ: ದುಬಾರೆ ಆನೆ ಶಿಬಿರ

ಇವನ ಉಸ್ತುವಾರಿಗಳು





ಪ್ರಶಾಂತನನ್ನು 1993ರಲ್ಲಿ ಕಾರೇಕೊಪ್ಪ ಅರಣ್ಯ ಪ್ರದೇಶದಲ್ಲಿ ಸೆರೆಹಿಡಿಯಲಾಗಿದ್ದು, ಹುಲಿ ಮತ್ತು ಆನೆ ಸೆರೆಹಿಡಿಯುವ ಕಾರ್ಯಾಚರಣೆಯಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದಾನೆ. ಕಳೆದ 14 ವರ್ಷದಿಂದ ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದಾನೆ.

ವರ್ಷ: 51, ಎತ್ತರ: 3.00 ಮೀ. ತೂಕ: 4900, ಶಿಬಿರ: ದುಬಾರೆ ಆನೆ ಶಿಬಿರ

ಇವನ ಉಸ್ತುವಾರಿಗಳು






ಕಂಜನ್‌ನನ್ನು 2014ರಲ್ಲಿ ಹಾಸನ ಜಿಲ್ಲೆಯ ಯಸಳೂರು ಅರಣ್ಯ ಪ್ರದೇಶದಲ್ಲಿ ಸೆರೆಹಿಡಿಯಲಾಗಿತ್ತು. ಈಗ ಆರೋಗ್ಯವಾಗಿದ್ದು, ಹುಲಿ ಮತ್ತು ಆನೆ ಸರೆಹಿಡಿಯುವ ಕಾರ್ಯಾಚರಣೆಯಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದಾನೆ. ಈಗ ಎರಡನೇ ಬಾರಿ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದಾನೆ.

ವರ್ಷ: 25, ಎತ್ತರ: 2.62ಮೀ. ತೂಕ: 4515, ಶಿಬಿರ: ದುಬಾರೆ ಆನೆ ಶಿಬಿರ

ಇವನ ಉಸ್ತುವಾರಿಗಳು






ರೋಹಿತ್, 2001ರಲ್ಲಿ ಹೆಡಿಯಾಲ ಅರಣ್ಯ ಪ್ರದೇಶದಲ್ಲಿ ಆರು ತಿಂಗಳ ಮರಿಯಾಗಿದ್ದಾಗ ಸಿಕ್ಕಿದ್ದ. ಪ್ರಸ್ತುತ ಆರೋಗ್ಯವಾಗಿದ್ದು, ಕಳೆದ ಸಾಲಿನಿಂದ ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದಾನೆ.

ವರ್ಷ: 22, ಎತ್ತರ: 2.70ಮೀ. ತೂಕ: 3625, ಶಿಬಿರ: ರಾಮಪುರ ಆನೆ ಶಿಬಿರ

ಇವನ ಉಸ್ತುವಾರಿಗಳು






ಹಿರಣ್ಯಳನ್ನು 2021ರಲ್ಲಿ ಕೊಡಗಿನ ಆನೆ ಮನೆ ಫೌಂಡೇಶನ್ ಇವರಿಂದ ಇಲಾಖಾ ವಶಕ್ಕೆ ಪಡೆದಿದ್ದು, ರಾಮಪುರ ಆನೆ ಶಿಬಿರದಲ್ಲಿ ನೆಲೆಸಿದ್ದಾಳೆ. ಕಳೆದ ಸಾಲಿನಿಂದ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದಾಳೆ.

ವರ್ಷ: 47, ಎತ್ತರ: 2.50ಮೀ. ತೂಕ: 3000, ಶಿಬಿರ: ರಾಮಪುರ ಆನೆ ಶಿಬಿರ

ಇವನ ಉಸ್ತುವಾರಿಗಳು






ದೊಡ್ಡ ಹರವೆ ಲಕ್ಷ್ಮಿ, ದೊಡ್ಡಹರವೆ ಆನೆ ಶಿಬಿರದಲ್ಲಿದ್ದು, ಕಳೆದ ಎರಡು ವರ್ಷಗಳಿಂದ ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದಾಳೆ.

ವರ್ಷ 53, ಎತ್ತರ: 2.52, ತೂಕ: 3500, ಶಿಬಿರ: ದೊಡ್ಡಹರವೆ ಆನೆ ಶಿಬಿರ

ಈಕೆಯ ಉಸ್ತುವಾರಿಗಳು






ಏಕಲವ್ಯನನ್ನು 2022ರಲ್ಲಿ ಮೂಡಿಗೆರೆ ಅರಣ್ಯ ಪ್ರದೇಶದಲ್ಲಿ ಸೆರೆಹಿಡಿಯಲಾಗಿತ್ತು. ಈತ ವಾಹನ ಹಾಗೂ ಪಟಾಕಿಗಳ ಶಬ್ದಗಳಿಗೆ ಅಂಜುವುದಿಲ್ಲ. ಮೊದಲನೇ ಬಾರಿ ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದಾನೆ.

ವರ್ಷ: 39, ಎತ್ತರ: 2.88ಮೀ. ತೂಕ:4730, ಶಿಬಿರ: ಮತ್ತಿಗೋಡು ಆನೆ ಶಿಬಿರ

ಈತನ ಉಸ್ತುವಾರಿಗಳು





ವಾರಭವಿಷ್ಯ

25.8.2024 ರಿಂದ 31.8.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಸಿಂಹ, ಚಂದ್ರ-ಮೇಷ, ವೃಷಭ, ಮಿಥುನ, ಕಟಕ, ಕುಜ-ಮಿಥುನ, ಬುಧ-ಕಟಕ, ಗುರು-ವೃಷಭ, ಶುಕ್ರ-ಕನ್ಯಾ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ನೀವು ಇಷ್ಟಪಟ್ಟಿದ್ದನ್ನು ಅವಿರತವಾಗಿ ಶ್ರಮಿಸಿ ಪಡೆಯುವಿರಿ. ಹಣಕಾಸಿನ ಪರಿಸ್ಥಿತಿ ಸುಧಾರಿಸುವುದು. ಹಳೆಯ ಗೆಳೆಯರ ಭೇಟಿಯಿಂದ ಹರ್ಷಿತರಾಗುವಿರಿ. ಪರಿವಾರದಲ್ಲಿ ಶುಭ ಕಾರ್ಯಗಳು ಜರುಗುವುದು. ರಜತ, ಸುವರ್ಣ ವ್ಯಾಪಾರಿಗಳಿಗೆ ಅಧಿಕ ವ್ಯಾಪಾರವಾಗುವುದು. ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ದೊಡ್ಡ ಗಿರಾಕಿಗಳು ದೊರೆಯುವರು. ಎಲ್ಲಿಯೂ ದುಡುಕಿ ಮಾತನಾಡದಿರಿ.

ಶ್ರೀ ಸುಬ್ರಮಣ್ಯ ಪೂಜೆ. ಶುಭ ಸಂಖ್ಯೆ-2

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಈ ವಾರದಲ್ಲಿ ಶುಭಗ್ರಹ ಚಂದ್ರನ ಶುಭ ಸಂಚಾರದ ಫಲವಾಗಿ ನಿಮ್ಮ ಮನೋವಾಂಛಿತ ಕೆಲಸಕಾರ್ಯಗಳು ಸುಗಮವಾಗಿ ಸಾಗುವುದು. ಒಳ್ಳೆಯ ಜನರ ಸಹವಾಸದಿಂದ ನಿಮ್ಮ ಗೌರವ ಹೆಚ್ಚುವುದು. ಚೆಲುವೆಯರ ಒಡನಾಟದಿಂದ ಮನಸ್ಸು ಪುಳಕಿತವಾಗಲಿದೆ. ಮಾಡುವ ಕೆಲಸದಲ್ಲಿ ಪ್ರಾಮಾಣಿಕತೆ ಇರಲಿ. ಅದರ ಫಲ ದೀರ್ಘಕಾಲ ಉಳಿಯುವುದು. ಎಲ್ಲರನ್ನೂ ಸಾರಾಸಗಟಾಗಿ ನಂಬಬೇಡಿ.

ಶ್ರೀದೇವಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-3

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಕೈಗೆತ್ತಿಕೊಂಡ ಕೆಲಸಗಳಲ್ಲಿ ಉಂಟಾಗಿದ್ದ ಅಡೆತಡೆಗಳು ನಿವಾರಣೆ ಆಗುತ್ತದೆ. ಪ್ರತಿಷ್ಠಿತ ವ್ಯಕ್ತಿಗಳ ಪರಿಚಯವಾಗುತ್ತದೆ. ಕುಟುಂಬ ಸದಸ್ಯರೊಂದಿಗೆ ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿರಿ. ಸಣ್ಣ ಕೈಗಾರಿಕೆಗಳಿಗೆ ಅನುಕೂಲಕರ ಸನ್ನಿವೇಶವಿದೆ. ವಾರದ ಕಡೆಗೆ ಖರ್ಚು-ವೆಚ್ಚಗಳು ಹೆಚ್ಚಾಗುತ್ತವೆ. ಸಾಲದ ಸಮಸ್ಯೆ ಕಾಡುವುದು. ದೇಹ ಸ್ವಾಸ್ಥ್ಯ ಕೆಡಬಹುದು.

ಶ್ರೀ ಸತ್ಯನಾರಾಯಣ ಸೇವೆ. ಶುಭ ಸಂಖ್ಯೆ-7

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ನಿಮ್ಮ ರಾಶ್ಯಾಧಿಪತಿ ಚಂದ್ರನ ನಡೆ ನಿಮ್ಮ ಸಕಲ ಕೌಟುಂಬಿಕ, ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ಪೂರಕ ಶಕ್ತಿಯನ್ನು ತುಂಬಲಿದೆ. ಗೃಹ ನಿರ್ಮಾಣ ಕಾರ್ಯದಲ್ಲಿ ಉಂಟಾಗಿದ್ದ ಸಮಸ್ಯೆ ಬಗೆಹರಿಯುವುದು. ಹೊಸ ವ್ಯಾಪಾರ ಒಪ್ಪಂದಗಳು ನಿಮಗೆ ಆರ್ಥಿಕ ಲಾಭವನ್ನು ತಂದುಕೊಡುವುದು. ದೂರದ ಬಂಧುಗಳಿಂದ ಒಳ್ಳೆಯ ಸುದ್ದಿ ಬರಲಿದೆ. ಕುಟುಂಬದ ಹಿರಿಯರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ.

ಶ್ರೀ ತ್ರಿಪುರಸುಂದರಿ ದರ್ಶನ. ಶುಭ ಸಂಖ್ಯೆ-6

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಈ ವಾರ ನಿಮಗೆ ಮಿಶ್ರ ಫಲದ ವಾರ. 'ಬಂದದ್ದೆಲ್ಲಾ ಬರಲಿ ಗೋವಿಂದನ ದಯೆ ಇರಲಿ' ಎಂದು ಮುಂದೆ ಸಾಗಿ. ಪರಿಸ್ಥಿತಿ ಕ್ರಮೇಣ ಸುಧಾರಿಸುವುದು. ಕುಟುಂಬ ಸದಸ್ಯರೊಂದಿಗೆ ಪುಣ್ಯಕ್ಷೇತ್ರ ಸಂದರ್ಶನ. ವಾರದ ದ್ವಿತೀಯಾರ್ಧ ಹಣಕಾಸಿನ ಪರಿಸ್ಥಿತಿಯಲ್ಲಿ ಚೇತರಿಕೆಯನ್ನು ಕಾಣುವಿರಿ. ಮಕ್ಕಳ ಶಿಕ್ಷಣದ ವಿಷಯದಲ್ಲಿ ಶುಭ ಸುದ್ದಿ ಬರುವುದು. ಆರೋಗ್ಯ ಸಮಸ್ಯೆ ಕಾಡಬಹುದು.

ಶ್ರೀನವಗ್ರಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-9

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ನಿಮ್ಮ ಸ್ವಂತ ಬುದ್ಧಿ ಈ ವಾರದಲ್ಲಿ ಚೆನ್ನಾಗಿ ಕೆಲಸ ಮಾಡುವುದು. ನಿಮ್ಮ ರಾಶ್ಯಾಧಿಪತಿ ಬುಧ ಕರ್ಮಭಾವದಲ್ಲಿ ಸಂಚರಿಸುತ್ತಿದ್ದು ಕೈ ಹಾಕಿ ಮಹತ್ವದ ಕೆಲಸ ಕಾರ್ಯಗಳು ಚುರುಕಾಗಿ ನಡೆಯುವುದು. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗಲಿದೆ. ನೂತನ ವಸ್ತ್ರಾಭರಣಗಳನ್ನು ಕೊಳ್ಳುವಿರಿ. ಉತ್ತಮ ಗೆಳೆಯರಿಂದ ಎತ್ತಹೋದರೂ ಶುಭವೇ ಯಂತ್ರ, ಅಗ್ನಿ ಅವಘಡಗಳಿಂದ ಎಚ್ಚರವಾಗಿರಿ.

ಶ್ರೀವಿಷ್ಣು ಅರ್ಚನೆ. ಶುಭ ಸಂಖ್ಯೆ-4

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದಾರಂಭ ಆಶಾದಾಯಕವಾಗಿದೆ. ಉದ್ಯೋಗಿಗಳು ಹಿರಿಯ ಅಧಿಕಾರಿಗಳೊಂದಿಗೆ ವಿವಾದಗಳನ್ನು ಬಗೆಹರಿಸಿಕೊಳ್ಳುವುದು ಕ್ಷೇಮ 'ದಂತ ಹೋದರೂ ಪಂಥ ಬಿಡೆ' ಎಂಬ ಹಠಬೇಡ. ಹೊಸ ಯೋಜನೆಗಳನ್ನು ಪ್ರಾರಂಭಿಸುವ ಮುನ್ನ ತಜ್ಞರ ಸಲಹೆ ಪಡೆಯಿರಿ. ವ್ಯಾಪಾರಿಗಳಿಗೆ ಸಾಮಾನ್ಯವಾದ ಲಾಭ. ವಾಹನ ರಿಪೇರಿ ಖರ್ಚುಗಳು ಎದುರಾಗುವುದು. ವಾರಾಂತ್ಯಕ್ಕೆ ನಿಮ್ಮ ಪ್ರತಿಜ್ಞೆ ಪಾಲನೆ ಮಾಡುವಿರಿ.

ಶ್ರೀ ದೇವಿ ಉಪಾಸನೆ. ಶುಭ ಸಂಖ್ಯೆ-5

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ವಾರದ ಆದಿಗೆ ವ್ಯಾಪಾರ, ವ್ಯವಹಾರಗಳು ಉತ್ತಮವಾಗಿ ನಡೆದು ಹೆಚ್ಚಿನ ಧನಲಾಭವಾಗುವುದು. ನಿಮ್ಮ ಅದ್ಭುತ ಕ್ರಿಯಾಶಕ್ತಿ ಗುರುಬಲದ ಪ್ರಭಾವದಿಂದ ದುಪ್ಪಟವಾಗಲಿದೆ. ಶಿಕ್ಷಣಾರ್ಥಿಗಳಿಗೆ ವಿದ್ಯೆಯಲ್ಲಿ ಪ್ರಾವೀಣ್ಯತೆ ದೊರೆತು ಪ್ರಶಸ್ತಿ ಬಹುಮಾನಗಳಿಗೆ ಭಾಜನರಾಗುವರು. ಆಸ್ತಿ, ಸಂಪತ್ತು ಗಳಿಸುವ ಅವಕಾಶವಿದೆ. ಬ್ಯಾಂಕ್ ಸಾಲಕ್ಕೆ ಪ್ರಯತ್ನಿಸಬಹುದು. ನಿಮ್ಮ ಆರೋಗ್ಯದ ಬಗ್ಗೆ ಅಲಕ್ಷ್ಯ ಬೇಡ.

ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ-8

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ನಿಮ್ಮ ಗುಪ್ತ ವಿಚಾರಗಳು ಸಾರ್ವಜನಿಕವಾಗುವುದರಿಂದ ನಿಮ್ಮ ಗೌರವಕ್ಕೆ ಧಕ್ಕೆ ಆಗುವುದು. ಪ್ರಯಾಣ ಸಮಯದಲ್ಲಿ ಕಳ್ಳಕಾಕರಿಂದ ತೊಂದರೆ ಉಂಟಾದೀತು. ನಿಮ್ಮ ಯೋಜನೆಗಳು ಸಕಾಲದಲ್ಲಿ ಪೂರ್ಣಗೊಳ್ಳದೆ ವ್ಯಾಕುಲಗೊಳ್ಳುವಿರಿ. ವಾರದ ದ್ವಿತೀಯಾರ್ಧಕ್ಕೆ ಸುಖ-ಸಂತೋಷ ಬಯಸುವಿರಾದರೆ ಅಡ್ಡ ಮಾರ್ಗಗಳನ್ನು ಹಿಡಿಯಬೇಡಿ. ಹೊಸ ಉದ್ಯೋಗ ದೊರೆಯುವ ಸಾಧ್ಯತೆ ಇದೆ.

ಶ್ರೀದತ್ತಾತ್ರೇಯ ಸ್ತುತಿ. ಶುಭ ಸಂಖ್ಯೆ-1

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಜೀವನದ ಪ್ರಮುಖ ವಿಷಯಗಳಿಗೆ ವಿದ್ವಾಂಸ ವ್ಯಕ್ತಿಗಳಿಂದ ಮಹತ್ವದ ಸಲಹೆ ದೊರಕುತ್ತದೆ. ಹಠಾತ್ ಧನಲಾಭ ಹೊಂದುವ ಅವಕಾಶವಿದೆ. ಹಲವು ಯುವಕ-ಯುವತಿಯರಿಗೆ ವಿವಾಹ ಜೀವನದ ಬೆಸುಗೆ ಉಂಟಾಗಲಿದೆ. ಶ್ರೀ ಶನಿದೇವರ ಪ್ರಭಾವವೂ ಇರುವುದರಿಂದ ನಂಬಲು ಅರ್ಹರಲ್ಲದವರೊಡನೆ ಹಣಕಾಸಿನ ವ್ಯವಹಾರ ಮಾಡದಿರಿ. ವಾಹನ ಡ್ರೈವಿಂಗ್ ಮೋಜಿಗಲ್ಲ. ಗುರಿಮುಟ್ಟಲು ಎಂಬ ಅರಿವಿರಲಿ.

ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-5

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ನಂಬಿ ಕೆಟ್ಟವರಿಲ್ಲವೋ ಹರಿಯ, ನಂಬದವರು ಕೆಟ್ಟರೆ ಕೆಡಲಿ ಬಿಡು' ಎಂಬ ದಾಸರ ಪದದಂತೆ ಮುಂದೆ ಸಾಗಿ. ನಿಮ್ಮ ಸಾಮಾಜಿಕ ಜೀವನದಲ್ಲಿ ಪ್ರತಿಸ್ಪರ್ಧಿಗಳು ಅಡಚಣೆಗಳನ್ನು ಉಂಟು ಮಾಡುವರು. ವಾರ ಮಧ್ಯಾನಂತರ ಶುಭ ಚಂದ್ರನಿಂದ ಕೆಲವೊಂದು ಸಂತಸದ ಘಟನೆಗಳು ನಡೆಯುವುದು. ಬಂಧು-ಬಾಂಧವರೊಡನೆ ಸಂತೋಷ ಕೂಟಗಳಲ್ಲಿ ಭಾಗವಹಿಸುವರು. ಪುಣ್ಯ ಕ್ಷೇತ್ರ ಭೇಟಿಯಿಂದ ಮನಸ್ಸಿನ ಭಾರ ಕಡಿಮೆಯಾಗುವುದು. ಶ್ರೀ ಮಹಾಸುದರ್ಶನ ಮಂತ್ರ ಜಪಿಸಿ. ಶುಭ ಸಂಖ್ಯೆ-2

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಈ ವಾರ ತಾಳ್ಮೆಯಿಂದ ನಿಮ್ಮ ವೈಯಕ್ತಿಕ ಹಾಗೂ ಸಾಮಾಜಿಕ ಕೆಲಸಗಳನ್ನು ಸಂಪನ್ನಗೊಳಿಸಿಕೊಳ್ಳಿ. ಐಹಿಕ ಸುಖ ಭೋಗಗಳು ನಿಮ್ಮನ್ನು ಅರಸಿ ಬರಲಿದೆ. ರಾಜಕೀಯ ರಂಗದವರಿಗೆ ನ್ಯಾಯಾಲಯದ ವಿಷಯಗಳಲ್ಲಿ ಹಿನ್ನಡೆ ಉಂಟಾಗುವುದು. ಪಾರ್ಟನರ್ ವ್ಯಾಪಾರದಲ್ಲಿ ಮೋಸ ಹೋಗುವ ಸಾಧ್ಯತೆ ಇರುತ್ತದೆ. ವಾರಾಂತ್ಯಕ್ಕೆ ಖರ್ಚು-ವೆಚ್ಚಗಳು ಹೆಚ್ಚಾಗಿ ಸಾಲ ಮಾಡಬೇಕಾದೀತು.

ಶ್ರೀ ಶನ್ಯಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ -4

ತಂದೆ ಕನಸಿನಂತೆ ಸಿಇಟಿ, ನೀಟ್ ಕೇಂದ್ರ ಪ್ರಾರಂಭ

ಶಾಸಕ ದರ್ಶನ್



ಕಾರ್ಯಕ್ರಮವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ನಂಜನಗೂಡು, ಆ.24– ನನ್ನ ತಂದೆ ದಿ.ಆರ್.ಧ್ರುವನಾರಾಯಣ್ ಅವರಿಗೆ ಗ್ರಾಮೀಣ ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಿಸಿ, ತರಬೇತಿ ಕೇಂದ್ರ ತೆರೆದು ಶಿಕ್ಷಣ ನೀಡಬೇಕೆಂಬ ಕನಸಿತ್ತು. ಅದನ್ನು ನನಸು ಮಾಡಲು ನಮ್ಮ ಕುಟುಂಬದಿಂದ ಸಿಇಟಿ, ನೀಟ್ ತರಬೇತಿ ಕೇಂದ್ರ ತೆರೆಯಲಾಗಿದೆ. ವಿದ್ಯಾರ್ಥಿಗಳು ಸದುಪಯೋಗ ಪಡೆದು ಜೀವನ ರೂಪಿಸಿಕೊಳ್ಳಿ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಆರ್.ಧ್ರುವನಾರಾಯಣ್ ಎಜುಕೇಷನಲ್ ಟ್ರಸ್ಟ್ ವತಿಯಿಂದ ನಡೆದ ಸಿಇಟಿ, ನೀಟ್ ಉಚಿತ ತರಬೇತಿ ಉದ್ಘಾಟನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಭೆ ಯಾರ ಸ್ವತ್ತಲ್ಲ. ಜೊತೆಗೆ ಯಾರು ಕನಿಷ್ಠರೂ ಅಲ್ಲ ಉತ್ತಮರೂ ಅಲ್ಲ. ಕಠಿಣ ಶ್ರಮ ವ್ಯಕ್ತಿಯನ್ನು ಪ್ರತಿಭಾವಂತನನ್ನಾಗಿ ಮಾಡುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಸಮಯಕ್ಕೆ ಬೆಲೆ ಕೊಟ್ಟು ವ್ಯಾಸಂಗದಲ್ಲಿ ತೊಡಗಬೇಕು. ವ್ಯಕ್ತಿಯ ಸಮಗ್ರ ಅಭಿವೃದ್ಧಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆ ಕೂಡ ಅವಶ್ಯಕ. ಆದ್ದರಿಂದ ನೀವು ಪಠ್ಯದ ಜೊತೆಗೆ ಕ್ರೀಡೆ, ಸಂಗೀತ, ಮತ್ತಿತರ ಪಠ್ಯೇತರ ವಿಷಯಗಳಲ್ಲೂ ತೊಡಗಿಸಿಕೊಳ್ಳಬೇಕು. ನನಗೆ ನನ್ನ ತಂದೆ–ತಾಯಿ ನನ್ನ ಶಿಕ್ಷಣ ಮತ್ತು ಧೈರ್ಯದ ಹಿಂದೆ ಇದ್ದ ಪ್ರೇರಣಾ ಶಕ್ತಿ. ಆದ್ದರಿಂದ ನಿಮ್ಮ ತಂದೆ ತಾಯಿ ಮಾತನ್ನು ತಳ್ಳಿ ಹಾಕದೆ ಅವರ ಮಾತಿಗೆ ಬೆಲೆ ಕೊಡಬೇಕು. ನಿಮ್ಮ ಮೇಲೆ ಅವರು ಸಾಕಷ್ಟು ಕನಸುಗಳನ್ನು ಹೊತ್ತಿರುತ್ತಾರೆ. ಅವರ ಕನಸಿಗೆ ಚ್ಯುತಿ ಬಾರದಂತೆ ನಡೆದುಕೊಂಡು ಕಠಿಣ ಪರಿಶ್ರಮದಿಂದ ವ್ಯಾಸಂಗದಲ್ಲಿ ತೊಡಗಿ ನಿಮ್ಮ ತಂದೆ ತಾಯಿ ಕನಸನ್ನು ನನಸು ಮಾಡಿ ಎಂದು ಕಿವಿಮಾತು ಹೇಳಿದರು.

ಮೈಸೂರಿನ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಮುಖ್ಯಸ್ಥೆ ಡಾ.ಕೆಆರ್.ದಾಕ್ಷಾಯಿಣಿ ಮಾತನಾಡಿ, ಕನ್ನಡ ಭಾಷೆಯಲ್ಲಿ ವ್ಯಾಸಂಗ ಮಾಡಿದವರು ವೈದ್ಯಕೀಯ ಶಿಕ್ಷಣಕ್ಕೆ ಬರಬಹುದು. ನಮಗೆ ಇಂಗ್ಲಿಷ್ ಭಾಷೆ ಬರುವುದಿಲ್ಲ. ಆದ್ದರಿಂದ ನಾವು ವೈದ್ಯಕೀಯ ಶಿಕ್ಷಣ ಪಡೆಯಲು ಸಾಧ್ಯವಿಲ್ಲ ಎಂದು ಎದೆಗುಂದ ಬೇಕಿಲ್ಲ. ವೈದ್ಯಕೀಯ ವೃತ್ತಿಯಲ್ಲಿ ಮುಖ್ಯವಾಗಿ ಕಠಿಣ ಶ್ರಮ, ಶಿಸ್ತು, ತಲ್ಲೀನತೆಯಿಂದ ಯೋಜನಾ ಬದ್ಧವಾಗಿ ವ್ಯಾಸಂಗ ಮಾಡಿದಲ್ಲಿ ಯಶಸ್ವಿಯಾಗಬಹುದು. ಮುಖ್ಯವಾಗಿ ವೈದ್ಯಕೀಯ ಶಿಕ್ಷಣಕ್ಕೆ ಕನ್ನಡ ಭಾಷೆಯಲ್ಲಿ ಓದಿದವರೇ, ಹೆಚ್ಚಾಗಿ ಕುಗ್ರಾಮದಿಂದ ಬಂದವರೇ ಹೆಚ್ಚಾಗಿದ್ದಾರೆ. ಆದ್ದರಿಂದ ನೀವು ಕೂಡ ಸಿಇಟಿ ಮತ್ತು ನೀಟ್ ಪರೀಕ್ಷೆಗಳಲ್ಲಿ ಒಮ್ಮೆ ಯಶಸ್ವಿಯಾಗದಿದ್ದರೂ ಸಹ ಈ ವೇದಿಕೆ ಸದುಪಯೋಗಪಡಿಸಿಕೊಂಡು ಮತ್ತೊಮ್ಮೆ ಪ್ರಯತ್ನ ನಡೆಸಿ ಯಶಸ್ವಿಯಾಗಿ ಎಂದು ಕರೆ ನೀಡಿದರು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವ ಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ವಾಲ್ಮೀಕಿ ನಿಗಮ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಪ್ರಥಮ ದರ್ಜೆ ಗುತ್ತಿಗೆದಾರರಾದ ಯು.ಎನ್.ಪದ್ಮನಾಭರಾವ್, ಆರ್.ಧ್ರುವನಾರಾಯಣ್ ಎಜುಕೇಷನಲ್ ಟ್ರಸ್ಟ್‌ನ ಧೀರನ್, ರೂಪ, ನಿಕಿತಾ, ಆರ್‌ವಿ ಲರ್ನಿಂಗ್ ಹಬ್ ನಿರ್ದೇಶಕ ಮಯೂರ್ ಗೋಯಲ್, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ತಾಪಂ ಮಾಜಿ ಸದಸ್ಯ ಬಿ.ಎಂ.ನಾಗೇಶ್‌ರಾಜ್, ಮುಖಂಡರಾದ ಕುಳ್ಳಯ್ಯ, ಶ್ರೀನಿವಾಸ ಮೂರ್ತಿ, ರಾಜೇಶ್, ದೊರೆಸ್ವಾಮಿ, ನಾಗರಾಜಯ್ಯ, ಕೆಪಿಸಿಸಿ ಸದಸ್ಯ ಅಕ್ಬರ್ ಅಲೀಂ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಸೇರಿದಂತೆ ಹಲವರಿದ್ದರು.

> ನನ್ನ ತಂದೆ ಆರ್.ಧ್ರುವನಾರಾಯಣ್ ಅವರು ಈ ಭಾಗದಲ್ಲಿ 2 ಬಾರಿ ಸಂಸದರಾಗಿ, ಶಾಸಕರಾಗಿ ಹಲವು ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ನನ್ನ ತಂದೆ ಅವರಿಗೆ ಗ್ರಾಮೀಣ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ತರಬೇತಿ ಕೇಂದ್ರ ತೆರೆಯಬೇಕು. ಆ ಮೂಲಕ ಬಡವರ ಮಕ್ಕಳು ಸಹ ಉನ್ನತ ಹುದ್ದೆ ಹೊಂದಬೇಕು ಎಂಬ ಮಹತ್ವಾಕಾಂಕ್ಷೆ ಇತ್ತು. ಅವರ ಕನಸನ್ನು ನನಸು ಮಾಡುವ ಸಲುವಾಗಿ ನಮ್ಮ ಕುಟುಂಬದಿಂದ ಆರ್.ಧ್ರುವನಾರಾಯಣ್ ಅವರ ಹೆಸರಿನಲ್ಲಿ ಎಜುಕೇಷನಲ್ ಟ್ರಸ್ಟ್ ಸ್ಥಾಪನೆ ಮಾಡಿ ಅದರ ಮೂಲಕ ಸಿಇಟಿ ಮತ್ತು ನೀಟ್ ಪರೀಕ್ಷೆಗೆ ಉಚಿತ ತರಬೇತಿ ಕೇಂದ್ರ ಆರಂಭಿಸಲಾಗಿದೆ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡು ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿ ತಾಲೂಕನ್ನು ಪ್ರಥಮ ಸ್ಥಾನಕ್ಕೆ ಕೊಂಡೊಯ್ಯಬೇಕು. ಆ ಮೂಲಕ ಉನ್ನತ ಹುದ್ದೆ ಅಲಂಕರಿಸಬೇಕು. **-ದರ್ಶನ್, ಶಾಸಕ**

ಹೋಬಳಿ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ


ಮೂಗೂರು ಕರ್ನಾಟಕ ಪಬ್ಲಿಕ್ ಶಾಲೆ ಕ್ರೀಡಾಂಗಣದಲ್ಲಿ ಪ್ರೌಢಶಾಲಾ ವಿಭಾಗದ ಹೋಬಳಿ ಮಟ್ಟದ ಕ್ರೀಡಾಕೂಟಕ್ಕೆ ಬಿಇಓ ಶಿವಮೂರ್ತಿ ಚೆಂಡು ಎಸೆಯುವ ಮೂಲಕ ಚಾಲನೆ ನೀಡಿದರು. ಈ ವೇಳೆ ಬಿಆರ್‌ಪಿ ಶ್ರೀದೇವಿ, ನಾಗೇಶ್, ಕೆಪಿಎಸ್ ಶಾಲೆ ಉಪ ಪ್ರಾಂಶುಪಾಲ ಸಿ.ಪುಟ್ಟಸ್ವಾಮಿ, ದೈಹಿಕ ಶಿಕ್ಷಕ ಮಲ್ಲೇಶ್, ಪ್ರಕಾಶ್, ಪುಟ್ಟಸ್ವಾಮಿ, ವಾಟಾಳು ಸಂಘಟನೆ ಶಾಲೆಯ ಮುಖ್ಯ ಶಿಕ್ಷಕಿ ಪುಷ್ಪ, ಮರಿಸ್ವಾಮಿ, ವಿವಿಧ ಶಾಲೆ ಮುಖ್ಯ ಶಿಕ್ಷಕರು ಉಪಸ್ಥಿತರಿದ್ದರು.

ವಾಣಿಜ್ಯ ಮಳಿಗೆಗಳ ಉದ್ಘಾಟನೆ, ವಾರ್ಷಿಕ ಮಹಾಸಭೆ

ಹುಣಸೂರು, ಆ.24– ಹುಣಸೂರು ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ (ಟಿಎಪಿಸಿಎಂಎಸ್) ದಿಂದ ಸಂಘದ ಅಕ್ಕಿಗಿರಣಿ ಕಟ್ಟಡದ ಎದುರು ನಿರ್ಮಿಸಿರುವ ವಾಣಿಜ್ಯ ಮಳಿಗೆಗಳ ಉದ್ಘಾಟನಾ ಸಮಾರಂಭ ಹಾಗೂ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಆ.26 ರಂದು ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಬಸವಲಿಂಗಯ್ಯ ತಿಳಿಸಿದ್ದಾರೆ. ಅಂದು ಬೆಳಗ್ಗೆ 11 ಗಂಟೆಗೆ ನಡೆಯುವ ಸಮಾರಂಭದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ನೂತನ ವಾಣಿಜ್ಯ ಮಳಿಗೆಗಳನ್ನು ಉದ್ಘಾಟಿಸಲಿದ್ದಾರೆ. ಸಂಘದ ಉಪಾಧ್ಯಕ್ಷ ರೇವಣ್ಣ, ನಿರ್ದೇಶಕರಾದ ಎ.ಸಿ.ಕೆಂಪೇಗೌಡ, ಬಿ.ನಾಗರಾಜು, ಜಿ.ಎನ್.ವೆಂಕಟೇಶ್, ಎಚ್.ಟಿ.ಬಾಬು, ರಮೇಶ್, ಹೆಚ್.ಎನ್.ಚಂದ್ರಶೇಖರ್, ಹೆಚ್.ಪ್ರೇಮಕುಮಾರ್, ಹೆಚ್.ಆರ್.ಸುಜಾತಾ, ಇಂದುಕಲಾ, ಮಂಗಳಗೌರಿ, ಹುಣಸೂರು ಉಪ ವಿಭಾಗದ ಸಹಕಾರ ಸಂಘಗಳ ಉಪ ನಿಬಂಧಕ ಅನಸೂಯ, ಸಂಘದ ಪ್ರಭಾರ ಕಾರ್ಯದರ್ಶಿ ಎ.ಎಸ್.ಹೇಮಲತಾ ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಬಗರ್ ಹುಕುಂ ಸಮಿತಿಗೆ ಅಧ್ಯಕ್ಷ, ಸದಸ್ಯರ ನೇಮಕ


ಹೆಚ್.ವಿ.ಶೇಷಾದ್ರಿ


ಎನ್.ಎಂ.ಕುಮಾರ್


ಸಿದ್ದಪ್ಪಸ್ವಾಮಿ

ತಿ.ನರಸೀಪುರ ಆ.24– ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ (ದರಖಾಸ್ತು ಕಮಿಟಿ)ಯ ನೂತನ ನೂತನ ಅಧ್ಯಕ್ಷರಾಗಿ ತಾಲೂಕಿನ ಹೆಮ್ಮಿಗೆ ಗ್ರಾಮದ ಹಿರಿಯ ಮುಖಂಡ ಹೆಚ್.ವಿ.ಶೇಷಾದ್ರಿ ಅವರನ್ನು ನೇಮಕ ಮಾಡಲಾಗಿದೆ.

ಉಳಿದಂತೆ ಸಮಿತಿ ಸದಸ್ಯರಾಗಿ ಕನ್ನಹಳ್ಳಿ ಮೋಳೆ ಗ್ರಾಮದಸಿದ್ಧಪ್ಪಸ್ವಾಮಿ, ಮೇದಿನಿ ಗ್ರಾಮದ ಎಂ.ಎನ್.ಕುಮಾರ್ ಹಾಗೂ ನರಗ್ಯಾತನಹಳ್ಳಿ ಗ್ರಾಮದ ಶಿವಮ್ಮ ಅವರನ್ನು ನೇಮಕ ಮಾಡಲಾಗಿದೆ ಎಂದು ಕಂದಾಯ ಇಲಾಖೆ ವಿಶೇಷ ಅಧಿಕಾರಿ ಮುತ್ತುರಾಜ್ ಆದೇಶ ಹೊರಡಿಸಿದ್ದಾರೆ.

ಅರಣ್ಯಾಧಿಕಾರಿಗೆ ಸನ್ಮಾನ


ಹೆಚ್.ಡಿ.ಕೋಟೆ ತಾಲೂಕು ನಾಗರಹೊಳೆ ಅಭಯಾರಣ್ಯ ಅಂತರಸಂತೆ ವನ್ಯಜೀವಿ ವಲಯ ದಮ್ಮನಕಟ್ಟೆ ಅರಣ್ಯಾಧಿಕಾರಿ ಸಿದ್ದರಾಜು ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಸಿಂಡಿಕೇಟ್ ಸದಸ್ಯ ನಾಗರಾಜು, ಚಿಕ್ಕಮಾದು ಅಭಿಮಾನಿ ಬಳಗದ ಅಧ್ಯಕ್ಷ ರಾಜನಾಯಕ, ಮುಖಂಡರಾದ ಮಹೇಶ್ ನಾಯಕ, ಬಿ.ಸಿ.ರಾಜು, ದಾಸನಾಯಕ, ಬಿ.ಪಿ.ಸಿದ್ದನಾಯಕ, ಜಯಪ್ಪ, ಸೋಮಣ್ಣ, ಕೃಷ್ಣ, ಚಿಕ್ಕಣ್ಣ, ನಾಗರಾಜ್, ಮರಿತಿಮ್ಮನಾಯಕ, ಮಣಿ, ಗೋವಿಂದರಾಜು, ನಾಗನಾಯಕ, ನಿಂಗನಾಯಕ, ಉಮೇಶ, ನಾಗರಾಜು, ಜವರನಾಯಕ, ಈರನಾಯಕ, ರವಿನಾಯಕ, ನಾಗೇಂದ್ರ, ಚಿಕ್ಕಣ್ಣ, ಗೋವಿಂದನಾಯಕ, ರವಿಶಂಕರ, ನಿಂಗನಾಯಕ, ಬದ್ರಿ, ವೆಂಕಟೇಶ್, ಕುಮಾರನಾಯಕ, ಮರಿಸ್ವಾಮಿ, ಕುಮಾರ, ರವೀಶ್, ಮಂಜು, ನಾಗರಾಜು, ಮಲ್ಲೇಶ್ ಇನ್ನಿತರರಿದ್ದರು.

ಅನುಮಾನಾಸ್ಪದವಾಗಿ ಮಹಿಳೆ ಸಾವು

ನಂಜನಗೂಡು, ಆ.24– ಮಹಿಳೆಯೊಬ್ಬರು ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ತಾಲೂಕಿನ ದೊಡ್ಡ ಕವಲಂದೆ ಹೋಬಳಿ ಗಟ್ಟವಾಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಶಶಿಕಲಾ(39) ಸಾವನ್ನಪ್ಪಿದವರು. ಚಾಮರಾಜನಗರ ತಾಲೂಕಿನ ಶಿವಪುರ ಗ್ರಾಮದ ನಾಗರಾಜು ಅವರಿಗೆ ಶಶಿಕಲಾ ಅವರನ್ನು ಮದುವೆ ಮಾಡಿಕೊಡಲಾಗಿತ್ತು ಆದರೆ ಮದುವೆಯಾದ 6 ತಿಂಗಳಿಗೆ ಪತಿ ನಾಗರಾಜು ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಶಶಿಕಲಾ ಸ್ವಗ್ರಾಮ ಗಟ್ಟವಾಡಿ ಗ್ರಾಮಕ್ಕೆ ವಾಪಸ್ಸಾಗಿ ತಂದೆ ಜೊತೆ ವಾಸವಿದ್ದು, ಲೂನರ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡಿಕೊಂಡಿದ್ದರು. ಶುಕ್ರವಾರ ಕೆಲಸಕ್ಕೆ ಮನೆಯಿಂದ ತೆರಳಿದ್ದ ಶಶಿಕಲಾ ಶವ ಗ್ರಾಮದ ನಂಜುಂಡಪ್ಪ ಅವರ ಬಾಳೆ ತೋಟದಲ್ಲಿ ಬಾಳೆ ಗಿಡಕ್ಕೆ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಶವ ದೊರೆತ ಸ್ಥಳದಲ್ಲಿ ಕಬ್ಬಿಣದ ರಾಡು, ಚಾಪೆ, ದಿಂಬು, ಬಣ್ಣದ ಕಾರಿನ ಮ್ಯಾಟ್ ಮತ್ತು ಬ್ಯಾಗು, ಚಪ್ಪಲಿ, ಮೊಬೈಲ್ ದೊರೆತಿದೆ.

ನಂಜುಂಡಪ್ಪ ಶಶಿಕಲಾಳನ್ನು ನಿತ್ಯ ತನ್ನ ಆಟೋದಲ್ಲಿ ಕೆಲಸಕ್ಕೆ ಕರೆದೊಯ್ಯುತ್ತಿದ್ದ. ಈತನೇ ಸಂಚು ಮಾಡಿ ತನ್ನ ಬಾಳೆ ತೋಟಕ್ಕೆ ಕರೆದುಕೊಂಡು ಹೋಗಿ ನನ್ನ ತಂಗಿ ಮೇಲೆ ಅತ್ಯಾಚಾರವೆಸಗಿ ಕೊಲೆಗೈದು ಬಾಳೆ ಗಿಡಕ್ಕೆ ನೇಣು ಹಾಕಿದ್ದಾನೆ. ಕೂಡಲೇ ಆತನ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕವಲಂದೆ ಪೊಲೀಸ್ ಠಾಣೆಗೆ ಶಶಿಕಲಾಳ ಅಣ್ಣ ಮಹದೇವಯ್ಯ ದೂರು ನೀಡಿದ್ದಾರೆ.

ಸ್ಥಳಕ್ಕೆ ಕವಲಂದೆ ಪೊಲೀಸ್ ಠಾಣೆ ಎಸ್‌ಐ ಕೃಷ್ಣಕಾಂತ ಕೋಳಿ ಭೇಟಿ ನೀಡಿ ಪರಿಶೀಲಿಸಿ, ಶವವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿ ತನಿಖೆ ಮುಂದುವರಿಸಿದ್ದಾರೆ. ಈ ಸಂಬಂಧ ಕವಲಂದೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಸವನಹಳ್ಳಿ ಡೈರಿ ವಾರ್ಷಿಕ ಮಹಾಸಭೆ



ಬನ್ನೂರು, ಆ.24– ಗ್ರಾಮದ ರೈತರು ರಾಸುಗಳಿಗೆ ವಿಮೆ ಮಾಡಿಸುವುದರಿಂದ ಭವಿಷ್ಯದಲ್ಲಿ ಎದುರಾಗುವ ಅಪಾಯದಿಂದ ಪಾರಾಗಬಹುದು ಎಂದು ಒಕ್ಕೂಟದ ನಿವೃತ್ತ ಅಧಿಕಾರಿ ದಿವಾಕರ್ ತಿಳಿಸಿದರು.

ಇಲ್ಲಿಗೆ ಸಮೀಪದ ಬಸವನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ರಾಸುಗಳಿಗೆ ವಿಮೆ ಮಾಡಿಸುವುದರಿಂದ ಆಕಸ್ಮಿಕವಾಗಿ ರಾಸು ಅಸು ನೀಗಿದರೆ ರೈತರಿಗೆ ಪರಿಹಾರ ಸಿಗಲಿದೆ. ವಿಮೆ ಮಾಡಿಸಿದ ರಾಸುಗಳು 3 ವರ್ಷದವರೆಗೆ ರೈತನ ಬಳಿ ಇರಬೇಕು. ಇಲ್ಲವಾದಲ್ಲಿ ಈ ವಿಮೆಗೆ ಅರ್ಹವಾಗುವುದಿಲ್ಲ ಎಂದರು.

ಡೈರಿ ಅಧ್ಯಕ್ಷ ಮಹದೇವ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಸಂಘ 8,06,699 ನಿವ್ವಳ ಲಾಭ ಗಳಿಸಿದ್ದು, ಎಲ್ಲಾ ಸದಸ್ಯರ ಸಹಕಾರದಿಂದ ಉತ್ತಮವಾಗಿ ನಡೆಯುತ್ತಿದೆ ಎಂದರು.

ಇದುವರೆಗೂ ಆಕಸ್ಮಿಕವಾಗಿ ಸಾವನ್ನಪ್ಪಿದ ರಾಸುಗಳ ಮಾಲೀಕರಿಗೆ ಸಂಘದಿಂದ 6 ಸಾವಿರ ನೀಡುತ್ತಿದ್ದು, ಮುಂದಿನ ದಿನಗಳಲ್ಲಿ ವಿಮೆ ಮಾಡಿಸಿದವರಿಗೆ ಮಾತ್ರ ಪರಿಹಾರ ಧನ ನೀಡಲಾಗುವುದು ಎಂದರು.

ಸಂಘದ ಕಾರ್ಯ ನಿರ್ವಹಣಾಧಿಕಾರಿ ಕೆ.ಸಿದ್ದರಾಜು ಮಾತನಾಡಿದರು. ಇದೇ ವೇಳೆ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ರೈತರನ್ನು ಅಭಿನಂದಿಸಲಾಯಿತು. ಅಲ್ಲದೇ ನಿವೃತ್ತ ಅಧಿಕಾರಿ ದಿವಾಕರ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮುಖಂಡರಾದ ಬಸವರಾಜು, ಕುಮಾರ್, ಮಹದೇವ, ಮಂಚುಗೌಡ, ಬಿ.ಕೆ.ಶಿವಕುಮಾರ್, ಸುಬ್ಬೇಗೌಡ, ದೇವರಾಜು, ಶಿವಣ್ಣ, ಶಿವಮ್ಮ, ವಿಜಯ, ಸುನೀತಾ, ವಿಸ್ತರಣಾಧಿಕಾರಿ ದಿವ್ಯಶ್ರೀ, ರಂಜಿತಾ, ಶ್ರೀನಿವಾಸ್, ಬಿ.ಕೆ.ಶಂಭುಗೌಡ, ಮಾಜಿ ಅಧ್ಯಕ್ಷರಾದ ಬಸವರಾಜು, ನಾಗರಾಜು ಸೇರಿದಂತೆ ಹಲವರಿದ್ದರು.

ಸಮ ಸಮಾಜದ ಕನಸುಗಾರ ಡಿ.ದೇವರಾಜ ಅರಸು

ಸರ್ಕಾರಿ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ನಂಜುಂಡಸ್ವಾಮಿ ಬಣ್ಣನೆ


ಸರ್ಕಾರಿ ಮಹಿಳಾ ಪದವಿ ಕಾಲೇಜಿನಲ್ಲಿ ಡಿ.ದೇವರಾಜ ಅರಸು ಜಯಂತಿ ನಡೆಯಿತು.

ಹುಣಸೂರು, ಆ.24– ಸಮ ಸಮಾಜದ ಕನಸುಗಾರ, ಹಿಂದುಳಿದ ವರ್ಗದ ಮಹಾತ್ಮ ವಿದ್ಯಾರ್ಥಿ ವರ್ಗಕ್ಕೆ ಅರಿವಿನ ಬೆಳಕು ಚೆಲ್ಲಿದ ಅರಿವಿನ ಗುರು ದಿ.ಡಿ.ದೇವರಾಜ ಅರಸು ಎಂದು ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ನಂಜುಂಡಸ್ವಾಮಿ ಬಣ್ಣಿಸಿದರು.

ನಗರದ ಸರ್ಕಾರಿ ಮಹಿಳಾ ಪದವಿ ಕಾಲೇಜಿನಲ್ಲಿ ನಡೆದ ಡಿ.ದೇವರಾಜ ಅವರು ಜಯಂತಿಯಲ್ಲಿ ಮಾತನಾಡಿದ ಅವರು, ಅರಸು ಅವರು ಸಮಾಜದಲ್ಲಿದ್ದ ಜಾತಿ ನಡುವಿನ ಕಂದಕ ತೊಡೆದು ಹಾಕಲು ಶ್ರಮಿಸಿದ್ದರು. ಚೀನಾ, ಭಾರತ ಯುದ್ಧ ಸಂದರ್ಭ ಟಿಬೆಟ್ ನಿರಾಶ್ರಿತರಿಗೆ ಕರ್ನಾಟಕದ ವಡ್ಡರಪಾಳ್ಯ ಮತ್ತು ಬೈಲುಕುಪ್ಪೆಯಲ್ಲಿ ಸಾವಿರಾರು ಎಕರೆ ಜಾಗ ನೀಡಿದ ಆಶ್ರಯದಾತ. ಮುಖ್ಯಮಂತ್ರಿಯಾದರೂ ರೈತರಂತೆ ಬದುಕಿದ್ದ ಅವರು ಕರ್ನಾಟಕದಲ್ಲಿ ಭೂ ಸುಧಾರಣಾ ಕಾಯ್ದೆ ಜಾರಿಯಾದ ವೇಳೆ ನನ್ನಿಂದಲೇ ಸುಧಾರಣೆಯಾಗಲಿ ಎಂದು ತಮ್ಮ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದ ಚೆಲುವಯ್ಯನಿಗೆ 6 ಎಕರೆ ಭೂಮಿ ನೀಡಿದ ಸಮಾಜ ಸುಧಾರಕ ಎಂದರು.

ದೇವರಾಜ ಅರಸು ಅವರು ಹಾವನೂರು ಆಯೋಗ ರಚಿಸಿ ನ್ಯಾಯ ನೀಡಿದ ನ್ಯಾಯವಾದಿ, ರಾಜಕಾರಣದ ಛಲಗಾರ, ಚತುರರಾಗಿದ್ದ ಅವರು, ಅಪಾರ ಜ್ಞಾನ ಹೊಂದಿದ್ದರು. 64 ಸಾವಿರ ಜೀತದಾಳುಗಳನ್ನು ಜೀತದಿಂದ ಮುಕ್ತಿಗೊಳಿಸುವ ಮೂಲಕ ರಾಜ್ಯದಲ್ಲಿ ದೊಡ್ಡ ಸಾಧನೆ ಮಾಡಿದ ಅಪರೂಪದ ಮುಖ್ಯಮಂತ್ರಿ ಡಿ.ದೇವರಾಜ ಅರಸು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲ ಪುಟ್ಟಶೆಟ್ಟಿ, ಹುಣಸೂರಿನ ಕೀರ್ತಿ ಪತಾಕೆ ಹಾರಿಸಿದ ಅರಸು ಅವರು ಅಜರಾಮರವಾಗಿ ಉಳಿದಿದ್ದಾರೆ. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಿದರು. ಸರಳವಾಗಿ ಬದುಕಿದರು. ಎಲ್ಲಾ ಸಮುದಾಯದ ಹಿತಚಿಂತಕರಾಗಿದ್ದರು. ಶೈಕ್ಷಣಿಕವಾಗಿ ದೊಡ್ಡ ಕ್ರಾಂತಿ ಮಾಡಿದವರು ದೇವರಾಜ ಅರಸು ಎಂದರು. ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕ ಡಾ.ವಿಶ್ವನಾಥ್, ಹನುಮಂತಪ್ಪ, ಲಕ್ಷ್ಮಯ್ಯ, ಕೇಸರ್‌ಕರ್ ಉಪಸ್ಥಿತರಿದ್ದರು.

ಮಕ್ಕಳ ಪ್ರತಿಭೆ ಗುರ್ತಿಸುವ ಶಕ್ತಿ ಶಿಕ್ಷಕನಿಗಿದೆ



ಕಂಪಲಾಪುರ, ಆ.24– ಮಕ್ಕಳ ಸುಪ್ತ ಪ್ರತಿಭೆ ಗುರ್ತಿಸುವ ಶಕ್ತಿ ಶಿಕ್ಷಕನಿಗಿದೆ ಎಂದು ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಪ್ರಶಾಂತ್ ತಿಳಿಸಿದರು.

ಇಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಪ್ರತಿಭಾ ಕಾರಂಜಿಯಲ್ಲಿ ಮಾತನಾಡಿದ ಅವರು, ಸಹಪಠ್ಯಕ್ಕೆ ಪೂರಕವಾಗಿ ಪ್ರತಿಭಾ ಕಾರಂಜಿ ಇರುತ್ತದೆ. ಪಠ್ಯ–ಸಹಪಠ್ಯ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಈ ವೇದಿಕೆ ಹಾಡು, ನೃತ್ಯ, ಅಭಿನಯದ ವೇದಿಕೆ ಮಾತಿನ ವೇದಿಕೆಯಲ್ಲ ಎಂದರು.


ಜೀವಂತ ಬಸವನಿಗೆ ಕಲ್ಲು ಹೊಡೆದು ಕಲ್ಲು ಬಸವನಿಗೆ ಪೂಜಿಸಿದರೇನು ಫಲ. ಜೀವಂತ ತಾಯಿಗೆ ಒದ್ದು ನೂರೆಂಟು ಗುಡಿಯ ಸುತ್ತಿದರೇನು ಫಲ. ಹೀಗೆ ಲಾವಣಿ ಹಾಡಿ ಮೈಸೂರು ಡಯಟ್‌ನ ನಳಿನಾಕ್ಷಿ ಸಭಿಕರನ್ನು ರಂಜಿಸಿ, ಮೌಲ್ಯಗಳು ಹಿಂದಿನ ಕಾಲಕ್ಕೂ ಈಗಿನ ಕಾಲಕ್ಕೂ ಹೇಗಿವೆ ಎಂಬುದನ್ನ ತಿಳಿಸಿ, ತಂದೆ ತಾಯಿಗಳಿಗೆ ಮಕ್ಕಳ ಪ್ರತಿಭೆ ಗೊತ್ತಿರುವುದಿಲ್ಲ. ಬದಲಾಗಿ ಶಿಕ್ಷಕ ಆ ಹೊರೆಹೊತ್ತು ಮಕ್ಕಳನ್ನು ಉತ್ತಮ ಪ್ರಜೆಗಳಾಗಿ ಮಾಡುತ್ತಾನೆ ಎಂದರು.

ಪಿಡಿಓ ಪರಮೇಶ್, ಶಿಕ್ಷಣ ಸಂಯೋಜಕ ಗಣೇಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಿಆರ್‌ಪಿ ಸುದರ್ಶನ್, ಪ್ರಾ.ಶಾ.ಶಿ. ಸಂಘದ ಮಾಜಿ ಅಧ್ಯಕ್ಷ ಗಣೇಶ್ ಕುಮಾರ್, ನಿರ್ದೇಶಕಿ ನಿಲುಫರ್, ರಜಿನಿ, ಅನಿತಾ, ಪತ್ತಿನ ಸಹಕಾರ ಸಂಘದ ರವಿ, ದಯಾನಂದ್, ರಿಯಾಜ್, ಮುಖ್ಯ ಶಿಕ್ಷಕ ಕೃಷ್ಣಕುಮಾರ್, ಚಂದ್ರಶೇಖರ್, ಶ್ರೀನಿವಾಸಗೌಡ ಎಂ.ಆರ್.ನೋಬೆಲ್ ಶಾಲೆ ಕಾರ್ಯದರ್ಶಿ ಗಿರಿಧರ್, ಎಸ್‌ಡಿಎಂಸಿ ಅಧ್ಯಕ್ಷ ಕುಮಾರ ಸೇರಿದಂತೆ ಕ್ಲಸ್ಟರ್‌ನ ಎಲ್ಲಾ ಶಾಲೆಯ ಮುಖ್ಯ ಶಿಕ್ಷಕರು, ಸಹಶಿಕ್ಷಕರು, ಪೋಷಕರು ಹಾಜರಿದ್ದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ನಿವೃತ್ತ ಯೋಧನಿಗೆ ಸನ್ಮಾನ


ಹುಣಸೂರು ತಾಲೂಕಿನ ಹೈರಿಗೆ ಗ್ರಾಮದಲ್ಲಿ ನಡೆದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ನಿವೃತ್ತ ಯೋಧ ಹೆಚ್.ಕೆ.ಲೋಕೇಶ್ ಅವರನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಸನ್ಮಾನಿಸಿದರು. ಈ ವೇಳೆ ಬಿಇಓ ಮಹದೇವಸ್ವಾಮಿ, ಡಿವೈಎಸ್‌ಪಿ ರಘು, ತಟ್ಟೆಕೆರೆ ಗ್ರಾಪಂ ಅಧ್ಯಕ್ಷೆ ಸಣ್ಣಮ್ಮ, ಗ್ರಾಪಂ ಸದಸ್ಯರಾದ ಗೋವಿಂದೇಗೌಡ, ಪಾರ್ವತಿ, ದೇವರಾಜ್ ಇನ್ನಿತರರಿದ್ದರು.

ಕಲ್ಲಹಳ್ಳ ಶಾಲೆ ಮಕ್ಕಳಿಗೆ ಕಲಿಕಾ ಸಾಮಗ್ರಿ ವಿತರಣೆ



ಸರಗೂರು, ಆ.24– ಪ್ರತಿಯೊಬ್ಬರೂ ಸರ್ಕಾರಿ ಶಾಲೆ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಕರಿಸಬೇಕು ಎಂದು ಬೆಂಗಳೂರು ಮೂಲದ ಎನ್‌ಜಿಓ ಮುಖ್ಯಸ್ಥ ವರುಣ್ ತಿಳಿಸಿದರು.

ತಾಲೂಕಿನ ಕಲ್ಲಹಳ್ಳ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ ಬ್ಯಾಗ್ ಹಾಗೂ ಕಲಿಕಾ ಸಾಮಗ್ರಿ ವಿತರಿಸಿ ಮಾತನಾಡಿದ ಅವರು, ಸೇವೆ ಎಂಬ ಪದವೇ ನಿಸ್ವಾರ್ಥ. ದಯೆ ಎಂಬ ಪದವೇ ಪರಮಾರ್ಥ. ಇದನ್ನು ಮನಗೊಂಡು ಪ್ರತಿಯೊಬ್ಬರೂ ಬಡ ವಿದ್ಯಾರ್ಥಿಗಳ ನೆರವಿಗೆ ಧಾವಿಸಬೇಕು. ಪ್ರತಿಯೊಬ್ಬರು ನಮ್ಮ ಕೈಲಾದ ಸೇವೆ ಮಾಡಬೇಕು ಎಂದರು.

ಮುಖ್ಯ ಶಿಕ್ಷಕ ಟಿ.ಎಂ.ಸುರೇಶ್ ಕುಮಾರ್ ಮಾತನಾಡಿ, ಕಾಡಂಚಿನಲ್ಲಿರುವ ಶಾಲೆಯಲ್ಲಿ ಹೆಚ್ಚು ಹಿಂದುಳಿದ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಹೀಗಾಗಿ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಬೇಕು ಎಂದರು. ಈ ವೇಳೆ ಶಿಕ್ಷಕರಾದ ಆರ್.ಪ್ರೇಮ್‌ಕುಮಾರ್, ಸೌಮ್ಯ, ಸುಮಾನಂದ, ಶೇಖರ್ ಹಾಗೂ ಎಸ್‌ಡಿಎಂಸಿ ಸದಸ್ಯರು ಹಾಜರಿದ್ದರು.

ವ್ಯಕ್ತಿ ನಾಪತ್ತೆ



ಬೆಟ್ಟದಪುರ, ಆ.23– ಇಲ್ಲಿಗೆ ಸಮೀಪದ ಸುರಗಳ್ಳಿ ಗ್ರಾಮದ ನಿವಾಸಿ ಶ್ರೀಧರ್(52) ನಾಪತ್ತೆಯಾಗಿದ್ದಾರೆ ಎಂದು ಬೆಟ್ಟದಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಮೊ. 9480805060 ಸಂಪರ್ಕಿಸುವಂತೆ ಬೆಟ್ಟದಪುರ ಠಾಣೆ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬುಡಕಟ್ಟು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ

ಆಶ್ರಮ ಶಾಲೆಗೆ 5 ಎಕರೆ ಭೂಮಿ ನೀಡಲು ಮನವಿ


5 ಎಕರೆ ಭೂಮಿ ನೀಡಲು ತಹಶೀಲ್ದಾರ್ ಶ್ರೀನಿವಾಸ್‌ಗೆ ಮನವಿ ಸಲ್ಲಿಸಲಾಯಿತು.

ಹೆಚ್.ಡಿ.ಕೋಟೆ, ಆ.24– ತಾಲೂಕಿನ ಬುಡಕಟ್ಟು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಆಶ್ರಮ ಶಾಲೆ ನಿರ್ಮಿಸಲು ಎನ್.ಬೇಗೂರು ಆಸ್ಪತ್ರೆ ಹಿಂಭಾಗ ಖಾಲಿ ಇರುವ 5 ಎಕರೆ ಭೂಮಿಯನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ನೀಡಬೇಕು ಎಂದು ಆದಿವಾಸಿ ಗಿರಿಜನರು ತಹಸೀಲ್ದಾರ್ ಶ್ರೀನಿವಾಸ್ ಅವರಿಗೆ ಮನವಿ ಸಲ್ಲಿಸಿದರು.

ಎನ್.ಬೇಗೂರು ಗ್ರಾಪಂ ಅಧ್ಯಕ್ಷ ಶೈಲೇಂದ್ರ ಮಾತನಾಡಿ, ಸರ್ಕಾರ ಆಶ್ರಮ ಶಾಲೆ ನಿರ್ಮಾಣಕ್ಕೆ 6.5 ಕೋಟಿ ಅನುದಾನ ನೀಡಿದೆ. ಆದ್ದರಿಂದ 5 ಎಕರೆ ಭೂಮಿಯನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ವರ್ಗಾಯಿಸಿದರೆ ಅನುಕೂಲವಾಗಲಿದೆ ಎಂದರು. ಈ ವೇಳೆ ಬಿ.ಟಿ.ನರಸಿಂಹಮೂರ್ತಿ, ವೇಣುಗೋಪಾಲ, ಶಂಕರ್, ರಾಜು, ಕುಮಾರ್, ಸುರೇಂದ್ರ, ವಿ.ಜಿ.ಈಶ್ವರ, ಬಸವರಾಜು, ಕಾಳಸ್ವಾಮಿ, ಬಸವರಾಜು, ಹನುಮಂತ, ಚಿಕ್ಕಯರವ ಇದ್ದರು.

ನಿವೃತ್ತಿ ಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿ ಮನವಿ


ನಿವೃತ್ತಿ ಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿ ಮನವಿ ಸಲ್ಲಿಸಲಾಯಿತು.

ತಿ.ನರಸೀಪುರ, ಆ.24– ಏಳನೇ ವೇತನ ಆಯೋಗದಲ್ಲಿ 2022ರ ಜು.1ರಿಂದ 2024ರ ಜು.31ರೊಳಗೆ ನಿವೃತ್ತರಾದ ನೌಕರರಿಗೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿವೃತ್ತಿ ಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿ ಕರ್ನಾಟಕ ನಿವೃತ್ತ ನೌಕರರ ವೇದಿಕೆ ತಾಲೂಕು ಸದಸ್ಯರು ತಹಸೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಮಿನಿ ವಿಧಾನಸೌಧಕ್ಕೆ ಆಗಮಿಸಿದ ತಾಲೂಕು ನಿವೃತ್ತ ನೌಕರರ ವೇದಿಕೆ ಸದಸ್ಯರು ಗ್ರೇಡ್–2 ತಹಸೀಲ್ದಾರ್ ಕೆ.ರಾಜಕಾಂತ್ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಿದರು.

ಜಿಲ್ಲಾ ಮಹಾಪ್ರಧಾನ ಸಂಚಾಲಕ ಹೆಚ್.ಡಿ.ಮಾದಪ್ಪ ಮಾತನಾಡಿ, ಕಳೆದ 25 ತಿಂಗಳಲ್ಲಿ ನಿವೃತ್ತರಾಗಿರುವ ರಾಜ್ಯದ ಎಲ್ಲಾ ಸರ್ಕಾರಿ ನೌಕರರಿಗೆ ಸರ್ಕಾರ ಪರಿಷ್ಕೃತ ಏಳನೇ ವೇತನವನ್ನು ಅನುಷ್ಠಾನಕ್ಕೆ ತಂದಿದೆ. ವೇತನ ಶ್ರೇಣಿ ಪರಿಷ್ಕರಣೆಯಿಂದ ಉಂಟಾಗುವ ವೇತನ ಮತ್ತು ಭತ್ಯೆಗಳ ಹೆಚ್ಚಳವನ್ನು ನಗದಾಗಿ ಪಾವತಿಸಬೇಕು. ಸೇವೆಯಿಂದ ನಿವೃತ್ತಿ, ಸೇವೆಯಲ್ಲಿರುವಾಗ ಮರಣ ಹೊಂದಿದ ಹಾಗೂ ಸೇವೆ ಸಮಾಪ್ತಿಗೊಂಡ ಸರ್ಕಾರಿ ಪ್ರಕರಣಗಳಲ್ಲಿ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ನಿಗದಿಪಡಿಸಿದ ಕಾಲ್ಪನಿಕ ವೇತನವನ್ನು ನಿವೃತ್ತಿ ಮತ್ತು ಕುಟುಂಬ ವೇತನವನ್ನು ಲೆಕ್ಕ ಹಾಕುವ ಉದ್ದೇಶಗಳಿಗೆ ಪರಿಗಣಿಸಬೇಕು. ಆದರೆ ಸದರಿ ಕಾಲ್ಪನಿಕ ಪುನರ್ ನಿಗದಿ ಆರ್ಥಿಕ ಲಾಭ ನಿವೃತ್ತಿ ಪಡೆದ ಸರ್ಕಾರಿ ನೌಕರರಿಗೆ ಅಥವಾ ಮರಣ ಹೊಂದಿದ ಸರ್ಕಾರಿ ನೌಕರರ ಫಲಾನುಭವಿಗೆ ಸಂದರ್ಭ ಅನುಸಾರ 2024ರ ಆ.1ರಿಂದ ಪ್ರಾಪ್ತವಾಗಬೇಕು. ಪರಿಷ್ಕೃತ ವೇತನದ ಅನ್ವಯ ಲೆಕ್ಕಾಚಾರ ಮಾಡದೆ ಹಳೆ ವೇತನ ಶ್ರೇಣಿಯ ಮೇಲೆ ಪರಿಗಣಿಸುತ್ತಿರುವುದು ನಿವೃತ್ತಿ ಜೀವನ ಸಂಧ್ಯಾ ಕಾಲದಲ್ಲಿರುವ ನಮ್ಮಗೆ ಆಘಾತವಾಗಿದೆ. ನಮ್ಮದಲ್ಲದ ಕಾರಣಕ್ಕೆ ಆಗಸ್ಟ್ 2024ರಿಂದ ನಿವೃತ್ತಿ ಹೊಂದಿರುವ ನೌಕರರ ಪರಿಷ್ಕೃತ ವೇತನದಲ್ಲಿ ನಿವೃತ್ತಿ ಆರ್ಥಿಕ ಸೌಲಭ್ಯವು ಲಭ್ಯವಾಗುತ್ತಿದ್ದು, ಅವರಂತೆ ನಾವುಗಳು ಸಹ 7ನೇ ವೇತನ ಆಯೋಗದ ವರದಿಯಂತೆ ಪರಿಷ್ಕೃತ ವೇತನದಲ್ಲಿ ನಿವೃತ್ತಿ ಆರ್ಥಿಕ ಸೌಲಭ್ಯಗಳನ್ನು ಪಡೆಯುವ ಅರ್ಹತೆ ಹೊಂದಿದ್ದೇವೆ. ಪ್ರಸ್ತುತ ಸೇವೆಯಲ್ಲಿರುವ ಇತರ ನೌಕರರಂತೆ ನಾವು ಕೂಡ 2022ರ ಜು.1 ರಿಂದ ಪಡೆಯಬೇಕಿದ್ದ ನಿವೃತ್ತಿ ವೇತನದ ವ್ಯತ್ಯಾಸ ಬಾಕಿ ಕೇಳುತ್ತಿಲ್ಲ ಬದಲಿಗೆ 7ನೇ ವೇತನ ಆಯೋಗದ ವರದಿಯಂತೆ ಪರಿಷ್ಕೃತ ವೇತನದ ಮೇಲೆ ನಿವೃತ್ತಿ ಆರ್ಥಿಕ ಸೌಲಭ್ಯಗಳಾದ ಡಿಸಿಆರ್‌ಜಿ, ಕಮ್ಯುಟೇಷನ್, ಇಎಲ್, ಎಂಕಾಷಮೆಂಟ್ ಸೌಲಭ್ಯಗಳ ಲೆಕ್ಕಾಚಾರದ ವ್ಯತ್ಯಾಸ ಮಾತ್ರ ಎಂದರು.

ಈ ವೇಳೆ ಕರ್ನಾಟಕ ನಿವೃತ್ತ ನೌಕರರ ತಾಲೂಕು ವೇದಿಕೆ ಜಿಲ್ಲಾ ಗೌರವ ಸಲಹೆಗಾರ ಮರಿಸ್ವಾಮಿ, ಮಲ್ಲೇಶ್, ಬಿ.ಎನ್.ನಾಗರಾಜು, ನಾಗೇಂದ್ರಸ್ವಾಮಿ, ರಾಜಶೇಖರಮೂರ್ತಿ, ಎಸ್.ಎಂ.ವೃಷಭೇಂದ್ರ, ಹೆಚ್.ಈ.ಬೆಟ್ಟಯ್ಯ ಮತ್ತಿತರರಿದ್ದರು.

ಶಿವಪ್ಪ ನಿಧನ



ಬೆಟ್ಟದಪುರ, ಆ.24– ಇಲ್ಲಿಗೆ ಸಮೀಪದ ಆಯಿತನಹಳ್ಳಿ ಗ್ರಾಮದ ನಿವಾಸಿ ಶಿವಪ್ಪ ಅಲಿಯಾಸ್ ಅಪ್ಪಸ್ವಾಮಿ (80) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಿವಮ್ಮ



ಬೆಟ್ಟದಪುರ, ಆ.24– ಪಿರಿಯಾಪಟ್ಟಣ ತಾಲೂಕು ಆವರ್ತಿ ಗ್ರಾಮದ ನಿವಾಸಿ ಶಿವಮ್ಮ (86) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಶಿಕ್ಷಕ ಕಾಂತರಾಜು ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ವೀರಶೈವ ಲಿಂಗಾಯತ ಸಮಾಜದ ಪದ್ಧತಿಯಂತೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಬೆಟ್ಟದಪುರದ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ದಿಂಡುಗಾಡು ಮಠದ ಅಪ್ಪಾಜಿ ಸ್ವಾಮೀಜಿ, ತಾಲೂಕು ವೀರಶೈವ ಲಿಂಗಾಯತ ಮಹಾಸಭಾ ಹಾಗೂ ಗ್ರಾಮದ ವೀರಶೈವ ಲಿಂಗಾಯತ ಸಮಾಜ ಸಂತಾಪ ಸೂಚಿಸಿದೆ.

ಪುಟ್ಟಚೆನ್ನಯ್ಯ



ಬೆಟ್ಟದಪುರ, ಆ.24– ಇಲ್ಲಿಗೆ ಸಮೀಪದ ನಂದೀಪುರ ಗ್ರಾಮದ ನಿವಾಸಿ, ನಿವೃತ್ತ ನೀರಾವರಿ ಇಲಾಖೆ ನೌಕರ ಪುಟ್ಟಚೆನ್ನಯ್ಯ (80) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಪತ್ರಕರ್ತ ಎನ್.ಪಿ. ಹರೀಶ್ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿತು ಕುಟುಂಬದ ಮೂಲಗಳು ತಿಳಿಸಿವೆ.

ಶಿವರಾಜಪ್ಪ



ಹಲ್ಲಹಳ್ಳಿ, ಆ.24– ಗ್ರಾಮದ ನಿವಾಸಿ ಬಾವಿಹಟ್ಟಿ ಶಿವರಾಜಪ್ಪ(80) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಭಾಗ್ಯಮ್ಮ, ಹಲ್ಲಹಳ್ಳಿ ಡೈರಿ ಅಧ್ಯಕ್ಷ ಮಂಜುನಾಥ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಭಾನುವಾರ 25 ಆಗಸ್ಟ್ 2024

ಮೈಸೂರು ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ದಂಪತಿಗೆ ಸನ್ಮಾನ

ನಾಡಿನ ಹಿರಿಮೆ ಎತ್ತಿ ಹಿಡಿಯುತ್ತೇನೆ: ಸಿಹೆಚ್‌ವಿ



ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶನಿವಾರ ಮೇಘಾಲಯದ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್– ಬಬಿತಾ ದಂಪತಿಯನ್ನು ನಾಗರಿಕ ಅಭಿನಂದನಾ ಸಮಿತಿ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು. ಚಿತ್ರದಲ್ಲಿ ಶಾಸಕ ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ಗಣಪತಿ ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಹಿರಿಯ ಸಾಹಿತಿ ಡಾ.ಪ್ರಧಾನ ಗುರುದತ್ತ, ಮಾಜಿ ಶಾಸಕ ವೈ.ಎಸ್.ವಿ.ದತ್ತ, ಹಿರಿಯ ಸಾಹಿತಿ, ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತರಾದ ಡಾ.ಎಸ್.ಎಲ್.ಭೈರಪ್ಪ, ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಇನ್ನಿತರರನ್ನು ಕಾಣಬಹುದು.

ಮೈಸೂರು, ಆ.24(ಎಂಟಿವೈ)– ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶನಿವಾರ ಮೇಘಾಲಯದ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್–ಬಬಿತಾ ದಂಪತಿಗೆ ನಾಗರಿಕ ಅಭಿನಂದನಾ ಸಮಿತಿ ವತಿಯಿಂದ ಸನ್ಮಾನಿಸಲಾಯಿತು.

ಗಣಪತಿ ಆಶ್ರಮದ ಸಭಾಂಗಣದಲ್ಲಿ ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಗೌರವಿಸಲಾಯಿತು.

ಸನ್ಮಾನ ಸ್ವೀಕರಿಸಿದ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಮಾತನಾಡಿ, ನಾನು ಮುಕ್ತ ಮನಸ್ಸಿನಿಂದ ಸಾಂವಿಧಾನಿಕ ಹುದ್ದೆಯನ್ನು ನಿಭಾಯಿಸಿ, ನಮ್ಮ ನಾಡಿನ ಹಿರಿಮೆ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತೇನೆ. ನಾನು ರಾಜ್ಯಪಾಲನಾಗಿರುವುದು ಮೇಘಾಲಯಕ್ಕೆ ಅಲ್ಲಿ ಮಹಿಳೆಯರಿಗೆ ಅತ್ಯುನ್ನತ ಸ್ಥಾನವಿದ್ದು, ಮಹಿಳೆಯೇ ಮನೆಯ ಯಜಮಾನಿಯಾಗಿದ್ದಾರೆ. ಉತ್ತಮವಾದ ಗೌರವ ಸ್ಥಾನ ಮಹಿಳೆಯರಿಗೆ ನೀಡಲಾಗುತ್ತಿದೆ. ಕರ್ನಾಟಕದಿಂದ ಬೇರೆ ರಾಜ್ಯಗಳಲ್ಲಿ ರಾಜ್ಯಪಾಲರಾಗಿ ಹುದ್ದೆ ನಿಭಾಯಿಸಿದ ಮಹನೀಯರ ಮಾದರಿಯನ್ನು ಅನುಸರಿಸುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಮತ್ತು ಮೈಸೂರಿನ ಮಹಾರಾಜ ಜಯಚಾಮರಾಜ ಒಡೆಯರ್ ಅವರನ್ನು ಸ್ಮರಿಸಿದರು.

ರಾಜ್ಯಪಾಲರ ಹುದ್ದೆ ಸಿಕ್ಕಿದ್ದಕ್ಕೆ ಕೃತಜ್ಞತೆ ಸಲ್ಲಿಸಲು ಪ್ರಧಾನಿ ಮೋದಿಯವರನ್ನು ಭೇಟಿ ಮಾಡಿದೆ. ಆಗ ಅವರು ಆ ಸ್ಥಾನದ ಘನತೆಯನ್ನು ಎತ್ತಿ ಹಿಡಿಯಬೇಕು. ರಾಜಭವನಕ್ಕೆ ಸೀಮಿತವಾಗದೆ, ಜನರ ಮಧ್ಯೆ ಬರಬೇಕು. ಅವರ ಸಮಸ್ಯೆ ಆಲಿಸಬೇಕು. ಗಡಿ ಪ್ರದೇಶಗಳಿಗೆ ಹೋಗಿ ಅಲ್ಲಿನ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಸಲಹೆ ನೀಡಿರುವುದಾಗಿ ತಿಳಿಸಿದರು.

ನನಗೆ ಮೇಘಾಲಯ ರಾಜ್ಯಪಾಲ ಹುದ್ದೆ ಸಿಕ್ಕ ಕೂಡಲೇ ನನ್ನ ಶ್ರೀಮತಿಯವರು ನಿಮಗೆ ಈ ನಾಡಿನ ಋಣವನ್ನು ಇನ್ನೂ ತೀರಿಸಲು ಆಗಿಲ್ಲ. ಶಾಸಕರಾದಿರಿ, ಸಚಿವರಾದಿರಿ, ವಿಧಾನಪರಿಷತ್ ಸದಸ್ಯರಾದಿರಿ. ಆದರೆ ಯಾವುದೇ ಋಣವನ್ನು ನೀವು ತೀರಿಸಿಲ್ಲ. ಈಗ ಮೇಘಾಲಯ ರಾಜ್ಯಪಾಲರಾಗಿದ್ದೀರಿ. ಅಲ್ಲಿನ ಋಣ ತೀರಿಸಿ ಋಣಮುಕ್ತರಾಗಿ ಬನ್ನಿ ಎಂದು ತಿಳಿಸಿದ್ದಾರೆ. ನಮ್ಮ ನಾಡಿನ ಗೌರವಕ್ಕೆ ಚ್ಯುತಿ ತರುವಂತಹ ಕೆಲಸವನ್ನು ನಾನು ಮಾಡುವುದಿಲ್ಲ. ನನ್ನ ಜನ್ಮ ಜನ್ಮದ ಪುಣ್ಯ ಅಲ್ಲಿನ ರಾಜ್ಯಪಾಲ ಹುದ್ದೆ ಸಿಕ್ಕಿದೆ. ನಮ್ಮ ನಾಡಿನ ಕೀರ್ತಿಯನ್ನು ಹೆಚ್ಚಿಸುತ್ತೇನೆ. ನಮ್ಮ ನಾಡಿನ ಋಣವನ್ನು ತೀರಿಸುವಂತಹ ಕೆಲಸ ಮಾಡುತ್ತೇನೆ ಎಂದರು.

ಗಣಪತಿ ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಿ, ರಾಜ್ಯಪಾಲರ ಹುದ್ದೆ ಸುಲಭವಾದುದಲ್ಲ. ಕೇವಲ ಸಹಿ ಹಾಕುವುದಲ್ಲ ಅಲ್ಲಿನ ಸಮಸ್ಯೆಗಳನ್ನು ಪರಿಹರಿಸುವಂತಾಗಬೇಕು. ಸಾಂವಿಧಾನಿಕ ಹುದ್ದೆಯನ್ನು ಚೆನ್ನಾಗಿ ನಿಭಾಯಿಸಿ, ಮೈಸೂರಿಗೆ ಮತ್ತು ಕರ್ನಾಟಕಕ್ಕೆ ಇನ್ನೂ ಹೆಚ್ಚು ಒಳ್ಳೆಯ ಹೆಸರನ್ನು ತರುವಂತಾಗಲಿ ಎಂದು ಹಾರೈಸಿದರು.

1990ರಿಂದಲೂ ಸಿ.ಹೆಚ್.ವಿಜಯಶಂಕರ್ ಅವರು ನಮ್ಮ ಆಶ್ರಮಕ್ಕೆ ಬರುತ್ತಿದ್ದಾರೆ. ಈಗ ಅವರು ರಾಜ್ಯಪಾಲರಾಗಿರುವುದು ನಮ್ಮ ಆಶ್ರಮದವರೇ ರಾಜ್ಯಪಾಲರಾಗಿದ್ದಾರೆ ಎನ್ನಿಸುತ್ತಿದೆ. ಅವರಿಗೆ ನಮ್ಮ ಆಶ್ರಮದಲ್ಲಿಯೇ ನಾಗರಿಕ ಅಭಿನಂದನೆ ಮಾಡುತ್ತಿರುವುದು ನಿಜಕ್ಕೂ ಒಳ್ಳೆಯ ಕಾರ್ಯ. ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಆಶಯವೂ ಇದೇ ಆಗಿತ್ತು. ಈ ಕಾರ್ಯವನ್ನು ಎಲ್ಲರೂ ಅಚ್ಚುಕಟ್ಟಾಗಿ ನಡೆಸಿಕೊಟ್ಟಿದ್ದಾರೆ. ನಾವು ಮಾಡುವ ಒಳ್ಳೆಯ ಕೆಲಸಕ್ಕೆ ಭಗವಂತನ ಅನುಗ್ರಹ ಇದ್ದೇ ಇರುತ್ತದೆ ಎಂಬುದಕ್ಕೆ ವಿಜಯಶಂಕರ್ ಉದಾಹರಣೆಯಾಗಿದ್ದಾರೆ ಎಂದು ಶ್ರೀಗಳು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಮಾರುತಿರಾವ್ ಪವಾರ್, ಮಾಜಿ ಶಾಸಕ ವೈ.ಎಸ್.ವಿ ದತ್ತ ಹಿರಿಯ ಸಾಹಿತಿ, ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತರಾದ ಡಾ.ಎಸ್.ಎಲ್.ಭೈರಪ್ಪ ಹಿರಿಯ ಸಾಹಿತಿ ಡಾ.ಪ್ರಧಾನ ಗುರುದತ್ತ ಶಾಸಕರಾದ ಟಿ.ಎಸ್.ಶ್ರೀವತ್ಸ ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯಪಾಲರಿಗೆ ಅಗೌರವ ತೋರುವುದು ಖಂಡನೀಯ

ಖ್ಯಾತ ಸಾಹಿತಿ ಡಾ. ಎಸ್.ಎಲ್.ಭೈರಪ್ಪ ಬೇಸರ

ಮೈಸೂರು, ಆ.24(ಎಂಟಿವೈ)– ರಾಜ್ಯಪಾಲರು, ಮುಖ್ಯಮಂತ್ರಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ರಾಜ್ಯ ಸರ್ಕಾರ ಸಮರ್ಥವಾಗಿ ಎದುರಿಸಲಾಗದೇ ರಾಜ್ಯಪಾಲರಿಗೆ ಅಗೌರವ ಉಂಟು ಮಾಡುತ್ತಿರುವುದು ಖಂಡನೀಯ ಎಂದು ಖ್ಯಾತ ಸಾಹಿತಿ ಡಾ.ಎಸ್.ಎಲ್.ಭೈರಪ್ಪ ಅವರು ರಾಜ್ಯ ಸರ್ಕಾರದ ವಿರುದ್ಧ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.


ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶನಿವಾರ ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಅವರಿಗೆ ನಾಗರಿಕ ಸನ್ಮಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಯಾವುದೇ ರಾಜ್ಯದಲ್ಲಿ ಹಗರಣ, ಭ್ರಷ್ಟಾಚಾರ ನಡೆದಾಗ ರಾಜ್ಯಪಾಲರು ಆ ಪ್ರಕರಣಕ್ಕೆ ಸಂಬಂಧಿಸಿದಂತೆ ನೇರವಾಗಿ ಕ್ರಮಕೈಗೊಳ್ಳಲು ಸಾಧ್ಯವಾಗದಿದ್ದರೂ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಬಹುದಾಗಿದೆ. ಆರೋಪ ಹೊತ್ತವರು ಪ್ರಾಮಾಣಿಕರಾಗಿದ್ದರೆ ತನಿಖೆ ಎದುರಿಸಬೇಕು. ಅದನ್ನು ಬಿಟ್ಟು ರಾಜ್ಯಪಾಲರ ಹುದ್ದೆಗೆ ಅಗೌರವ ತೋರಿಸಬಾರದು ಎಂದು ಸಲಹೆ ನೀಡಿದರು.

ರಾಜ್ಯಪಾಲರ ಹುದ್ದೆ ಪರಮೋಚ್ಚವಾದ ಸಾಂವಿಧಾನಿಕ ಹುದ್ದೆಯಾಗಿದೆ. ಕಾಲಾನಂತರ ಇದು ಗಂಡಾಂತರಕಾರಿ ಸ್ಥಾನವಾಗಿ ಪರಿಣಮಿಸಿದೆ. ಸ್ವಾತಂತ್ರ್ಯ ನಂತರ ಎಲ್ಲಾ ರಾಜ್ಯದಲ್ಲಿಯೂ ನೆಹರು ಕಾಂಗ್ರೆಸ್ ಅಸ್ತಿತ್ವದಲ್ಲಿತ್ತು. ಆಗ ರಾಜ್ಯಪಾಲರ ಹುದ್ದೆ ಪಡೆದವರು ಆರಾಮವಾಗಿ ಕಾರ್ಯ ನಿರ್ವಹಣೆ ಮಾಡುತ್ತಿದ್ದರು. ಕಾಲಾನಂತರ ವಿರೋಧ ಪಕ್ಷಗಳು ಹುಟ್ಟಿಕೊಂಡ ಮೇಲೆ ರಾಜ್ಯಪಾಲರು ತಮ್ಮನ್ನು ನೇಮಕ ಮಾಡಿದ ಪಕ್ಷದ ಪರವಾಗಿ ಹಾಗೂ ವಿರೋಧ ಪಕ್ಷದ ನಿಲುವಿಗೆ ವಿರುದ್ಧವಾಗಿ ವರ್ತಿಸುತ್ತಾರೆ ಎಂಬ ಆಪಾದನೆಗಳು ಆರಂಭವಾದವು. ಬಳಿಕ ರಾಜ್ಯಪಾಲರು ಭ್ರಷ್ಟಾಚಾರ ತಡೆಯಲು ಸಾಧ್ಯವಾಗದಂತಹ ಸನ್ನಿವೇಶ ಸೃಷ್ಟಿಯಾಯಿತು ಎಂದು ಬೇಸರ ವ್ಯಕ್ತಪಡಿಸಿದರು.

ಚುನಾವಣೆ ಸಮಯದಲ್ಲಿ ಭ್ರಷ್ಟಾಚಾರ ಮಾಡುತ್ತಾರೆ. ಒಂದು ಲಕ್ಷ ರೂಪಾಯಿ ಕೊಟ್ಟೆ ಎನ್ನುತ್ತಾರೆ. ಹೀಗಾದರೆ ನಮ್ಮ ಪ್ರಜಾಪ್ರಭುತ್ವದ ಕಥೆ ಏನು?, ಈ ವ್ಯವಸ್ಥೆಯನ್ನು ಸರಿಪಡಿಸುವುದಾದರೂ ಹೇಗೆ ಎಂದು ಅವರು ಪ್ರಶ್ನಿಸಿದರು.

ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಮಾತನಾಡಿ, ಕನ್ನಡ ನಾಡಿಗೆ ರಾಜ್ಯಪಾಲರಾಗಿ ಹೊರಗಿನಿಂದ ಬಂದವರಿಗೆ ನಾವು ಅವಮಾನ ಮಾಡಬಾರದು. ನಾನಾ ಸಾಂವಿಧಾನಿಕ ಹುದ್ದೆಗಳನ್ನು ಅಲಂಕರಿಸಿ ಅಪಾರವಾದ ಅನುಭವ ಹೊಂದಿರುವ ಆಧಾರದ ಮೇಲೆ ಅವರನ್ನು ರಾಜ್ಯಪಾಲರ ಹುದ್ದೆಗೆ ಆಯ್ಕೆ ಮಾಡಲಾಗಿರುತ್ತದೆ. ಅದನ್ನು ಅರಿತು ಅವರನ್ನು ಗೌರವಿಸಬೇಕು ಎಂದು ಸಲಹೆ ನೀಡಿದರು.

ಅಂತಾರಾಷ್ಟ್ರೀಯ, ದೇಶೀಯ ಕ್ರಿಕೆಟ್‌ಗೆ ಶಿಖರ್ ಧವನ್ ನಿವೃತ್ತಿ ಘೋಷಣೆ



ನವದೆಹಲಿ, ಆ.24– ಟೀಂ ಇಂಡಿಯಾ ಆಟಗಾರ ಶಿಖರ್ ಧವನ್ ದೇಶೀಯ, ಅಂತಾರಾಷ್ಟ್ರೀಯ ಸೇರಿದಂತೆ ಎಲ್ಲಾ ಮಾದರಿಯ ಕ್ರಿಕೆಟ್ ಪಂದ್ಯಕ್ಕೆ ನಿವೃತ್ತಿ ಘೋಷಿಸಿದ್ದಾರೆ.

38 ವರ್ಷದ ಶಿಖರ್ ಧವನ್ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋವನ್ನು ಹಂಚಿಕೊಳ್ಳುವ ಮೂಲಕ ನಿವೃತ್ತಿ ನಿರ್ಧಾರ ಪ್ರಕಟಿಸಿದ್ದಾರೆ. ಕಳೆದ ಎರಡು ವರ್ಷಗಳಿಂದ ತಂಡದಲ್ಲಿ ಅವರು ಸ್ಥಾನ ಪಡೆದಿರಲಿಲ್ಲ. ನಾನು ನನ್ನ ಕ್ರಿಕೆಟ್ ಅಧ್ಯಾಯವನ್ನು ಕೊನೆಗೊಳಿಸುತ್ತಿದ್ದೇನೆ. ಅಸಂಖ್ಯಾತ ನೆನಪುಗಳು ಮತ್ತು ಕೃತಜ್ಞತೆಗಳನ್ನು ನಾನು ಹೊತ್ತುಕೊಂಡು ಹೋಗುತ್ತಿದ್ದೇನೆ. ಪ್ರೀತಿ ಮತ್ತು ಬೆಂಬಲಕ್ಕಾಗಿ ಧನ್ಯವಾದಗಳು. ಜೈ ಹಿಂದ್! ಎಂದು ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಮೊದಲಿಗೆ ನನ್ನ ಕುಟುಂಬ, ನನ್ನ ಬಾಲ್ಯದ ಕೋಚ್ ತಾರಕ್ ಸಿನ್ಹಾ ಮತ್ತು ಮದನ್ ಶರ್ಮಾ ಅವರ ಮಾರ್ಗದರ್ಶನದಲ್ಲಿ ನಾನು ಕ್ರಿಕೆಟ್ ಕಲಿತಿದ್ದೇನೆ. ಭಾರತ ತಂಡವನ್ನು ಸೇರಬೇಕು ಎನ್ನುವುದು ನನ್ನ ಗುರಿಯಾಗಿತ್ತು. ಸೇರಿದ ನಂತರ ಇಡೀ ತಂಡ, ಕುಟುಂಬ, ಅಭಿಮಾನಿಗಳಿಂದ ಬೆಂಬಲ ಸಿಕ್ಕಿತು. ಈಗ ವಿದಾಯ ಹೇಳುವ ಸಮಯ ಬಂದಿದೆ. ಜೀವನದಲ್ಲಿ ಮುಂದುವರಿಯಲು ಪುಟವನ್ನು ತಿರುಗಿಸುವುದು ಮುಖ್ಯ. ಅದಕ್ಕಾಗಿಯೇ ನಾನು ಅಂತರರಾಷ್ಟ್ರೀಯ ಮತ್ತು ದೇಶೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸುತ್ತಿದ್ದೇನೆ. ನೆಮ್ಮದಿಯಿಂದ ನಿರ್ಗಮಿಸುತ್ತಿದ್ದೇನೆ ಎಂದು ಹೇಳಿದ್ದಾರೆ. 2010ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಏಕದಿನ ಪಂದ್ಯದ ಮೂಲಕ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಧವನ್, ಮೂರೂ ಮಾದರಿಯ ಕ್ರಿಕೆಟ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

ನನ್ನ ದೇಶಕ್ಕಾಗಿ ನಾನು ಸಾಕಷ್ಟು ಆಡಿದ್ದೇನೆ ಎಂಬ ತೃಪ್ತಿ ನನಗಿದೆ. ನನಗೆ ಈ ಅವಕಾಶವನ್ನು ನೀಡಿದ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ದೆಹಲಿ ಮತ್ತು ಜಿಲ್ಲಾ ಕ್ರಿಕೆಟ್ ಸಂಸ್ಥೆಗೆ ಧನ್ಯವಾದ ಅರ್ಪಿಸುತ್ತೇನೆ ಎಂದು ಹೇಳಿದ್ದಾರೆ.

ಧವನ್ ಭಾರತದ ಪರ 34 ಟೆಸ್ಟ್, 167 ಏಕ ದಿನ ಹಾಗೂ 67 ಟಿ–20 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ. ಏಕದಿನ ಮಾದರಿಯಲ್ಲಿ 44.11 ಸರಾಸರಿಯಲ್ಲಿ 6793 ರನ್ ಗಳಿಸಿದ್ದಾರೆ. ಟೆಸ್ಟ್ ಕ್ರಿಕೆಟ್‌ನಲ್ಲಿ 40.61ರ ಸರಾಸರಿಯಲ್ಲಿ 2315 ರನ್ ಗಳಿಸಿದ್ದಾರೆ. 2013ರ ಚಾಂಪಿಯನ್ಸ್ ಟ್ರೋಫಿಯಲ್ಲಿ ಶಿಖರ್ ಧವನ್ ಹಾಗೂ ರೋಹಿತ್ ಶರ್ಮಾ ಆರಂಭಿಕ ಜೋಡಿ ಉತ್ತಮ ಪ್ರದರ್ಶನ ನೀಡಿತ್ತು. ಮತ್ತು ನನ್ನ ಎಲ್ಲಾ ಅಭಿಮಾನಿಗಳಿಗೆ ನಾನು ನಿಜವಾಗಿಯೂ ಕೃತಜ್ಞನಾಗಿದ್ದೇನೆ ಎಂದು ತಿಳಿಸಿದರು.

ವರ್ಗೀಕರಣ ವೇಳೆ ಈಗಿರುವ ಪರಿಶಿಷ್ಟ ಜಾತಿಯನ್ನು ಮೀಸಲಾತಿಯಿಂದ ಕೈ ಬಿಡಬಾರದು

• ಸರ್ಕಾರಕ್ಕೆ ಪ್ರೊ. ರವಿವರ್ಮ ಕುಮಾರ್ ಸಲಹೆ • ಜಾತಿ ಜನಗಣತಿಯ ದತ್ತಾಂಶ ಸಂಗ್ರಹಿಸಬೇಕು • ವರ್ಗೀಕರಣ ಬಹಳ ಕ್ಲಿಷ್ಟಕರ • ಅಸ್ಪೃಶ್ಯತೆ, ಅಸಮಾನತೆ ತಾಂಡವವಾಡುತ್ತಿದೆ • ವರ್ಗೀಕರಣದಲ್ಲಿ ಕರ್ನಾಟಕ ಮುಂದಡಿ ಇಡಬೇಕು



ಮೈಸೂರಿನ ಮಾನಸ ಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದಲ್ಲಿ ಶನಿವಾರ ಮೀಸಲಾತಿ ಮತ್ತು ವರ್ಗೀಕರಣ ಕುರಿತ ಕಾರ್ಯಾಗಾರವನ್ನು ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ವಿಶ್ರಾಂತ ಅಧ್ಯಕ್ಷ ಪ್ರೊ.ರವಿವರ್ಮ ಕುಮಾರ್ ಉದ್ಘಾಟಿಸಿದರು.

ಮೈಸೂರು, ಆ.24(ಬಿಎಲ್‌ಯು)– ಪರಿಶಿಷ್ಟ ಜಾತಿಗಳ ವರ್ಗೀಕರಣ ಮಾಡುವ ವೇಳೆ ಪರಿಶಿಷ್ಟ ಪಟ್ಟಿಯಲ್ಲಿ ಈಗಿರುವ ಯಾವುದೇ ಜಾತಿಯನ್ನು ಮೀಸಲಾತಿ ವ್ಯವಸ್ಥೆಯಿಂದ ದೂರ ಇಡಬಾರದು ಎಂದು ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ವಿಶ್ರಾಂತ ಅಧ್ಯಕ್ಷ ಪ್ರೊ.ರವಿವರ್ಮ ಕುಮಾರ್ ಆಗ್ರಹಿಸಿದರು.

ಮೈಸೂರಿನ ಮಾನಸ ಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದಲ್ಲಿ ಇಂದು ಮೀಸಲಾತಿ ಮತ್ತು ವರ್ಗೀಕರಣ ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಈಗಿರುವ ಪರಿಶಿಷ್ಟ ಜಾತಿಗಳ ನಡುವೆಯೇ ವರ್ಗೀಕರಣ ಆಗಬೇಕು. ವರ್ಗೀಕರಣ ಪಟ್ಟಿಯಲ್ಲಿ ಬೇರೆ ಯಾವುದನ್ನೂ ಹೊಸದಾಗಿ ಸೇರಿಸಬಾರದು ಎಂದು ಸಲಹೆ ನೀಡಿದರು.

ವರ್ಗೀಕರಣ ಸಂಬಂಧ ಸಂವಿಧಾನದಲ್ಲಿ ಸೂಕ್ತ ತಿದ್ದುಪಡಿ ಆಗಬೇಕು ಎಂದು ಪ್ರೊ. ರವಿವರ್ಮ ಕುಮಾರ್ ಒತ್ತಿ ಹೇಳಿದರು. ಪರಿಶಿಷ್ಟ ಜಾತಿ ವರ್ಗೀಕರಣ ಸಂಬಂಧ ಸುಪ್ರೀಂಕೋರ್ಟ್‌ನ ಸಂವಿಧಾನಿಕ ಪೀಠ ನೀಡಿರುವ ತೀರ್ಪು ಸ್ವಾಗತಾರ್ಹವಾಗಿದೆ. ಆದರೆ ವರ್ಗೀಕರಣ ಮಾಡುವ ಮೊದಲು ಪ್ರತಿಯೊಂದು ಜಾತಿಗಳ ಜನ ಗಣತಿ ನಡೆಸಿ ನಿಖರ ಹಾಗೂ ಸಮರ್ಥನೀಯವಾದ ದತ್ತಾಂಶ (ಡಾಟಾ) ಸಂಗ್ರಹಿಸಬೇಕು ಎಂದು ಹೇಳಿದರು.

ಕರ್ನಾಟಕದ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ 101 ಜಾತಿಗಳಿವೆ. ಇದರಲ್ಲಿ ಅಸ್ಪೃಶ್ಯರು ಹಾಗೂ ಸ್ಪೃಶ್ಯರು ಇದ್ದು, ಅಸಮಾನತೆ ಬೇರೂರಿದೆ. ಈ ಹಿನ್ನೆಲೆಯಲ್ಲಿ ವರ್ಗೀಕರಣ ಆಗುವುದು ಅತ್ಯವಶ್ಯ ಎಂದು ಪ್ರೊ.ರವಿವರ್ಮ ಕುಮಾರ್ ಅಭಿಪ್ರಾಯಪಟ್ಟರು.

ಪರಿಶಿಷ್ಟ ಜಾತಿಯ ವರ್ಗೀಕರಣ ಎಂಬುವುದು ಸರಳವಾದ ವಿಚಾರವಲ್ಲ ಇದು ಬಹಳ ಕ್ಲಿಷ್ಟಕರವಾಗಿದೆ. ಈ ಹಿನ್ನೆಲೆ ವರ್ಗೀಕರಣ ತೀರ್ಮಾನದಲ್ಲಿ ಸವಾಲು ಇದೆ ಎಂದು ಸರ್ಕಾರವನ್ನು ಎಚ್ಚರಿಸಿದರು.

ವರ್ಗೀಕರಣ ಮಾಡುವಾಗ ಯಾವ ಮಾನದಂಡ ಅನುಸರಿಸಬೇಕು ಎಂಬುದು ಇನ್ನು ಸ್ಪಷ್ಟವಾಗಿಲ್ಲ. ಇದರ ಬಗ್ಗೆ ಸ್ಪಷ್ಟ ಚಿತ್ರಣ ರೂಪಿಸಲು ತಜ್ಞರು ಹಾಗೂ ಶೈಕ್ಷಣಿಕ ವಲಯದಲ್ಲಿ ಸಮಗ್ರವಾದ ಅರ್ಥಪೂರ್ಣ ಸಮಾಲೋಚನೆ ನಡೆಯಬೇಕು ಎಂದು ಪ್ರೊ.ರವಿವರ್ಮ ಕುಮಾರ್ ಅಭಿಪ್ರಾಯಪಟ್ಟರು.

ಸುಪ್ರೀಂಕೋರ್ಟ್ ತೀರ್ಪು ನೀಡುವ ವೇಳೆ ವರ್ಗೀಕರಣದ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡಿದೆ. ಇದರಿಂದ ರಾಜ್ಯ ಸರ್ಕಾರ ವರ್ಗೀಕರಣ ವಿಚಾರದಲ್ಲಿ ಮುಂದಡಿ ಇಡಬೇಕು. ಜಾತಿ ಜನಗಣತಿ ನಡೆಸಿ, ಅದರ ಅಂಕಿ ಅಂಶಗಳ ಮಾಹಿತಿ ಆಧಾರದ ಮೇಲೆ ವರ್ಗೀಕರಣ ಮಾಡಬೇಕು. ಆದರೆ ಇದಕ್ಕಾಗಿ ಸರ್ಕಾರ ಪ್ರತ್ಯೇಕ ಆಯೋಗ ರಚನೆ ಮಾಡುವುದು ಅತ್ಯವಶ್ಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮೀಸಲಾತಿ ಅವಶ್ಯ: ಸರ್ಕಾರಿ ಸೇವೆ ಸೇರಿದಂತೆ ಯಾವುದೇ ಸೇವೆಯಲ್ಲಿ ಪ್ರಾತಿನಿಧ್ಯ ದೊರೆಯದ ಸೌಲಭ್ಯ ವಂಚಿತರಿಗೆ ಪ್ರಾಶಸ್ತ್ಯ ನೀಡುವುದಕ್ಕೆ ಮೀಸಲಾತಿ ಅವಶ್ಯ ಎಂದು ಒತ್ತಿ ಹೇಳಿದ ಪ್ರೊ.ರವಿವರ್ಮ ಕುಮಾರ್, ಇನ್ನು ಕೂಡ ದೇಶದಲ್ಲಿ ಅಸ್ಪೃಶ್ಯತೆ ತಾಂಡವವಾಡುತ್ತಿದ್ದು, ಅಸಮಾನತೆ ಎದ್ದು ಕಾಣುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಹಿಂದೆ ಬ್ರಾಹ್ಮಣ ಸಮುದಾಯ ಎಲ್ಲಾ ರಂಗದಲ್ಲೂ ಪ್ರಾತಿನಿಧ್ಯ ಪಡೆದಿದ್ದರು. ಪ್ರಾಯಶಃ ಜನಸಂಖ್ಯೆ ಹೆಚ್ಚಿರುವ ಕಾರಣ ಅವರಿಗೆ ಪ್ರಾಶಸ್ತ್ಯ ದೊರೆತಿರಬಹುದು ಎಂದು ಪರಿಗಣಿಸಲಾಗಿತ್ತು. ಆದರೆ 1872 ರಲ್ಲಿ ನಡೆದ ಮೊದಲ ಜನಗಣತಿಯಲ್ಲಿ ಶೇಕಡ 3 ರಷ್ಟು ಬ್ರಾಹ್ಮಣರ ಜನಸಂಖ್ಯೆ ಇದೆ ಎಂಬುದು ದೃಢಪಟ್ಟಿತು. ಆದರೆ ಪ್ರತಿಯೊಂದು ರಂಗದಲ್ಲಿಯೂ ಬ್ರಾಹ್ಮಣರು ಶೇಕಡ 95 ರಷ್ಟು ಪ್ರಾತಿನಿಧ್ಯ ಪಡೆದಿದ್ದರು ಎಂದು ಹೇಳಿದರು.

1872 ರಲ್ಲಿ ಜನಗಣತಿ ನಂತರ ಎರಡು ವರ್ಷವಾದ ಮೇಲೆ 1874 ರಲ್ಲಿ ಮೈಸೂರು ಸಂಸ್ಥಾನದಲ್ಲಿ ಮೀಸಲಾತಿ ಪರಿಚಯಿಸಲಾಯಿತು. ಇದರ ಆಧಾರದ ಮೇಲೆ ಪೊಲೀಸ್ ಇಲಾಖೆಯಲ್ಲಿ ಮೊದಲ ಮೀಸಲಾತಿ ಕಲ್ಪಿಸಲಾಯಿತು. ಈಗಲೂ ಇದೇ ಮಾದರಿಯಲ್ಲಿ ಕರ್ನಾಟಕ ರಾಜ್ಯವೇ ಸುಪ್ರೀಂಕೋರ್ಟ್ ತೀರ್ಪಿನ ಆಧಾರದ ಮೇಲೆ ಪರಿಶಿಷ್ಟ ಜಾತಿ ವರ್ಗೀಕರಣದಲ್ಲಿ ಮುಂದಡಿ ಇಡಬೇಕು ಎಂದು ಒತ್ತಾಯಿಸಿದರು.

ಬ್ರಿಟಿಷರ ಕಾಲದಲ್ಲಿ ಜನಗಣತಿ ಆಯುಕ್ತ ಜೆ.ಹೆಚ್.ಹಟ್ಟನ್ ಅಸ್ಪೃಶ್ಯತೆಯ ಮುಖ ಆಧರಿಸಿ 9 ಮಾನದಂಡ ಅನುಸರಿಸಿ ಮೊದಲ ಬಾರಿಗೆ ಪರಿಶಿಷ್ಟ ಜಾತಿ ಪಟ್ಟಿ ತಯಾರಿಸಿದ್ದರು. ಈ ಪಟ್ಟಿಯಲ್ಲಿ ಹಿಂದೂಗಳಷ್ಟೇ ಅಲ್ಲದೆ ಸಿಖ್ಖರು, ಬೌದ್ಧರು ಕೂಡ ಇದ್ದಾರೆ ಎಂದು ಹೇಳಿದರು.

ಒಟ್ಟಾರೆ ಇಂದಿಗೂ ಕೂಡ ಸಮಾಜ ಅಸ್ಪೃಶ್ಯತೆಯಿಂದ ಮುಕ್ತವಾಗಿಲ್ಲ. ಅಸಮಾನತೆ ಇದೆ. ಇದರಿಂದ ಕೀಳರಿಮೆ ಆವರಿಸಿದೆ ಎಂದು ಪ್ರೊ.ರವಿವರ್ಮ ಕುಮಾರ್ ಬೇಸರ ವ್ಯಕ್ತಪಡಿಸಿದರು.

ನವದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ. ವೈ.ಚಿನ್ನಾರಾವ್ ಆಂಧ್ರ ಪ್ರದೇಶ– ತೆಲಂಗಾಣ ಮಾದರಿ, ತಮಿಳುನಾಡು ರಾಜ್ಯ ಶೈಕ್ಷಣಿಕ ನೀತಿಯ ಉನ್ನತ ಮಟ್ಟದ ಸಮಿತಿ ಸಂಯೋಜಕ ಪ್ರೊ.ಎಲ್.ಜವಹರ್ ನೇಸನ್ ತಮಿಳುನಾಡು ಮಾದರಿ ಕುರಿತು ವಿಚಾರ ಮಂಡಿಸಿದರು.

ಭಾರತ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಕಾನೂನು ಶಾಲೆಯ ವಿಶ್ರಾಂತ ಕುಲಪತಿ ಪ್ರೊ.ಜಿ.ಮೋಹನ್ ಗೋಪಾಲ್ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮಿ. ಬಚ್ಚನ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಭೀಮಾ (ಕ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ತಂಗಾಲಾನ್ (ತ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಗೌರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ತ್ರೀ–2 (ಹಿ)	4 ಪ್ರದರ್ಶನಗಳು
ಪ್ರಭಾ	
ತಾಜ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಹೆರಾಲ್ಡ್ ಅಂಡ್ ದಿ ಪರ್ಪಲ್ ಕ್ರಯಾನ್ (ಇಂ): ಬೆ.11ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.1ಕ್ಕೆ, ಸಂ.4.05ಕ್ಕೆ, ಸ್ತ್ರೀ 2 (ಹಿಂ): ರಾ.7.10ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಬೆ.10.45ಕ್ಕೆ, ಹೆರಾಲ್ಡ್ ಅಂಡ್ ದಿ ಪರ್ಪಲ್ ಕ್ರಯಾನ್ (ಇಂ): ಮ.2.10ಕ್ಕೆ, ಪೌಡರ್ (ಕ): ಸಂ.4.30ಕ್ಕೆ, ರಾ.7.15ಕ್ಕೆ, ವಾಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ರಾ.10ಕ್ಕೆ.
ಸ್ಕ್ರೀನ್ 3	ಏಲಿಯನ್ ರೊಮುಲಸ್ (ಇಂ): ಬೆ.10.55ಕ್ಕೆ, ಸಂ.4.50ಕ್ಕೆ, ರಾ.7.30ಕ್ಕೆ, ತಂಗಲಾನ್ (ತ): ಮ.1.25ಕ್ಕೆ, ಭೀಮಾ (ಕ): ರಾ.10ಕ್ಕೆ.
ಸ್ಕ್ರೀನ್ 4	ಸ್ತ್ರೀ 2 (ಹಿಂ): ಬೆ.10.20ಕ್ಕೆ, ಸಂ.4.10ಕ್ಕೆ, ಭೀಮಾ (ಕ): ಮ.1.15ಕ್ಕೆ, ಕೃಷ್ಣಂ ಪ್ರಣಯ ಸಖಿ (ತ): ರಾ.7.05ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಭೀಮಾ (ಕ): ಬೆ.10.50ಕ್ಕೆ, ಪೌಡರ್ (ಕ): ಮ.1.45ಕ್ಕೆ, ಸಂ.4.20ಕ್ಕೆ, ಫೂಟೇಜ್ (ಮ): ಸಂ.6.55ಕ್ಕೆ, ನುನಕ್ಕುಝಿ (ಮ): ರಾ.9.25ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.12.25ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ಭೀಮಾ (ಕ): ಮ.3.50ಕ್ಕೆ.
ಸ್ಕ್ರೀನ್ 3	ಸ್ತ್ರೀ 2 (ಹಿಂ): ಬೆ.10ಕ್ಕೆ, ಮ.12.50ಕ್ಕೆ, ಸಂ.6.50ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.45ಕ್ಕೆ, ಹಂಟ್ (ಮ): ರಾ.9.40ಕ್ಕೆ.
ಸ್ಕ್ರೀನ್ 4	ಕೃಷ್ಣಂ ಪ್ರಣಯ ಸಖಿ (ಕ): ಬೆ.10.20ಕ್ಕೆ, ಭೀಮಾ (ಕ): ಮ.1.25ಕ್ಕೆ, ಸಂ.6.35ಕ್ಕೆ, ಹಂಟ್ (ಮ): ಸಂ.4.20ಕ್ಕೆ, ಸ್ತ್ರೀ 2 (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಭಾರತೀಯರ ಜೀವನ ಮೌಲ್ಯಗಳು ಕುಸಿಯುತ್ತಿವೆ

ನಿವೃತ್ತ ಪ್ರಾಧ್ಯಾಪಕಿ ಡಾ.ಎಸ್.ಪಿ.ಉಮಾದೇವಿ ವಿಷಾದ



ಮೈಸೂರು, ಆ.24(ಎಸ್‌ಪಿಎನ್)– ಭಾರತೀಯ ಪರಂಪರೆಯಲ್ಲಿ ಮೌಲ್ಯಗಳು ಜೀವಂತವಾಗಿದ್ದರೂ ಭಾರತೀಯರ ಜೀವನ ಮೌಲ್ಯ ದಿನದಿಂದ ದಿನಕ್ಕೆ ಕುಸಿಯುತ್ತಿವೆ ಎಂದು ನಿವೃತ್ತ ಪ್ರಾಧ್ಯಾಪಕಿ ಡಾ.ಎಸ್.ಪಿ. ಉಮಾದೇವಿ ವಿಷಾದ ವ್ಯಕ್ತಪಡಿಸಿದ್ದಾರೆ.

ಮೈಸೂರು ಡಾ.ರಾಧಾಕೃಷ್ಣನ್ ನಗರದಲ್ಲಿ ಶರಣ ಸಾಹಿತ್ಯ ಪರಿಷತ್ ಮೈಸೂರು ಘಟಕ, ಕದಳಿ ಮಹಿಳಾ ವೇದಿಕೆ ಹಾಗೂ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಸಹಯೋಗದೊಂದಿಗೆ ನಡೆದ ವಚನ ಶ್ರಾವಣ: ಮನೆಮನೆಗೆ ವಚನ ಶ್ರಾವಣ ಸಂದೇಶ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

12ನೇ ಶತಮಾನದಲ್ಲಿ ಶರಣರು ತಮ್ಮ ಬದುಕಿನ ಕಣಕಣದಲ್ಲೂ ಮೌಲ್ಯಯುತ ಜೀವನವನ್ನು ನಡೆಸಿ ವಿಶ್ವಕ್ಕೆ ಮಾದರಿಯಾಗಿದ್ದರು. ಹಾಗಾಗಿ ಇಂದಿನ ಪೀಳಿಗೆ ಮೌಲ್ಯಯುತ ಜೀವನಕ್ಕಾಗಿ ವಚನ ಸಾಹಿತ್ಯವನ್ನು ಅಧ್ಯಯನ ನಡೆಸುವಂತೆ ಸಲಹೆ ನೀಡಿದರು.

ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಶಿಸ್ತು ಮತ್ತು ಶ್ರದ್ಧೆಯನ್ನು ಮೈಗೂಡಿಸಿಕೊಳ್ಳಬೇಕಾದರೆ, ಸಾಧಕರ ಜೀವನ ಚರಿತ್ರೆಯನ್ನು ಅಧ್ಯಯನ ಮಾಡಬೇಕು. ಬಸವಣ್ಣ, ಅಲ್ಲಮಪ್ರಭು, ಡಾ.ಅಬ್ದುಲ್ ಕಲಾಂ, ಬಿಲ್‌ಗೇಟ್ಸ್, ಥಾಮಸ್ ಅಲ್ವಾ ಎಡಿಸನ್ ಹಾಗೂ ಮೇಡಂ ಕ್ಯೂರಿ ಸೇರಿದಂತೆ ಇತರೆ ಸಾಧಕರ ಜೀವನ ಚರಿತ್ರೆಯನ್ನು ಪ್ರತಿಯೊಬ್ಬರು ಅಧ್ಯಯನ ಮಾಡುವಂತೆ ಸಲಹೆ ನೀಡಿದರು.

ದೀಪ ಬೆಳಗಿಸುವುದು ನಮ್ಮ ಸಂಸ್ಕೃತಿ. ಹಾರಿಸುವುದು ಅಸಂಸ್ಕೃತಿ. ಇಂದು ಅಂತಹ ಸಂಸ್ಕೃತಿಯ ಬದುಕಿಗೆ ವಿದ್ಯಾರ್ಥಿಗಳು ಒತ್ತು ನೀಡುತ್ತಿರುವುದು ವಿಷಾದದ ಸಂಗತಿ ಎಂದ ಅವರು, ವಿದ್ಯೆ ನಮ್ಮ ಜೀವನದ ಮೌಲ್ಯಗಳನ್ನು ಹೆಚ್ಚಿಸುತ್ತವೆ. ಅಲ್ಲದೆ, ಬಾಲ್ಯದಲ್ಲಿ ಬೆಳೆಸಿಕೊಂಡ ಮೌಲ್ಯಯುತ ಕೆಲ ಘಟನೆಗಳು ಜೀವನಪರ್ಯಂತ ಇರುತ್ತವೆ ಎಂದರು.

ಈ ವೇಳೆ ಶರಣಸಾಹಿತ್ಯ ಪರಿಷತ್ ಮೈಸೂರು ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ನಾಗಭೂಷಣ್, ಸೌಮ್ಯ, ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲೆ ಎಂ.ಆಶಾ ಸೇರಿದಂತೆ ಇತರರಿದ್ದರು. ಅಂಬಿಕಾ ಕಾರ್ಯಕ್ರಮ ನಿರೂಪಿಸಿದರು. ಈ ವೇಳೆ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ರಾಜ್ಯಪಾಲರು ಕೇಂದ್ರದ ಕೈಗೊಂಬೆ

● ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಆರೋಪ ● ಸಿದ್ದರಾಮಯ್ಯನವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿ ಕುಮಾರಸ್ವಾಮಿ, ಬಿಜೆಪಿ ನಾಯಕರ ವಿರುದ್ಧದ ದೂರಿಗೆ ಮೌನ ವಹಿಸಿರುವುದೇ ಇದಕ್ಕೆ ಸಾಕ್ಷಿ

ಮೈಸೂರು, ಆ.24(ಎಂಟಿವೈ)– ರಾಜ್ಯಪಾಲರು ಕೇಂದ್ರ ಸರ್ಕಾರದ ಕೈಗೊಂಬೆಯಾಗಿದ್ದಾರೆ. ಹಾಗಾಗಿಯೇ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಬಿಜೆಪಿ ನಾಯಕರ ವಿರುದ್ಧದ ಪ್ರಕರಣದಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ಹಿಂದೇಟು ಹಾಕುತ್ತಿದ್ದಾರೆ ಎಂದು ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಆರೋಪಿಸಿದ್ದಾರೆ.



ಮುಖ್ಯಮಂತ್ರಿ ಚಂದ್ರು

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪಕ್ಷಪಾತ ಧೋರಣೆ ಅನುಸರಿಸುತ್ತಿದ್ದಾರೆ. ಇದು ಮೇಲ್ನೋಟಕ್ಕೆ ಅವರ ವರ್ತನೆ ಸಾಬೀತು ಮಾಡಿದೆ. ಒಬ್ಬ ಖಾಸಗಿ ವ್ಯಕ್ತಿ ನೀಡಿದ ದೂರನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿರುವುದನ್ನು ಕಂಡರೆ ರಾಜ್ಯಪಾಲರ ನಡೆ ಅವಲೋಕಿಸಬಹುದು. ಮುಡಾ ಹಗರಣದಲ್ಲಿ ಕೇವಲ ಮುಖ್ಯಮಂತ್ರಿ ಮಾತ್ರವಲ್ಲ ಎಲ್ಲರೂ ಭಾಗಿಯಾಗಿದ್ದಾರೆ. ಈ ಪ್ರಕರಣದಲ್ಲಿ ರಾಜ್ಯಪಾಲರು ಕೇಂದ್ರದ ಕೈಗೊಂಬೆಯಾಗಿ ವರ್ತಿಸುತ್ತಿದ್ದಾರೆ. ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದಂತೆ ಕೇಂದ್ರ ಸಚಿವ ಹೆಚ್.ಡಿ.ಕುಮಾರ ಸ್ವಾಮಿ ಮತ್ತು ಇತರೇ ಬಿಜೆಪಿ ನಾಯಕರ ವಿರುದ್ಧವೂ ರಾಜ್ಯಪಾಲರು ಅನುಮತಿ ನೀಡಬೇಕು ಎಂದು ಒತ್ತಾಯಿಸಿದರು.

ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಿ: ರಾಜ್ಯ ಸರ್ಕಾರ ಶೀಘ್ರದಲ್ಲಿಯೇ ಪಾಲಿಕೆ ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಕ್ರಮ ಕೈಗೊಳ್ಳಬೇಕು. ರಾಜಕೀಯ ಕಾರಣಕ್ಕಾಗಿ ಅಧಿಕಾರದಲ್ಲಿದ್ದ ರಾಜಕೀಯ ಪಕ್ಷಗಳು, ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಮನಸ್ಸು ಮಾಡದೇ ನಿರ್ಲಕ್ಷ್ಯವಹಿಸಿರುವುದು ಸರಿಯಲ್ಲ. ಈಗಿನ ಕಾಂಗ್ರೆಸ್ ಸರ್ಕಾರ ಚುನಾವಣೆಗೆ ಇರುವ ಅಡೆ ತಡೆಗಳನ್ನು ನಿವಾರಿಸಿಕೊಂಡು ಆದಷ್ಟು ಬೇಗ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವ ಮೂಲಕ ಪ್ರಜಾಪ್ರಭುತ್ವಕ್ಕೆ ಗೌರವ ನೀಡಬೇಕು ಎಂದು ಮನವಿ ಮಾಡಿದರು.

ಪಕ್ಷ ಸಂಘಟನೆಗೆ ಒತ್ತು: ರಾಜ್ಯದಲ್ಲಿ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಗ್ರಾಮಾಂತರ ಪ್ರದೇಶದಲ್ಲಿಯೂ ಪಕ್ಷವನ್ನು ಸಂಘಟಿಸಲಾಗುತ್ತಿದ್ದು, ತಾಲೂಕುವಾರು ಘಟಕಗಳನ್ನು ರಚಿಸಲು ಉದ್ದೇಶಿಸಲಾಗಿದೆ. ಇತ್ತೀಚೆಗೆ ನಗರ ಪ್ರದೇಶದೊಂದಿಗೆ ಗ್ರಾಮೀಣ ಪ್ರದೇಶದಲ್ಲಿಯೂ ಆಮ್ ಆದ್ಮಿ ಪಾರ್ಟಿಯ ಬಗ್ಗೆ ಜನರಿಗೆ ಒಲವು ಹೆಚ್ಚಾಗಿರುವುದು ಕಂಡು ಬಂದಿದ್ದು, ಈ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿಯೂ ಪಕ್ಷವನ್ನು ಸಂಘಟಿಸಲು ಕ್ರಮ ಕೈಗೊಳ್ಳಲಾಗುವುದು. ಲೋಕ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗಿತ್ತು, ಈ ಮೂಲಕ ಕೇಂದ್ರದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಬಾರದು ಎಂಬ ಉದ್ದೇಶದಿಂದ ಕೈ ಜೋಡಿಸಲಾಗಿತ್ತು. ಆದರೆ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಆಮ್ ಆದ್ಮಿ ಪಾರ್ಟಿಯು ಸ್ವತಂತ್ರವಾಗಿ ಸ್ಪರ್ಧಿಸಲಿದೆ ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಸಚಿವ ಕುಮಾರಸ್ವಾಮಿ ಸೇರಿ ಇತರರ ವಿರುದ್ಧವೂ ಪ್ರಾಸಿಕ್ಯೂಷನ್‌ಗೆ ಅನುಮತಿಗೆ ಆಗ್ರಹಿಸಿ ಪತ್ರ ಚಳವಳಿ

ಮೈಸೂರು, ಆ.24(ಎಂಟಿವೈ)– ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮತ್ತು ಇತರರ ಮೇಲೆ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ಆಗ್ರಹಿಸಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಹಾಗೂ ಅಹಿಂದ ಸಂಘಟನೆ ವತಿಯಿಂದ ಶನಿವಾರ ಪತ್ರ ಚಳವಳಿ ನಡೆಯಿತು.



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮತ್ತು ಇತರರ ಮೇಲೆ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆಯ ಕಾರ್ಯಕರ್ತರು ಶನಿವಾರ ಪತ್ರ ಚಳವಳಿ ನಡೆಸಿದರು.

ಮೈಸೂರಿನ ರಾಮಸ್ವಾಮಿ ವೃತ್ತದ ಬಳಿಯ ಪೋಸ್ಟ್ ಬಾಕ್ಸ್ ಬಳಿ ಸೇರಿದ ಪ್ರತಿಭಟನಾಕಾರರು, ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಖಂಡಿಸಿ ರಾಜ್ಯಪಾಲರಿಗೆ ಬರೆದ ಪತ್ರವನ್ನು ಅಂಚೆ ಪಟ್ಟಿಗೆಗೆ ಹಾಕುವ ಮೂಲಕ ತಮ್ಮ ಪ್ರತಿರೋಧ ವ್ಯಕ್ತಪಡಿಸಿದರು.

ಇದೇ ವೇಳೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಕೆ.ಎಸ್.ಶಿವರಾಮು ಮಾತನಾಡಿ, ತನಿಖೆಯೇ ಇನ್ನೂ ಆರಂಭವಾಗದ ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾತ್ರ ಇಲ್ಲದಿದ್ದರೂ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವ ಮೂಲಕ ರಾಜ್ಯಪಾಲರು ಸಂವಿಧಾನ ಬಾಹಿರ ನಡೆಯನ್ನು ಅನುಸರಿಸಿದ್ದಾರೆ. ತನ್ಮೂಲಕ ಪಕ್ಷಪಾತ ಮಾಡಿರುವುದು ಅಕ್ಷಮ್ಯ ಮತ್ತು ಖಂಡನಾರ್ಹವಾದದ್ದು ಎಂದು ಆರೋಪಿಸಿದರು.

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ 8–10 ತಿಂಗಳುಗಳಿಂದ ಲೋಕಾಯುಕ್ತ ಮತ್ತು ಎಸ್‌ಐಟಿ ಸಂಸ್ಥೆಗಳು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ವಿನಂತಿಸಲಾಗಿದೆ. ಅಲ್ಲದೆ ಜನಾರ್ಧನರೆಡ್ಡಿ, ಶಶಿಕಲಾ ಜೊಲ್ಲೆ, ಮುರುಗೇಶ್ ನಿರಾಣಿ ಇವರುಗಳ ಮೇಲೂ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ತಮಗೆ ಮನವಿ ಸಲ್ಲಿಸಿದೆ. ಇವರ ಪ್ರಕರಣಕ್ಕೆ ಅನುಮತಿ ನೀಡದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದೀರಿ. ಇದರಿಂದ ತಾವು ಬಿಜೆಪಿ–ಜೆಡಿಎಸ್ ಪಕ್ಷದ ವಕ್ತಾರರು ಎಂದು ಸಾಬೀತಾಗಿದೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಪದಾಧಿಕಾರಿಗಳಾದ ಹೆಚ್.ಎಸ್.ಪ್ರಕಾಶ್, ಯೋಗೇಶ್ ಉಪ್ಪಾರ್, ರವಿನಂದನ್, ಲೋಕೇಶ್ ಕುಮಾರ್ ಮಾದಾಪುರ, ಮೊಗಣ್ಣಾಚಾರ್, ಕೇಶವ, ಬಸಪ್ಪ, ಸಿದ್ದು, ಸುನಿಲ್ ನಾರಾಯಣ್, ಮಹೇಂದ್ರ ಕಾಗಿನೆಲೆ, ರವಿ ನಝರ್‌ಬಾದ್, ಹರೀಶ್ ಮೊಗಣ್ಣ, ರಾಜೇಶ್, ಲಕ್ಷ್ಮಿ, ಸಲೀಂ, ರಹೀಂ, ನಾಸಿರ್, ಗಂಟಯ್ಯ, ಶಿವಪ್ಪ, ರಾಜಶೇಖರ್ ಇದ್ದರು.

ಮೂಡಲಪಾಯ ಯಕ್ಷಗಾನ ಕಲೆ ಉಳಿವಿಗೆ ಪ್ರತ್ಯೇಕ ಅಕಾಡೆಮಿ ಸ್ಥಾಪನೆಗೆ ಆಗ್ರಹ

ಮೈಸೂರು, ಆ.24(ಎಸ್‌ಪಿಎನ್)– ಮೂಡಲಪಾಯ ಯಕ್ಷಗಾನ ಕಲೆ ಉಳಿವಿಗೆ ಪ್ರತ್ಯೇಕ ಅಕಾಡೆಮಿ ಸ್ಥಾಪನೆ ಅಗತ್ಯತೆ ಇದೆ ಎಂದು ಕರ್ನಾಟಕ ಬಯಲಾಟ ಅಕಾಡೆಮಿ ಸದಸ್ಯ ಚಂದ್ರು ಕಾಳೇನಹಳ್ಳಿ ಅಭಿಪ್ರಾಯಪಟ್ಟರು.



'ಏಳು ಸಮುದ್ರದಾಚೆ' (ಮೂಡಲಪಾಯ ಯಕ್ಷಗಾನ ಆಟ) ಯಕ್ಷಗಾನ ಆಟವನ್ನು ಉದ್ಘಾಟಿಸಲಾಯಿತು.

ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಮೈಸೂರು ಯಕ್ಷರಂಗ ಹಾಗೂ ಕದಂಬ ರಂಗವೇದಿಕೆ ಸಹಯೋಗದೊಂದಿಗೆ ಆಯೋಜಿಸಿರುವ ಏಳು ಸಮುದ್ರದಾಚೆ(ಮೂಡಲಪಾಯ ಯಕ್ಷಗಾನ ಆಟ) ಯಕ್ಷಗಾನ ಆಟವನ್ನು ಉದ್ಘಾಟಿಸಿ ಮಾತನಾಡಿದರು.

ಕೆಲ ಹಲವು ವರ್ಷಗಳಿಂದ ಮೂಡಲಪಾಯ ಯಕ್ಷಗಾನ ಉಳಿವಿಗೆ ಪ್ರತ್ಯೇಕ ಅಕಾಡೆಮಿ ಸ್ಥಾಪಿಸುವಂತೆ ಸರ್ಕಾರದ ಮೇಲೆ ಒತ್ತಡ ತರುತ್ತಲೇ ಇದ್ದೇವೆ. ಆದರೆ, ಕೆಲವರು ಈ ಹೋರಾಟವನ್ನು ಶಮನ ಮಾಡುತ್ತಿದ್ದಾರೆ. ಉತ್ತರ ಕರ್ನಾಟಕ ಮಂದಿ ಹೋರಾಟ ಮಾಡಿ ಪ್ರತ್ಯೇಕ ಕರ್ನಾಟಕ ಬಯಲಾಟ ಅಕಾಡೆಮಿ ಸ್ಥಾಪಿಸಿಕೊಂಡಿದ್ದಾರೆ. ಅದರಂತೆ ಮೂಡಲಪಾಯ ಯಕ್ಷಗಾನ ಉಳಿವಿಗೆ ಪ್ರತ್ಯೇಕ ಅಕಾಡೆಮಿ ಸ್ಥಾಪಿಸಲು ಎಲ್ಲಾ ವಿದ್ವಾಂಸರು ಕೈಜೋಡಿಸುವಂತೆ ಮನವಿ ಮಾಡಿದರು.

ಮೈಸೂರು ರಂಗಾಯಣಕ್ಕೆ ದಕ್ಷಿಣ ರಾಜ್ಯಗಳಲ್ಲಿ ಸಾಂಸ್ಕೃತಿಕ ಲೋಕದ ಅಗ್ರಗಣ್ಯ ಸ್ಥಾನವಿದೆ. ಮೂಡಲಪಾಯ ಯಕ್ಷಗಾನ ಉಳಿವಿಗೆ ಮೈಸೂರು ರಂಗಾಯಣ ಧನಿಯಾಗಬೇಕು ಎಂದ ಅವರು, ಈ ಯಕ್ಷಗಾನ ಉಳಿವಿಗೆ ಹಿರಿಯ ವಿದ್ವಾಂಸರಾದ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಅವರ ಬೆಂಬಲವೂ ಇದೆ ಎಂದರು.

ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿ, ನಾನು ರಂಗಭೂಮಿ ಬರುವ ಮೊದಲು ಮೂಡಲಪಾಯ ಯಕ್ಷಗಾನ ಕಲಿತಿದ್ದೆ. ತದ ನಂತರ ರಂಗಭೂಮಿಗೆ ಬಂದಿದ್ದೇನೆ. ಹಾಗಾಗಿ ಮೂಡಲಪಾಲ ಯಕ್ಷಾನ ನನಗೇನು ಹೊಸತಲ್ಲ ಎಂದರು.

ಈ ವೇಳೆ ಕರ್ನಾಟಕ ಬಯಲಾಟ ಅಕಾಡೆಮಿ ಸದಸ್ಯೆ ಡಾ.ಹೆಚ್.ಆರ್.ಚೇತನ, ಕದಂಬ ರಂಗವೇದಿಕೆ ಅಧ್ಯಕ್ಷ ಡಾ.ರಾಜಶೇಖರ್ ಕದಂಬ, ಉಬ್ಬೂರು ರಂಗಪಣತೆ ಅಧ್ಯಕ್ಷ ರಾಮಣ್ಣ, ಯಕ್ಷರಂಗದ ಡಿ.ತಿಪ್ಪಣ್ಣ ಇದ್ದರು.

ಪತ್ರಕರ್ತರ ಕ್ರೀಡಾಕೂಟಕ್ಕೆ ಚಾಲನೆ



ಶಾಸಕ ಅನಿಲ್ ಚಿಕ್ಕಮಾದು ಪಾರಿವಾಳ ಹಾರಿಬಿಡುವ ಮೂಲಕ ಪತ್ರಕರ್ತರ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು.

ಮೈಸೂರು, ಆ.24– ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಆಯೋಜಿಸಿರುವ ಎರಡು ದಿನಗಳ ಪತ್ರಕರ್ತರ ಕ್ರೀಡಾಕೂಟಕ್ಕೆ ಶನಿವಾರ ಚಾಲನೆ ದೊರೆಯಿತು.

ನಗರದ ಓವಲ್ ಮೈದಾನದಲ್ಲಿ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಶಾಸಕ ಅನಿಲ್ ಚಿಕ್ಕಮಾದು, ಕ್ರೀಡಾಕೂಟಗಳು ಪರಸ್ಪರ ಉತ್ತಮ ಬಾಂಧವ್ಯ ಬೆಸೆಯಲು ಸಹಕಾರಿಯಾಗಿವೆ. ಅದರಲ್ಲೂ ಸದಾ ಒತ್ತಡದಲ್ಲಿರುವ ಪತ್ರಕರ್ತರು ಒಂದೆಡೆ ಸೇರಿ, ಕ್ರೀಡಾಕೂಟದಲ್ಲಿ ಭಾಗಿಯಾಗುವುದು ಒಳ್ಳೆಯ ಬೆಳವಣಿಗೆ ಎಂದರು.

ಮೈಸೂರಿನವರೇ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪತ್ರಕರ್ತರ ಸಂಘದ ಭವನ ನಿರ್ಮಾಣಕ್ಕೆ ಜಾಗ ಕಲ್ಪಿಸಿದ್ದು, ಈಗಿರುವ ಆಡಳಿತ ಮಂಡಳಿ ಹೆಚ್ಚಿನ ಮುತುವರ್ಜಿ ವಹಿಸಿ ಸಿದ್ದರಾಮಯ್ಯ ಅವರಿಂದಲೇ ಪತ್ರಕರ್ತರ ಸಂಘದ ನೂತನ ಭವನ ಉದ್ಘಾಟನೆ ಮಾಡಿಸಲು ಪ್ರಯತ್ನಿಸಬೇಕಿದೆ ಎಂದರು.

ಈ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಈಜುಪಟು ಕುಮಾರಿ ಎಸ್.ತಾನ್ಯಾ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಮೈಸೂರು ವಿವಿ ದೈಹಿಕ ವಿಭಾಗದ ಮುಖ್ಯಸ್ಥ ಡಾ.ಸಿ.ವೆಂಕಟೇಶ್, ವಿದ್ವಾನ್ ಇನ್ನೋವೇಟಿವ್ ಸಲ್ಯೂಷನ್ ಕಂಪನಿಯ ರೋಹಿತ್ ಎಂ. ಪಾಟೀಲ್, ಎಪಿಎನ್ ಪ್ರಾಪರ್ಟೀಸ್ ಮ್ಯಾನೇಜಿಂಗ್ ಪಾರ್ಟ್‌ನರ್ ಎ.ಪಿ.ನಾಗೇಶ್, ಮಹಾರಾಣಿ ಕಾಲೇಜು ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಭಾಸ್ಕರ್ ಹಾಗೂ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.